ಸಂಪುಟ: 05 ಸಂಚಿಕೆ: 300 ಪುಟಗಳು: 08 ಮಂಗಳವಾರ 13 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ನಂಬಿದವರ ಮನೆಯಲ್ಲಿ ವಿಷ ಕೊಟ್ಟರೂ ಕುಡಿಯಬಹುದು ಆದರೆ ನಂಬಿಕೆ ಇಲ್ಲದ ಮನಸ್ಸುಗಳು ಅಮೃತ ಕೊಟ್ಟರೂ ಕುಡಿಯುವಂತಿಲ್ಲ! ಆದರೇ ವಿಷವನ್ನೂ ಅಮೃತವಾಗಿಸುವ ಶಕ್ತಿಯಿರುವುದು 'ನಂಬಿಕೆ' ಮಾತ್ರ.

ಉದಯ ವಾಹಿನಿ

UV

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಬಿಡುಗಡೆಯಾಗದ ಗೃಹಲಕ್ಷ್ಮಿ ಹಣ , ಬೃಹತ್ ಪ್ರತಿಭಟನೆಗೆ ತಯಾರಿ

• ಉದಯವಾಹಿನಿ ಬೆಂಗಳೂರು

ಗೃಹಲಕ್ಷ್ಮಿ ಹಣ ಬಿಡುಗಡೆ ವಿಳಂಬವಾಗುತ್ತಿರುವುದರ ಹಿನ್ನೆಲೆಯಲ್ಲಿ ಆಡಳಿತರೂಢಾ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆಗೆ ಸಜ್ಜಾಗಿದ್ದು, ಹುಬ್ಬಳ್ಳಿಯಲ್ಲಿ ಮಹಿಳಾ ಮೋರ್ಚಾ ವತಿಯಿಂದ ಬೃಹತ್ ಸಮಾವೇಶ ನಡೆಸಲು ಮುಂದಾಗಿದೆ. ಮಧ್ಯ ಕರ್ನಾಟಕದ ವಾಣಿಜ್ಯ ರಾಜಧಾನಿ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಬಿಜೆಪಿ ಮಹಿಳಾ ಮೋರ್ಚಾ ಸಮಾವೇಶ ನಡೆಸಲು ಉದ್ದೇಶಿಸಲಾಗಿದ್ದು, ರಾಷ್ಟ್ರೀಯ ಮಹಿಳಾ ಮೋರ್ಚಾ ಅಧ್ಯಕ್ಷರು ಹಾಗೂ ಪ್ರಮುಖರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ.

ಆದರೆ ಸಮಾವೇಶ ನಡೆಸುವ ಬಗ್ಗೆ ದಿನಾಂಕ ಈವರೆಗೂ ಅಧಿಕೃತಗೊಂಡಿಲ್ಲ. ಸದ್ಯದಲ್ಲೇ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರು ಪಕ್ಷದ ಪದಾಧಿಕಾರಿಗಳ ಜೊತೆ ಚರ್ಚಿಸಿ ದಿನಾಂಕವನ್ನು ನಿಗದಿಪಡಿಸುವ ಸಂಭವವಿದೆ. ರಾಜ್ಯದಾದ್ಯಂತ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಕಾರ್ಯಕರ್ತರನ್ನು ಈ ಸಮಾವೇಶಕ್ಕೆ ಕರೆತರುವ ಉದ್ದೇಶವನ್ನು ಹಾಕಿಕೊಳ್ಳಲಾಗಿದೆ. ಆ ಮೂಲಕ ಸರ್ಕಾರದ ವೈಫಲ್ಯ ಮತ್ತು ಪಕ್ಷಸಂಘಟನೆಗೂ ಒತ್ತು ಕೊಡುವ ಉದ್ದೇಶವನ್ನು ಬಿಜೆಪಿ ಹೊಂದಿದೆ.

**ಪ್ರತಿಭಟನೆಗೆ ಬಿಜೆಪಿ ಸಜ್ಜು**



ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳ ಖಾತೆಗೆ ಹಣ ಬಾರದೇ ಇರುವವರನ್ನು ಸಮಾವೇಶಕ್ಕೆ ಆಹ್ವಾನಿಸಿ ಸಭೆಯಲ್ಲಿ ಅವರ ಮೂಲಕವೇ ಹಣ ತಡೆಹಿಡಿದವರನ್ನು ಬಹಿರಂಗಪಡಿಸುವ ಯೋಜನೆಯೂ ಇದೆ. ಇದಕ್ಕಾಗಿ ಎಷ್ಟು ಕಂತುಗಳಲ್ಲಿ ಹಣ ಬಿಡುಗಡೆಯಾಗಿದೆ ಎಂಬುದನ್ನು ದಾಖಲೆಗಳ ಸಮೇತ ಕಲೆ ಹಾಕಲು ಪಕ್ಷದ ಪ್ರಮುಖರಿಗೆ ಸೂಚಿಸಲಾಗಿದೆ.

ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದಲ್ಲಿ ಶಾಸಕ ಮಹೇಶ್ ಟೆಂಗಿನಕಾಯಿ ಅವರು ಮಹಿಳಾ ಅಭಿವೃದ್ಧಿ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಕೇಳಿದ ಪ್ರಶ್ನೆಗೆ ತಪ್ಪು ಮಾಹಿತಿ ಬಂದಿತ್ತು. ಇದು ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು.




2025ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣವನ್ನು ಫಲಾನುಭವಿಗಳ ಖಾತೆಗೆ ಹಾಕಿರಲಿಲ್ಲ. ಇಂತಿಷ್ಟು ಕಂತು ಹಣವನ್ನು ಫಲಾನುಭವಿಗಳ ಖಾತೆಗೆ ಜಮಾವಣೆ ಮಾಡಲಾಗಿದೆ ಎಂದು ಸಚಿವರು ಸಮರ್ಥನೆ ಮಾಡಿಕೊಂಡಿದ್ದರೂ ಎರಡು ತಿಂಗಳ ಬಾಕಿ ಹಣ ಪಾವತಿ ಮಾಡದಿರುವುದು ಬೆಳಕಿಗೆ ಬಂದಿತ್ತು. ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ದೊಡ್ಡ ಜಟಾಪಟಿಯೇ ನಡೆದು ಕೊನೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸದನದಲ್ಲಿ ಕ್ಷಮೆ ಕೇಳಿದ್ದರು. ಶೀಘ್ರದಲ್ಲೇ ಹಣ ಬಿಡುಗಡೆ ಮಾಡುವುದಾಗಿ ಸಚಿವರು ಹೇಳಿದ್ದರೂ ಈಗಲೂ ಕೂಡ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಿಲ್ಲ. ಇದನ್ನೇ ಅಸ್ತ್ರಮಾಡಿಕೊಂಡಿರುವ ಬಿಜೆಪಿ ಹುಬ್ಬಳ್ಳಿಯಲ್ಲಿ ಮಹಿಳಾ ಮೋರ್ಚಾ ಸಮಾವೇಶ ನಡೆಸುವ ಮೂಲಕ ಸರ್ಕಾರದ ವಿರುದ್ಧ ರಣಕಹಳೆ ಮೊಳಗಿಸಲಿದೆ.

## ನಯನಾ ಮೋಟಮ್ಮಗೆ ಅಶ್ಲೀಲ ಸಂದೇಶ : ಪುಂಡರ ವಿರುದ್ಧ ಗುಡುಗಿದ ಶಾಸಕಿ

• ಉದಯವಾಹಿನಿ ಚಿಕ್ಕಮಗಳೂರು

ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಅವರಿಗೆ ಫೇಸ್ ಬುಕ್, ಇನ್ಸಾಗ್ರಾಂನಲ್ಲಿ ಅಶ್ಲೀಲ ಮೆಸೇಜ್ ಕಾಟ ಆರಂಭವಾಗಿದೆ. ಇದರಿಂದ ಅವರು ಬೇಜಾರ್ ಆಗಿದ್ದಾರೆ. ಈಗಾಗಲೇ ಓರ್ವನ ವಿರುದ್ಧ ದೂರು ನೀಡಿ, ಜೈಲಿಗೆ ಹಾಕಿಸಿರುವ ಶಾಸಕಿ ಇನ್ನೂ ದೂರು ಕೊಡಲ್ಲ ಆ ಬಗ್ಗೆ ತಲೆಕೆಡಿಸಿಕೊಳ್ಳಲ್ಲ. ನನ್ನ ಕೆಲಸವನ್ನು ಮಾಡಿಕೊಂಡು ಹೋಗುತ್ತೇನೆ ಎಂದು ಗುಡುಗಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಜನ, ಎಂ.ಎಲ್.ಎ ಪದವಿ ಪಾರ್ಟ್ ಟೈಂ, ಸೋಶಿಯಲ್ ಮೀಡಿಯಾ ಫುಲ್ ಟೈಂ. ರಸ್ತೆಗೆ ಜಲ್ಲಿ ಹಾಕಿ ಹಾಗೇ ಬಿಟ್ಟಿದ್ದೀರಲ್ಲ, ಒಮ್ಮೆ ಅಲ್ಲಿ ಓಡಾಡಿ, ಇನ್ನೂ ಬ್ಯೂಟಿಫುಲ್ ಆಗಿರ್ತೀರಾ. ಈಯಮ್ಮನಿಗೆ ಮತ ಹಾಕಿ ಗೆಲ್ಲಿಸಿದ್ದಕ್ಕೆ ಸಾರ್ಥಕವಾಯಿತು. ಇವರೇನು ಶಾಸಕರೋ ಅಥವಾ ಸೋಶಿಯಲ್ ಮೀಡಿಯಾ ಪ್ರಭಾವಿತರಾ ಎಂದೆಲ್ಲಾ ಜನ ಮೆಸೇಜ್ ಮಾಡುತ್ತಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ, ಶಾಸಕರಾದ ಕೂಡಲೇ ನಮಗೆ ವೈಯಕ್ತಿಕ ಜೀವನ ಇರಲ್ವಾ? ಗಂಡ-ಮಕ್ಕಳು, ಸಂಸಾರ, ಸ್ನೇಹಿತರು ಇರಲ್ವಾ ಎಂದು ಕಿಡಿ ಕಾರಿದ್ದಾರೆ. ನಾವು ಕೆಲಸ ಮಾಡುತ್ತಿಲ್ಲವಾ ಎಂದು ಪೋಲಿಗಳ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

## ನಾನೇ ಸಾಕಿದ ಗಿಣಿ ಹದ್ದಾಗಿ ಕುಕ್ಕಿತು: ಶಿವಲಿಂಗೇಗೌಡಗೆ ರೇವಣ್ಣ ತಿರುಗೇಟು

• ಉದಯವಾಹಿನಿ ಹಾಸನ

ನಾನು ಸಾಕಿದ ಗಿಣಿ ಹದ್ದಾಗಿ ಕುಕ್ಕಿತು. ಈ ಜಿಲ್ಲೆಯಲ್ಲಿ ಕೆಲವರು ನಂಬಿಕೆ ದ್ರೋಹಿಗಳಿದ್ದಾರೆ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡರಿಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ತಿರುಗೇಟು ನೀಡಿದ್ದಾರೆ. ಬೇಲೂರಿನಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು. ಈ ವೇಳೆ ಇವತ್ತಿನ ರಾಜಕಾರಣಿಗಳು ನಂಬಿಕೆ ದ್ರೋಹಿಗಳಿದ್ದಾರೆ ಎಂದು ಸಾಣೇನಹಳ್ಳಿ ಸ್ವಾಮೀಜಿ ಹೇಳಿದ್ರು. ಅದು ರೇವಣ್ಣ ಅವರಿಗೆ ಅನ್ವಯ ಆಗಲ್ಲ ಅಂದ್ರು. ಸಾಣೇನಹಳ್ಳಿ ಸ್ವಾಮೀಜಿಗಳು ಹೇಳಿದ ಮಾತು ಸತ್ಯ. ಈ ಜಿಲ್ಲೆಯಲ್ಲೂ ಕೆಲವರು ನಂಬಿಕೆ ದ್ರೋಹಿಗಳಿದ್ದಾರೆ ಎಂದು ಶಿವಲಿಂಗೇಗೌಡರಿಗೆ ಕುಟುಕಿದರು. ಕೆಲವು ಟೈಂನಲ್ಲಿ ಕುಮಾರಣ್ಣ ಒಳ್ಳೆಯವರನ್ನ ನಂಬಲ್ಲ. ಕೆಲವರು ಅವರನ್ನು ನಂಬಿಸಿ ಬಿಡ್ತಾರೆ. ಈ ಜಿಲ್ಲೆಯಲ್ಲಿ ಜೆಡಿಎಸ್ ಮುಗಿಸಬೇಕು ಎಂದು ಕಾಂಗ್ರೆಸ್‌ನವರು ಪಣ ತೊಟ್ಟಿದ್ದಾರೆ. ನಿನ್ನೆ ಅರಸೀಕೆರೆಯಿಂದ ಪ್ರಾರಂಭ ಮಾಡಿದ್ದೇನೆ. ಕಾಂಗ್ರೆಸ್ 31 ಜಿಲ್ಲೆಯಲ್ಲಿ ಸಭೆ ಮಾಡಲಿಲ್ಲ. ದೇವೇಗೌಡರ ಶಕ್ತಿ ಕುಂದಿಸಲು ಹಾಸನದಲ್ಲಿ ಎರಡು ಸಭೆ ಮಾಡಿದರು ಎಂದು ಕಿಡಿಕಾರಿದರು.

## ಸಿಎಂ ಎದುರೇ ಜನ ನನ್ನ ಪರ ಕೂಗಿದ್ದು ಕಾಂಗ್ರೇಸ್, ಬಿಜೆಪಿಗೆ ಎಚ್ಚರಿಕೆ ಗಂಟೆ: ಯತ್ನಾಳ್

• ಉದಯವಾಹಿನಿ ವಿಜಯಪುರ

ಸಿಎಂ ಸಿದ್ದರಾಮಯ್ಯ ಎದುರೇ ಜನರು ನನ್ನ ಪರ ಕೂಗಿದ್ದು ಕಾಂಗ್ರೆಸ್, ಬಿಜೆಪಿಗೆ ಎಚ್ಚರಿಕೆ ಗಂಟೆಯಾಗಿದೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ಜಿಲ್ಲೆಯಲ್ಲಿ ಮಾಧ್ಯಮದವರೊಂದಿಗೆ ಕಾಂಗ್ರೆಸ್ ಜಿಲ್ಲಾ ನಾಯಕರಿಗೆ ಡಿಕೆಶಿ ಕ್ಲಾಸ್ ವಿಚಾರವಾಗಿ ಮಾತನಾಡಿದ ಅವರು, ಡಿಕೆಶಿ ಎದುರೇ ಜನ ನನ್ನ ಪರವಾಗಿ ಕೂಗೂ ಹಾಕಿದರೆ ಜಿಲ್ಲೆಯ ನಾಯಕರು ಏನ್ ಮಾಡಬೇಕು. ಸಿಎಂ ಎದುರು ಜನ ನನ್ನ ಪರ ಕೂಗಿದ್ದು ಕಾಂಗ್ರೆಸ್, ಬಿಜೆಪಿಗೆ ಎಚ್ಚರಿಕೆ ಗಂಟೆಯಾಗಿದೆ. ಜನರು ನನ್ನನ್ನು ಬೆಂಬಲಿಸಿದ್ದಾರೆ. ಅದು ನನ್ನ ಮೇಲಿರುವ ಅಭಿಮಾನ. ಜನರ ಪ್ರೀತಿ, ವಿಶ್ವಾಸಕ್ಕೆ ನಾನು ಧನ್ಯವಾದ ಸಲ್ಲಿಸುತ್ತೇನೆ. ನಮ್ಮನ್ನ, ಪ್ರತಾಪ್ ಸಿಂಹ ಅವರನ್ನು ಬಿಟ್ಟರೆ ಹುಷಾರ್ ಎಂದು ಬಿಜೆಪಿಗೆ ಎಚ್ಚರಿಕೆ ನೀಡಿದ್ದಾರೆ. ಸಿಎಂ ಕಾರ್ಯಕ್ರಮದಲ್ಲಿ ಹೊಗಳಿಕೆ ವಿಚಾರವಾಗಿ ಮಾತನಾಡಿದ ಅವರು, ಸಿದ್ದರಾಮಯ್ಯ ಕಾಂಗ್ರೆಸ್ ಸಿಎಂ ಅಲ್ಲ, ಅವರು ರಾಜ್ಯದ ಸಿಎಂ. ಮುಖ್ಯಮಂತ್ರಿ ನಮ್ಮ ಕ್ಷೇತ್ರಕ್ಕೆ ಬಂದಾಗ ಗೌರವ ಸಲ್ಲಿಸಬೇಕು. ಹೀಗಾಗಿ ನಾನು ಗೌರವ ಸಲ್ಲಿಸಿದ್ದೇನೆ. ಇದಕ್ಕೆ ಕೆಲವರಿಗೆ ನೋವಾದ್ರೆ ನಾನೇನು ಮಾಡೋಕಾಗಲ್ಲ. ನಾನು ಸಿದ್ದರಾಮಯ್ಯ ಅವರಿಗೆ ಗೌರವ ನೀಡಿದಂತೆ ಕಾಂಗ್ರೆಸ್‌ನವರು ಸಹ ಪ್ರಧಾನಿಗೆ ಗೌರವ ನೀಡುತ್ತಾರೆ ಎಂದು ತಿಳಿಸಿದ್ದಾರೆ.

# ಸಿಎಂ ಬದಲಾವಣೆ ಬಿಡಿ ಡಿಕೆಶಿ ಬಜೆಟ್‌ಗೆ ಅಡ್ಡಿ

• ಉದಯವಾಹಿನಿ ಬೆಂಗಳೂರು

ದೆಹಲಿಯಲ್ಲಿ ನಡೆದ ಒಪ್ಪಂದದಂತೆ ತಮಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಲೇಬೇಕು ಎಂದು ಪಟ್ಟು ಹಿಡಿದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಕ್ರಾಂತಿಯ ಬಳಿಕ ಸಿಡಿದೇಳುವ ಸಾಧ್ಯತೆ ಕಂಡು ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಲೇಬಾರದು ಎಂದು ಅಡ್ಡಿ ಪಡಿಸುತ್ತಿರುವುದು ಮತ್ತೊಂದು ರೀತಿಯ ಸಂಘರ್ಷಕ್ಕೆ ನಾಂದಿಯಾಗಿದೆ.

ಸಂಕ್ರಾಂತಿ ಬಳಿಕ ಮತ್ತೆ ಪವರ್ ಶೇರ್ ಸದ್ದು ಶುರು ಆಗಲಿದೆ. ನಾಯಕತ್ವ ಬದಲಾವಣೆ ಗೊಂದಲ ವಿಚಾರವಾಗಿ ಡಿಕೆಶಿ ಒತ್ತಡ ತಂತ್ರ ಪ್ರಯೋಗಿಸಲು ಮುಂದಾಗಿದ್ದು, ರಾಹುಲ್ ಗಾಂಧಿ ಭೇಟಿಗೆ ಸಮಯ ಕೇಳಿದ್ದಾರೆ. ಸಂಕ್ರಾತಿ ಮರುದಿನವೇ ದೆಹಲಿಗೆ ಹಾರಲಿರುವ ಡಿಕೆಶಿ, ರಾಹುಲ್ ಮುಂದೆ ಸಿಎಂ ಕ್ಲೈಮ್‌ಗೆ ತಂತ್ರ ರೂಪಿಸಿದ್ದಾರೆ ಎನ್ನಲಾಗಿದೆ.

ಜ.16, 22ರಂದು ದೆಹಲಿಗೆ ಟೂರ್ ಫಿಕ್ಸ್ ಮಾಡಿಕೊಂಡಿರುವ ಡಿಕೆಶಿ, ಒಂದು ದಿನ ರಾಹುಲ್ ಭೇಟಿಗೆ ಅವಕಾಶ ಕೇಳಿದ್ದಾರೆ. ಜನವರಿ 16 ರಂದು ಅಸ್ಸಾಂ ಚುನಾವಣೆ ಸಂಬಂಧಪಟ್ಟಂತೆ ವೀಕ್ಷಕರ ಸಭೆ ಇದೆ. ವೀಕ್ಷಕರ ಸಭೆ ಬಳಿಕ ರಾಹುಲ್ ಜೊತೆಗೆ ಪ್ರತ್ಯೇಕ ಚರ್ಚೆ ನಡೆಸಲು ಡಿ.ಕೆ ಶಿವಕುಮಾರ್ ಸಮಯ ಕೇಳಿದ್ದಾರೆ.

ಜ.22 ರಂದು ಕೂಡ ದೆಹಲಿಗೆ ಭೇಟಿ ನೀಡಲಿರುವ ಡಿ.ಕೆ ಶಿವಕುಮಾರ್, ಆಗಲೂ ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹಾಕಲು ಪ್ರಯತ್ನಿಸುತ್ತಿದ್ದಾರೆ. ಈ ತಿಂಗಳ ಅಂತ್ಯದ ವೇಳೆಗೆ ನಾಯಕತ್ವ ಗೊಂದಲಕ್ಕೆ ತೆರೆ ಬೀಳುವ ನಿರೀಕ್ಷೆ ಇದ್ದು, ನಾಯಕತ್ವ ಗೊಂದಲ, ಸಂಪುಟ ಪುನರ್ ರಚನೆ ವಿಚಾರ ಸೇರಿ ಎಲ್ಲದಕ್ಕೂ ತಿಂಗಳ ಅಂತ್ಯಕ್ಕೆ ತೆರೆ ಬೀಳುವ ಸಾಧ್ಯತೆ ಇದೆ.

**ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗಲ್ಲ:** ರಾಜಕೀಯ ಮಾಡಿ ನನ್ನನ್ನು ಜೈಲಿಗೆ ಹಾಕಿದಾಗ, ನನಗಾಗಿ ಪ್ರಾರ್ಥನೆ ಮಾಡಿದಿರಿ, ಹರಕೆ ಕಟ್ಟಿಕೊಂಡಿದ್ದೀರಿ. ಈಗಲೂ ಅದನ್ನೇ ಮಾಡುತ್ತಿದ್ದೀರಿ ಎಂಬ ಅರಿವು ನನಗಿದೆ. ಪಕ್ಷತೀತವಾಗಿ, ಸಮುದಾಯತೀತವಾಗಿ ಜನ ನನಗೆ ಒಳ್ಳೆಯದು ಬಯಸುತ್ತಿದ್ದಾರೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗುವುದಿಲ್ಲ. ನೀವು ಶ್ರಮಪಡಿ, ಶ್ರಮಕ್ಕೆ ಪ್ರತಿಫಲ ಸಿಗುತ್ತೆ. ಟೀಕೆಗಳು ಸಾಯುತ್ತವೆ, ನೀವು ಮಾಡುವ ಕೆಲಸಗಳು ಮಾತ್ರ ಉಳಿಯುತ್ತವೆ ಎಂದು ತಿಳಿಸಿದರು.

**ಆತ್ಮಸಾಕ್ಷಿ ಮೆಚ್ಚುವಂತೆ ಕೆಲಸ ಮಾಡಿ:** ನನ್ನ ಬಗ್ಗೆ ಬೇರೆಯವರಿಗಿಂತ ನಮ್ಮ ಸಮುದಾಯದ ಕೆಲವರೇ, ನಮ್ಮವರೇ ಅಸೂಯೆಯಿಂದ ಟೀಕೆ ಮಾಡುತ್ತಿದ್ದಾರೆ. ಹಿಂದೆಯಿಂದ, ಮುಂದೆಯಿಂದ ಚಾಕು ಹಾಕುತ್ತಿದ್ದಾರೆ. ರಾಜಕೀಯದಲ್ಲಿ ಇವೆಲ್ಲವೂ ಸಹಜ. ಇದಕ್ಕೆ ತಲೆ ಕೆಡಿಸಿಕೊಳ್ಳಬಾರದು. ನಾವು ಪ್ರಾಮಾಣಿಕವಾಗಿ ಇರಬೇಕು. ಕುಮಾರಸ್ವಾಮಿ ಸಿಎಂ ಆಗಿದ್ದಾಗ ನಾನು ಎಷ್ಟು ಪ್ರಾಮಾಣಿಕವಾಗಿ ಇದ್ದೆ ಎಂಬುದು ನನ್ನ ಆತ್ಮಸಾಕ್ಷಿಗೆ ಗೊತ್ತು. ಆದರೆ ಕುಮಾರಸ್ವಾಮಿ ಅವರು ನನ್ನ ವಿರುದ್ಧ ಬೆನ್ನಿಗೆ ಚೂರಿ ಹಾಕಿದ ಆರೋಪ ಮಾಡಿದರು. ನನಗೆ ಯಾರ ಪ್ರಮಾಣಪತ್ರವೂ ಬೇಡ. ನನ್ನ ಆತ್ಮಸಾಕ್ಷಿಯನ್ನು ನಾನು ಮೆಚ್ಚಿಸಿದರೆ ಸಾಕು. ನೀವು ನಿಮ್ಮ ಸ್ವಾಭಿಮಾನ, ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಿ ಎಂದು ಸಲಹೆ ನೀಡಿದರು.

### ಸಂಕ್ರಾಂತಿ ಬಳಿಕ ರಾಜ್ಯ ರಾಜಕೀಯದಲ್ಲಿ ಕ್ರಾಂತಿ

**ಸಂಕ್ರಾಂತಿ ಬಳಿಕ ರಾಜ್ಯ ರಾಜಕೀಯದಲ್ಲಿ ಕ್ರಾಂತಿ ವಿಚಾರ ಸರ್ಕಾರ ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ ನಮಗೊಂದು ಹೈಕಮಾಂಡ್ ಇದೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ದರಾಗಿದ್ದೇವೆ ಯಾರು ಮುಖ್ಯಮಂತ್ರಿ ಆಗ್ತಾರೆ, ಯಾರು ಇಳಿಯುತ್ತಾರೆ ಅಂತಾ ಯಾವುದು ಇಲ್ಲ ಹೈಕಮಾಂಡ್ ಸ್ಪಷ್ಟವಾಗಿ ನಮಗೆ ತಿಳಿಸಿದೆ ಸಿಎಂ ಬದಲಾವಣೆ ವಿಚಾರ ನಮಗೆ ಬಿಡಿ ಎಂದು ಹಾಗಾಗಿ ನಾವು ಹೈಕಮಾಂಡ್ ಮೇಲೆ ಬಿಟ್ಟಿದ್ದೆವೆ ಸಿದ್ದರಾಮಯ್ಯ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ದೇವರಾಜು ಅವರನ್ನು ಮೀರಿ ಕೆಲಸ ಮಾಡುತ್ತಿದ್ದಾರೆ ಅರಸು ಅವರು ಬುನಾದಿ ಹಾಕಿದ್ರು, ಸಿದ್ದರಾಮಯ್ಯ ಮನೆ ಕಟ್ಟಿದ್ದಾರೆ ಎಲ್ಲಾ ವರ್ಗದವರಿಗೂ ಸಮಾನತೆ ತಂದಿದ್ದಾರೆ ಸಿದ್ದರಾಮಯ್ಯ ಐದು ವರ್ಷ ಉಳಿತಾರೆ.**




1. **ಸಿದ್ರಾಮಯ್ಯ ಮೈಸೂರು, ಡಿಕೆಶಿ ಕನಕಪುರ ಇದ್ದಂಗೆ ನಮ್ಗೆ ಆಗ್ಬೇಕು ಎಂದ ಮಲ್ಲಿಕಾರ್ಜುನ ಖರ್ಗೆ**
2. **ಮುಂದೆಯೂ ನನ್ನ ಬಗ್ಗೆ ಪಕ್ಷದವರು ತೀರ್ಮಾನ ಮಾಡುತ್ತಾರೆ: ಡಿಕೆಶಿ ವಿಶ್ವಾಸ**
3. **ಖರ್ಗೆ ಭೇಟಿ ಮಾಡಿದ ಡಿಕೆಶಿ, ಕೆರಳಿದ ಕುತೂಹಲ**

### ನಿಮ್ಮ ಸಹೋದರ, ಸ್ನೇಹಿತನಾಗಿ ನಾನಿರುವೆ

ಹಣ್ಣು ಕೆಂಪಾಗಿ, ಚೆನ್ನಾಗಿದ್ದರೆ ಮಾತ್ರ ಕಲ್ಲು ಹೊಡೆಯುತ್ತಾರೆ. ನೀವು ಬಲಿಷ್ಠವಾಗಿದ್ದರೆ ಶತ್ರುಗಳು ಜಾಸ್ತಿ. ನಿಮ್ಮ ಮೇಲೆ ಅಸೂಯೆ ಪಡುವವರು ಹೆಚ್ಚು, ಹೀಗಾಗಿ ಎಚ್ಚರಿಕೆಯಿಂದ ಇರಿ. ನಾನು ವಯಸ್ಸಿನಲ್ಲಿ ಚಿಕ್ಕವನಾದರೂ, ಅನುಭವ ದೊಡ್ಡದಾಗಿದೆ. ನಿಮ್ಮ ಪರವಾಗಿ ನಾನು ಸಹೋದರನಾಗಿ, ಸ್ನೇಹಿತನ್ನಾಗಿ ಇರುತ್ತೇನೆ. ಊರಿನಲ್ಲಿ ಹುಟ್ಟಿದ ಹೋರಿಗಳೆಲ್ಲ ಬಸವ ಆಗುವುದಿಲ್ಲ. ಎಲ್ಲರೂ ನಾಯಕರಾಗಲು ಆಗುವುದಿಲ್ಲ. ನೀವು ಈ ದೇಶದ ಆಸ್ತಿ. ನಿಮಗೆ ಒಳ್ಳೆಯದಾಗಲಿ ಎಂದರು. ಉದ್ಯಮಿಗಳು ಸಾಲ ತಂದು ವ್ಯಾಪಾರ ಮಾಡಿ, ಬಡ್ಡಿ ಕಟ್ಟಿ, ಉದ್ಯೋಗಿಗಳಿಗೆ ವೇತನ ನೀಡಿ, ಜಿಎಸ್ ಟಿ ಕಟ್ಟಿ ಕೊನೆಗೆ ಉಳಿಯುವುದನ್ನು ಪಡೆಯುತ್ತೀರಿ. ನೀವು ಸರ್ಕಾರಕ್ಕೂ ಸಹಾಯ ಮಾಡುತ್ತೀರಿ. ಸಮಾಜಕ್ಕೂ ಸಹಾಯ ಮಾಡುತ್ತಿದ್ದೀರಿ. ಇಷ್ಟು ಧೈರ್ಯ ಮಾಡಿ ಉದ್ಯಮಿಗಳಾಗಿ ಶ್ರಮ ವಹಿಸುತ್ತಿರುವ ನಿಮ್ಮ ಜೊತೆ ನಾನಿದ್ದೇನೆ ಎಂದು ಹೇಳಲು ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ ಎಂದರು.

### ಸಿದ್ದರಾಮಯ್ಯ ಅವರ 17ನೇ ಬಜೆಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ದಾಖಲೆಯ 16 ಬಜೆಟ್ ಮಂಡಿಸಿದ್ದು, ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ್ದ ರಾಮಕೃಷ್ಣ ಹೆಗಡೆ (14) ದಾಖಲೆಯನ್ನು 2023ರಲ್ಲೇ ಸಿದ್ದರಾಮಯ್ಯ ಮುರಿದಿದ್ದಾರೆ. ಮಾರ್ಚ್ ಮೊದಲ ವಾರದಲ್ಲಿ ಮಂಡಿಸುವ ಬಜೆಟ್ ಅವರ ಪಾಲಿಗೆ 17ನೇ ಬಜೆಟ್ ಆಗಿರಲಿದೆ. ದೇಶದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ (18) ಮಂಡಿಸಿರುವ ಗುಜರಾತ್‌ನ ವಜುಭಾಯಿ ವಾಲಾ (ವಿ.ಆರ್. ವಾಲಾ) ಅವರ ದಾಖಲೆ ಸರಿಗಟ್ಟಲು ಇನ್ನೊಂದೇ ಬಜೆಟ್ ಮಂಡನೆ ಬಾಕಿ ಇದೆ. ಇನ್ನು 2026-27ನೇ ಸಾಲಿನ ಕೇಂದ್ರ ಬಜೆಟ್ ಅನ್ನು ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಫೆ.1 ರಂದು ಭಾನುವಾರ ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.

### ಶ್ರಮ ಇದ್ದಲ್ಲಿ ಫಲವಿದೆ

**ನೀವೆಲ್ಲರೂ ಒಕ್ಕಲಿಗರು. ಈ ಹೆಸರೇ ನಿಮ್ಮ ಸ್ವಾಭಿಮಾನದ ಬದುಕಿಗೆ ದೊಡ್ಡ ಶಕ್ತಿ. ನೀವು ಉದ್ಯಮಿಗಳಾಗಿ ಬೆಳೆಯಲು ಮುಂದಾಗಿದ್ದೀರಿ. ಅನೇಕರು ಯಶಸ್ವಿಯಾಗಿದ್ದೀರಿ. ಯುವ ಒಕ್ಕಲಿಗ ಉದ್ಯಮಿಗಳನ್ನು ಸೇರಿಸಿ ಉತ್ತೇಜನ ನೀಡಲಾಗುತ್ತಿದೆ. ಇಲ್ಲಿ ಉದ್ಯಮಿಗಳು ಪರಸ್ಪರ ಸೇರಿದ್ದಾರೆ. ನಾನು ಇಲ್ಲಿರುವ ಉದ್ಯಮಿಗಳ ಬಗ್ಗೆ ಮಾಹಿತಿ ಪಡೆದೆ. ಅವರು ಬಹಳ ಶ್ರಮ ಪಡುತ್ತಿದ್ದಾರೆ. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲ ಇದೆ. ಅವರಿಗೆ ಶುಭ ಹಾರೈಸುತ್ತಿದ್ದೇನೆ ಎಂದು ತಿಳಿಸಿದರು. ನೀವು ಯಾವುದೇ ಕಾರಣಕ್ಕೂ ಯಾರಿಗೂ ಸಾಲ ನೀಡಬೇಡಿ. ಕೊಟ್ಟರೆ ನಿಮ್ಮ ಕಥೆ ಮುಗೀತು. ನೀವುಗಳು ನಿಮ್ಮ ನೆರಳನ್ನು ನಂಬಬಾರದು. ನೀವು ಜನರನ್ನು ನಂಬಬೇಕು, ನಂಬಿಕೆಗೆ ಪೆಟ್ಟು ಬೀಳದಂತೆ ಎಚ್ಚರಿಕೆ ವಹಿಸಬೇಕು. ನೀವು ಉದ್ಯೋಗಿಗಳಲ್ಲ, ಹತ್ತಾರು ಜನರಿಗೆ ಉದ್ಯೋಗ ನೀಡುವವರು. ಹೀಗಾಗಿ ನನ್ನ ಅನುಭವದ ಸಲಹೆ ನೀಡುತ್ತಿದ್ದೇನೆ ಎಂದರು. ಪರೋಪಕಾರಾಯ ಫಲಂತಿ ವೃಕ್ಷಾಃ ಪರೋಪಕಾರಾಯ ವಹಂತಿ ನದ್ಯಃ। ಪರೋಪಕಾರಾಯ ದುಹಂತಿ ಗಾವಃ ಪರೋಪಕಾರಾರ್ಥಮಿದಂ ಶರೀರಂ. ಅಂದರೆ ನದಿ ನೀರು, ಮರದ ಹಣ್ಣು, ಹಸುವಿನ ಹಾಲು ಹೇಗೆ ಬೇರೆಯವರ ಉಪಕಾರಕ್ಕೆ ಇದೆಯೋ ಅದೇ ರೀತಿ ನಮ್ಮ ದೇಹ ಕೂಡ ಪರೋಪಕಾರಕ್ಕೆ ಇರಬೇಕು.**

### ಕೋಡಿಮಠ ಶ್ರೀ ಸ್ಫೋಟಕ ಭವಿಷ್ಯ: ಸಂಕ್ರಾಂತಿ

ನಂತರ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಬದಲಾವಣೆ ವಿಚಾರ ಸಂಬಂಧ ಕೋಡಿ ಮಠದ ಶ್ರೀಗಳು ಸ್ಫೋಟಕ ಭವಿಷ್ಯ ನುಡಿದಿದ್ದಾರೆ. ಸಂಕ್ರಾಂತಿ, ಯುಗಾದಿ ಅಲ್ಲ, ಬಜೆಟ್‌ವರೆಗೂ ಏನೂ ಮಾಡಲಾಗಲ್ಲ ಎಂದು ಕಾಗಿನೆಲೆ ಕನಕಪೀಠದ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ. ಜ್ಯೋತಿಷ್ಯದಲ್ಲಿ ನಂಬುವ ಜನ ಸಂಕ್ರಾಂತಿ, ಯುಗಾದಿ ಅಂತಾ ಹೇಳ್ತಾರೆ. ಸಂಕ್ರಾಂತಿಯಲ್ಲಿ ಸೂರ್ಯ, ಯುಗಾದಿಯಲ್ಲಿ ಚಂದ್ರನನ್ನು ಹಿಡಿದು ಜ್ಯೋತಿಷ್ಯ ಹೇಳುತ್ತಾರೆ. ಯುಗಾದಿ ಹಬ್ಬ ಮುಗಿಯುವವರೆಗೂ ಸಿದ್ದರಾಮಯ್ಯ ಇರಲಿದ್ದು, ಮುಂದಿನದು ಯುಗಾದಿ ನೋಡಿಕೊಂಡು ಹೇಳಬೇಕು ಎಂದಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒತ್ತಡದಲ್ಲಿರುವ ವಿಚಾರವಾಗಿಯೂ ಮಾತನಾಡಿದ ಅವರು, ಆತ ಒಳ್ಳೆಯ ಕಾರ್ಯಕರ್ತ, ಸಂಘಟನೆ ಮನುಷ್ಯ, ಹೋರಾಟಗಾರ. ಆದ್ರೆ, ಇಲ್ಲಿ ಸಂಘಟನೆ ಪ್ರಶ್ನೆ ಬರುವುದಿಲ್ಲ. ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟುಕೊಡ್ತಾರಾ? ಇಲ್ಲವಾ? ಅನ್ನೋದನ್ನ ನೋಡಿ ಹೇಳ್ತೇನೆ ಎಂದು ಕೋಡಿಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಶ್ರೀ ತಿಳಿಸಿದ್ದಾರೆ.

# ಜಿ ರಾಮ್ ಜಿ ಜಾಗೃತಿ ಅಭಿಯಾನ : ಬಿವೈವಿಗೆ ಮತ್ತೊಂದು ಅಗ್ನಿ ಪರೀಕ್ಷೆ

## ಪಕ್ಷದಲ್ಲಿ ಮುನಿಸಿಕೊಂಡಿರುವ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನಜಾಗೃತಿ ಅಭಿಯಾನವನ್ನು ಮುನ್ನಡೆಸುವುದು ಸವಾಲು

• ಉದಯವಾಹಿನಿ ಬೆಂಗಳೂರು

ಮೊದಲೇ ಒಡೆದ ಮನೆಯಂತಾಗಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಮತ್ತೊಂದು ಹೊಸ ಅಗ್ನಿಪರೀಕ್ಷೆ ಎದುರಾಗಿದೆ. ಅದೇನೆಂದರೆ ಕೇಂದ್ರ ಸರ್ಕಾರ ಇತ್ತೀಚಿಗೆ ಸಂಸತ್ತಿನ ಉಭಯ ಸದನಗಳಲ್ಲಿ ನರೇಗಾ ಯೋಜನೆಯನ್ನು ತಿದ್ದುಪಡಿ ಮಾಡಿ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ ವಿ ಬಿ ಜಿ ರಾಮ್ ಜಿ) ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಕೇಂದ್ರ ಸರ್ಕಾರದ ಈ ತಿದ್ದುಪಡಿಯ ಯೋಜನೆಗೆ ಪ್ರತಿಪಕ್ಷ ಕಾಂಗ್ರೆಸ್ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಬಿಜೆಪಿ ವಿರುದ್ಧ ದೊಡ್ಡ ಜನಾಂದೋಲನವನ್ನು ರೂಪಿಸಲು ಮುಂದಾಗಿದೆ.


ಇದರ ಬೆನ್ನಲ್ಲೇ, ಬಿಜೆಪಿ ಕೂಡ ಕಾಂಗ್ರೆಸ್‌ಗೆ ಪರ್ಯಾಯವಾಗಿ ಜ.15ರಿಂದ ಫೆ.28 ರವರೆಗೆ ರಾಜ್ಯದಾದ್ಯಂತ ಜನಜಾಗೃತಿ ಅಭಿಯಾನವನ್ನು ನಡೆಸಲು ತೀರ್ಮಾನಿಸಿದೆ. ಬಿಜೆಪಿ ಸಾರಥ್ಯ ವಹಿಸಿರುವ ಬಿ.ವೈ. ವಿಜಯೇಂದ್ರ ಅವರಿಗೆ ಪಕ್ಷದಲ್ಲಿ ಮುನಿಸಿಕೊಂಡಿರುವ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನಜಾಗೃತಿ ಅಭಿಯಾನವನ್ನು ಮುನ್ನಡೆಸುವುದು ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ. ರಾಜ್ಯಮಟ್ಟದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ಅಭಿಯಾನವನ್ನು ದೊಡ್ಡ ಮಟ್ಟದಲ್ಲಿ ನಡೆಸಿ ತಿರುಗೇಟು ನೀಡಬೇಕೆಂದು ರಾಷ್ಟ್ರೀಯ ನಾಯಕರು ರಾಜ್ಯ ಘಟಕಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಇದರ ಮೊದಲ ಭಾಗವಾಗಿಯೇ ಕಳೆದ ಶನಿವಾರ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಪ್ರತಿಪಕ್ಷದ ನಾಯಕರಾದ ಆರ್ ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವರ ಜೊತೆ ವಿಜಯೇಂದ್ರ, ಜಂಟಿ ಪತ್ರಿಕಾಗೋಷ್ಠಿ ನಡೆಸಿ ನಮ್ಮಲ್ಲಿ ಯಾವುದೇ ರೀತಿಯ ಒಡಕು ಇಲ್ಲ ಎಂಬ ಸಂದೇಶವನ್ನು ರವಾನಿಸುವ ಪ್ರಯತ್ನ ಮಾಡಿದ್ದರು. ಇದೀಗ ಜ.15ರಿಂದ ಆರಂಭವಾಗಲಿರುವ ಜನಜಾಗೃತಿ ಅಭಿಯಾನದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಸವಾಲು ರಾಜ್ಯಾಧ್ಯಕ್ಷರ ಮೇಲೆ ಇದೆ. ಬಿಜೆಪಿಯಲ್ಲಿ ಕೆಲವರನ್ನು ಹೊರತುಪಡಿಸಿದರೆ ಈಗಲೂ ಕೂಡ ವಿಜಯೇಂದ್ರ, ನಾಯಕತ್ವದ ವಿರುದ್ಧ ಅನೇಕರು ಅಪಸ್ವರ ತೆಗೆದಿದ್ದಾರೆ. ಪಕ್ಷದಲ್ಲಿ ಹಿಡಿತ ಸಾಧಿಸಿಕೊಳ್ಳಲು ಹಾಗೂ ರಾಜಕೀಯವಾಗಿ ಬೆಳೆಯಲು ಇತರ ಮುಖಂಡರ ವಿಶ್ವಾಸ ಅತ್ಯಂತ ಅಗತ್ಯವಾಗಿದೆ. ಸದ್ಯ ವಿಜಯೇಂದ್ರ ಪರ ಹಾಗೂ ವಿರುದ್ಧದ ಬಣ ಬಿಜೆಪಿಯಲ್ಲಿದೆ. ಹೈಕಮಾಂಡ್ ಘೋಷಣೆ ಮಾಡದಿದ್ದರೂ ಯಡಿಯೂರಪ್ಪ ಶಿಕಾರಿಪುರಕ್ಕೆ ವಿಜಯೇಂದ್ರ ಉತ್ತರಾಧಿಕಾರಿ ಎಂದಿದ್ದರೂ ಇದಕ್ಕೆ ಬಿಜೆಪಿ ಪಕ್ಷದಲ್ಲಿರುವವರು ಎಷ್ಟು ಜನರು ಸಮತಿ ಸೂಚಿಸುತ್ತಾರೆ ಎಂಬುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ತನ್ನ ನೆಲೆ ಭದ್ರಪಡಿಸಿಕೊಳ್ಳುವ ನಿಟ್ಟಿನಲ್ಲಿ ಇತರ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ವಿಜಯೇಂದ್ರ ಮುಂದಿರುವ ಸವಾಲಾಗಿದೆ. ಒಟ್ಟಿನಲ್ಲಿ ಈ ಎಲ್ಲಾ ಅಡೆತಡೆಗಳನ್ನು ಮೀರಿ ತಂದೆ ಕೊಟ್ಟ ಉತ್ತರಾಧಿಕಾರಿ ಪಟ್ಟವನ್ನು ವಿಜಯೇಂದ್ರ ಹೇಗೆ ನಿಭಾಯಿಸುತ್ತಾರೆ ಎಂಬುದಕ್ಕೆ ಕಾಲವೇ ಉತ್ತರಿಸಬೇಕು.

ಬಿಜೆಪಿಯಲ್ಲಿ ಯಡಿಯೂರಪ್ಪ ನಾಯಕತ್ವದ ಕಾರಣದಿಂದಾಗಿ ಬಹುತೇಕ ಲಿಂಗಾಯತ ಸಮುದಾಯ ಬಿಜೆಪಿ ಜೊತೆಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಯಡಿಯೂರಪ್ಪ ಅವರನ್ನು ಪಕ್ಷ ನಡೆಸಿಕೊಂಡ ರೀತಿ ಲಿಂಗಾಯತ ಸಮುದಾಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಯಡಿಯೂರಪ್ಪ ಹೊರತಾಗಿ ಲಿಂಗಾಯತ ಸಮುದಾಯಕ್ಕೆ ಪ್ರಬಲ ನಾಯಕತ್ವ ನೀಡುವ ಮತ್ತೋರ್ವ ಮುಖಂಡ ಬಿಜೆಪಿಯಲ್ಲಿಲ್ಲ. ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಅವರುಗಳ್ಯಾರೂ ಮಾಸ್ ಲೀಡರ್ ಆಗಿ ಹೊರ ಹೊಮಲು ಸಾಧ್ಯವಾಗಿಲ್ಲ. ಆದರೆ ಭವಿಷ್ಯದಲ್ಲಿ ಬಿಎಸ್‌ವೈ ಪುತ್ರ ವಿಜಯೇಂದ್ರಗೆ ಆ ಅವಕಾಶವೂ ಇದೆ. ಆದರೆ ಇದನ್ನು ಅವರು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದು ಮುಖ್ಯವಾಗಿದೆ. ವಿಜಯೇಂದ್ರ ಅವರ ಮುಂದೆ ಹಲವು ಸವಾಲುಗಳು ಇರುವುದಂತೂ ನಿಜ. ಅವರ ಪಕ್ಷದಲ್ಲಿನ ಹಿರಿಯರ ವಿಶ್ವಾಸವನ್ನು ಗಳಿಸಿಕೊಳ್ಳಬೇಕಿದೆ. ಲಿಂಗಾಯತರಂತೆ ಬಿಜೆಪಿಯಿಂದ ಚದುರಿ ಹೋಗಿರುವ ಎಡಗೈ ದಲಿತರು, ವಾಲ್ಮೀಕಿ ಅವರಲ್ಲದೆ ಬೊಮ್ಮಾಯಿ ಸರ್ಕಾರದ ಒಳ ಮೀಸಲಾತಿ ಪರಿಣಾಮವಾಗಿ ಮುನಿಸಿಕೊಂಡಿರುವ ಬಂಜಾರ ಮತ್ತಿತರ ಬಿಜೆಪಿಯ ಸಾಂಪ್ರದಾಯಕ ಮತಗಳನ್ನು ವಾಪಸ್ ಸೆಳೆಯಬೇಕಿದೆ.

### ಹೈಕಮಾಂಡ್ ಎಲ್ಲವನ್ನೂ ನಿರ್ಧಾರ ಮಾಡುತ್ತದೆ

**ಬಿಜೆಪಿಯಲ್ಲಿ ಹೈಕಮಾಂಡ್ ಎಲ್ಲವನ್ನೂ ನಿರ್ಧಾರ ಮಾಡುತ್ತದೆ. ಸಂಘ, ಪಕ್ಷದ ಸಂಘಟನೆಯನ್ನು ಮೀರಿ ಯಾರೂ ದೊಡ್ಡವರಲ್ಲ ಎಂಬ ವಾತಾವರಣ ಕೇಸರಿ ಪಕ್ಷದಲ್ಲಿದೆ. ಪಕ್ಷದ ಚೌಕಟ್ಟನ್ನು ಮೀರಿ ನಡೆಯುವುದು ಅಷ್ಟೊಂದು ಸುಲಭದ ಮಾತಲ್ಲ. ಕೇಡರ್ ಆಧರಿತ ಪಕ್ಷದಲ್ಲಿ ವೈಯಕ್ತಿಕ ವರ್ಚಸ್ಸುಜೊತೆಗೆ ಸಂಘಟನೆಯ ಬಲ, ಹೈಕಮಾಂಡ್ ಆಶೀರ್ವಾದವೂ ಅತೀ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಹೈಕಮಾಂಡ್ ಮನಗೆಲ್ಲುವುದು ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಮೇಲಿರುವ ದೊಡ್ಡ ಸವಾಲಾಗಿದೆ.**



**ರಾಜ್ಯದಾದ್ಯಂತ ಜನಜಾಗೃತಿ ಅಭಿಯಾನ**

| | | | | |
|---|---|---|---|---|
| ಈ ದಿನದ ದರ | ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹14,215/Gram(24ct) ₹13,030/Gram(22ct) | ಬೆಳ್ಳಿ: ₹270.00/Gram |

## ಬಿಎಂಟಿಸಿ ನಿರ್ವಾಹಕನ ಕಾಳಜಿ: ಕಳೆದು ಹೋಗಿದ್ದ ಉಡುಗೊರೆ ಪತ್ತೆ

• ಉದಯವಾಹಿನಿ, ಬೆಂಗಳೂರು

ದೆಹಲಿಯಿಂದ ಹಾಸನಕ್ಕೆ ತಲುಪಿಸಬೇಕಾಗಿದ್ದ ಉಡುಗೊರೆ ಪೆಟ್ಟಿಗೆಯನ್ನು ಪ್ರಯಾಣಿಕರೊಬ್ಬರು ನಗರದಲ್ಲಿ ಕಳೆದುಕೊಂಡಿದ್ದರು. ಆದರೆ, ಬಿಎಂಟಿಸಿ ನಿರ್ವಾಹಕರ ಕಾಳಜಿಯಿಂದಾಗಿ ಎರಡೇ ದಿನದಲ್ಲಿ ಉಡುಗೊರೆ ಪತ್ತೆಯಾಗಿದ್ದು ಅದನ್ನು ಮರಳಿ ಪ್ರಯಾಣಿಕನಿಗೆ ತಲುಪಿಸಲಾಗಿದೆ. ಹಾಸನದ ಡಾ.ಎಚ್. ಆರ್.ಸಂಯಮಿ ಲೆಕ್ಕಕಟ್ಟೆ ನಾಲ್ಕು ದಿನದ ಹಿಂದೆ ದೆಹಲಿಗೆ ಹೋಗಿದ್ದರು. ಪರಿಚಯಸ್ಥರೊಬ್ಬರು ಹಾಸನದ ಸ್ನೇಹಿತರಿಗೆ ಉಡುಗೊರೆ ರೂಪದಲ್ಲಿ ಮನೆ ಸ್ವಚ್ಛತೆಯ ರೋಬೋಟ್ ಯಂತ್ರ ತಲುಪಿಸಲು ಸಂಯಮಿ ಅವರಿಗೆ ನೀಡಿದ್ದರು.

ವಿಮಾನದಲ್ಲಿ ಬಂದಿಳಿದ ಅವರು ವಾಯುವಜ್ರ ಬಸ್‌ನಲ್ಲಿ ರಾಜಾಜಿನಗರ ನಿಲ್ದಾಣ ತಲುಪಿ, ಅಲ್ಲಿಂದ ಹಾಸನ ಬಸ್ ಹತ್ತಿದ್ದರು. ಸ್ವಲ್ಪ ದೂರ ಹೋದ ಮೇಲೆ ಅವರಿಗೆ ಉಡುಗೊರೆ ಮರೆತಿರುವುದು ನೆನಪಾಯಿತು. ಎಲ್ಲಿ ಬಿಟ್ಟಿದ್ದೇನೆ ಎನ್ನುವುದು ಅವರಿಗೆ ತಿಳಿದಿರಲಿಲ್ಲ. ಇದಕ್ಕಾಗಿ ಅವರು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಿದ್ದರು. ಇ-ಮೇಲ್ ಮೂಲಕ ದೂರು ನೀಡಿದರೂ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಸಂಯಮಿ ಮತ್ತೆ ದೆಹಲಿಗೆ ಹೋಗುವ ಸನ್ನಿವೇಶ ಎದುರಾಯಿತು. ನಗರದಲ್ಲಿ ವಾಯುವಜ್ರ ಬಸ್ ಹತ್ತಿ ವಿಮಾನ ನಿಲ್ದಾಣಕ್ಕೆ ಹೋಗುವಾಗ ನಿರ್ವಾಹಕ ಪರಮೇಶ್ವರ್ ಅವರೊಂದಿಗೆ ಉಡುಗೊರೆ ಬಾಕ್ಸ್ ವಿಷಯ ಚರ್ಚಿಸಿದ್ದರು. ವಿವರ ಪಡೆದ ಪರಮೇಶ್ವರ್ ಮಾಹಿತಿ ಹಂಚಿಕೊಂಡ ಕೆಲವೇ ನಿಮಿಷದಲ್ಲಿ ಬಾಕ್ಸ್ ಪತ್ತೆಯಾಗಿ ಫೋಟೊ ಸಿಕ್ಕಿತ್ತು. ಸಂಯಮಿ ಅವರು ಕತ್ರಿಗುಪ್ಪೆ ಡಿಪೊಗೆ ಸೇರಿದ ಕೆಐಎ 10/10 ಬಸ್‌ನಲ್ಲಿ ಬಾಕ್ಸ್ ಬಿಟ್ಟು ಹೋಗಿದ್ದು, ಅದು ಅಲ್ಲಿನ ಭದ್ರತಾ ಶಾಖೆಯಲ್ಲಿ ಇರುವುದು ಖಚಿತವಾಗಿತ್ತು.

# ಜಿಬಿಎ ಚುನಾವಣೆಗೆ ಕೊನೆಗೂ ಮುಹೂರ್ತ ಫಿಕ್ಸ್

### ಮಾರ್ಚ್ 16 ರೊಳಗೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಖಡಕ್ ಸೂಚನೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ



ಬಹುಕಾಲದಿಂದ ನೆನಗುದಿಗೆ ಬಿದ್ದಿದ್ದ ಬೆಂಗಳೂರಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಇದೀಗ ಮುಹೂರ್ತ ನಿಗದಿಯಾಗುವ ಲಕ್ಷಣಗಳು ಗೋಚರಿಸಿವೆ. ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಅಡಿಯಲ್ಲಿ ಬರುವ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾರ್ಡ್‌ಗಳ ಮರುವಿಂಗಡಣೆ ಮತ್ತು ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಸುಪ್ರೀಂ ಕೋರ್ಟ್ ಸ್ಪಷ್ಟ ವೇಳಾಪಟ್ಟಿಯನ್ನು ನಿಗದಿಪಡಿಸಿದೆ. ಜನವರಿ 12ರಂದು ಸೋಮವಾರ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ನೇತೃತ್ವದ ಪೀಠವು ಈ ಕುರಿತು ವಿಚಾರಣೆ ನಡೆಸಿದ್ದು, ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ಮಹತ್ವದ ನಿರ್ದೇಶನಗಳನ್ನು ನೀಡಿದೆ.

**ವಾರ್ಡ್ ಮರುವಿಂಗಡಣೆಗೆ ಫೆಬ್ರವರಿ 20ರ ಗಡುವು :** ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎ) ಅಡಿಯಲ್ಲಿ ರಚನೆಯಾಗಲಿರುವ ಐದು ಮಹಾನಗರ ಪಾಲಿಕೆಗಳ ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಅದರ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2026ರ ಫೆಬ್ರವರಿ 20ರವರೆಗೆ ಕಾಲಾವಕಾಶ ನೀಡಿದೆ. ಇದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ನೀಡಲಾದ ಕೊನೆಯ ಅವಕಾಶವಾಗಿದೆ ಎಂದು ಕೋರ್ಟ್ ತಿಳಿಸಿದೆ.

**ಮೇ ತಿಂಗಳಲ್ಲಿ ಮೊಳಗಲಿದೆ ಚುನಾವಣಾ ಕಹಳೆ:** ಮಕ್ಕಳ ಶಾಲಾ ಪರೀಕ್ಷೆಗಳು ಮುಗಿದ ನಂತರವೇ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಅದರಂತೆ, 2026ರ ಮೇ 26 ರಿಂದ ಚುನಾವಣಾ ಪ್ರಕ್ರಿಯೆಗಳು ಅಧಿಕೃತವಾಗಿ ಆರಂಭವಾಗಲಿವೆ. ಈ ಆದೇಶದ ಮೂಲಕ, ಕಳೆದ 5ಕ್ಕೂ ಹೆಚ್ಚು ಹಲವು ವರ್ಷಗಳಿಂದ ಮುಂದೂಡಲ್ಪಡುತ್ತಿದ್ದ ಬೆಂಗಳೂರಿನ ಸ್ಥಳೀಯ ಆಡಳಿತದ ಚುನಾವಣೆಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಮಾರ್ಗಸೂಚಿ ಮತ್ತು ಕಾಲಮಿತಿಯನ್ನು ಹಾಕಿಕೊಟ್ಟಂತಾಗಿದೆ.

2015ರಲ್ಲಿ ಕೊನೆಯ ಬಾರಿಗೆ ಬಿಬಿಎಂಪಿ ಚುನಾವಣೆ ನಡೆದಿತ್ತು. ಅಂದುಕೊಂಡಂತೆ ನಡೆದಿದ್ದರೆ, 2020ರಲ್ಲಿ ಮುಂದಿನ ಚುನಾವಣೆ ನಡೆಯಬೇಕಾಗಿತ್ತು. ಆದರೆ ಕೋರೊನಾ ನೆಪದಲ್ಲಿ ಮುಂದೂಡಲ್ಪಟ್ಟ ಚುನಾವಣೆ ಮುಂದೆ ಹಲವು ಕಾರಣಗಳಿಂದ ಮುಂದೂಡಿಕೆಯಾಗುತ್ತಲೇ ಬಂತು. ಇದೀಗ ಜಿಬಿಎ ಅಸ್ತಿತ್ವಕ್ಕೆ ಬಂದಿದ್ದು, ಐದು ನಗರ ಪಾಲಿಕೆಗಳು ರಚನೆಯಾಗಿವೆ. ಈಗಾಗಲೇ ವಾರ್ಡ್ ರಚನೆಯಾಗಿದ್ದು, ಮೀಸಲಾತಿ ಕರಡುಪಟ್ಟಿಯೂ ಪ್ರಕಟವಾಗಿದೆ.

**ಮತದಾರರ ಪಟ್ಟಿ ಪ್ರಕಟ**

**ನ್ಯಾಯಾಲಯದ ವಿಚಾರಣೆ ವೇಳೆ ರಾಜ್ಯ ಚುನಾವಣಾ ಆಯೋಗವು (ಎಸ್‌ಇಸಿ) ಮತದಾರರ ಪಟ್ಟಿಯ ಬಗ್ಗೆ ಮಾಹಿತಿ ನೀಡಿದ್ದು, 2026ರ ಮಾರ್ಚ್ 16ರೊಳಗೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವುದಾಗಿ ವಾಗ್ದಾನ ನೀಡಿದೆ.**

**ಜೂನ್ 30ಕ್ಕೆ ಡೆಡ್‌ಲೈನ್**

**ಯಾವುದೇ ಕಾರಣಕ್ಕೂ ಚುನಾವಣಾ ಪ್ರಕ್ರಿಯೆ ತಡವಾಗಬಾರದು ಎಂದು ಎಚ್ಚರಿಸಿರುವ ಸುಪ್ರೀಂ ಕೋರ್ಟ್, ಎಲ್ಲಾ ಹಂತದ ಚುನಾವಣಾ ಪ್ರಕ್ರಿಯೆಗಳು 2026ರ ಜೂನ್ 30ರೊಳಗೆ ಮುಕ್ತಾಯಗೊಳ್ಳಲೇಬೇಕು ಎಂದು ಖಡಕ್ ಆದೇಶ ನೀಡಿದೆ.**

## ಸೇವಾ ಕಾರ್ಯಗಳಿಂದ ಕಷ್ಟದಲ್ಲಿರುವವರಿಗೆ ಸ್ಪಂದಿಸುವ ಗುಣಬೆಳೆಸಿಕೊಳ್ಳಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸೇವಾ ಕಾರ್ಯಗಳಿಂದ ಕಷ್ಟದಲ್ಲಿರುವವರಿಗೆ ಸ್ಪಂದಿಸುವ ಗುಣಬೆಳೆಸಿಕೊಳ್ಳಿ ಎಂದು ಮಾಜಿ ಶಾಸಕ , ಬೆಂ.ನಗರ ಅಧ್ಯಕ್ಷರಾದ ರಮೇಶ್ ಗೌಡ ತಿಳಿಸಿದರು. ಮಹದೇವಪುರ ಕ್ಷೇತ್ರದ ಕಾಡುಗುಡಿಯಲ್ಲಿ ಜೆಡಿಎಸ್ ಪಕ್ಷದ ನೂತನ ಕಛೇರಿ ಉದ್ಘಾಟನೆ ಹಾಗೂ ಓಬಳೇಶ್ ಅವರ ಸೇವಾದಿನದ ಅಂಗವಾಗಿ ಮಹಿಳೆಯರಿಗೆ ಬಾಗಿನ, ದಿನಸಿ ಕಿಟುಗಳನ್ನು ವಿತರಣೆ ಮಾಡಿ ಮತನಾಡಿದ ಅವರು, ಸೇವೆಯಿಂದ ಭಗವಂತನನ್ನು ಕಾಣುವ ಮಾರ್ಗವನ್ನು ಕ್ಷೇತ್ರ ಅಧ್ಯಕ್ಷ ಓಬಳೇಶ್ ಅರಿತುಕೊಂಡ ಜನರಿಗೆ ಕೈಲಾದ ಸಹಕಾರ ಮಾಡುವುದು ನಿಜಕ್ಕೂ ಶ್ಲಾಘನೀಯ ಕಾರ್ಯವೆಂದರು. ಮಹದೇವಪುರ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡಿ ಮುಂಭಾರುವ ಚುನಾವಣೆಗೆ ಸಿದ್ಧರಾಗುವಂತೆ ಸಲಹೆ ನೀಡಿದರು. ಮಹದೇವಪುರ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಡಾ. ಓ.ಪಿ ಓಬಳೇಶ್ ಮತನಾಡಿ, ಯಾವುದೇ ಸಮಯದಲ್ಲೂ ಪಕ್ಷದ ಸಿದ್ಧಾಂತಕ್ಕೆ ಬದ್ಧನಾಗಿ ಪಕ್ಷ ಸಂಘಟನೆ ಮಾಡಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಕಾರ್ಯವನ್ನು ಮಾಡುವ ಪ್ರಯತ್ನಲ್ಲಿರುವೆ ಎಂದು ನುಡಿದರು. ಇದೇವೇಳೆ ನೂರಾರು ಜನರಿಗೆ ದಿನಸಿ ಕಿಟ್ ವಿತರಣೆ, ಮಹಿಳೆಯರಿಗೆ ಸೀರೆ, ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ, ಅನ್ನ ದಾಸೋಹವನ್ನು ಮಾಡಲಾಯಿತು. ಉಸ್ತುವಾರಿ ನಾಗೇಶ್ವರ್, ದಕ್ಷಿಣ ಲೋಕಸಭಾ ಅಧ್ಯಕ್ಷರಾದ ತುಳಸಿ ರಾಮ್, ಪರಿಶಿಷ್ಟ ಪಂಗಡ ಅಧ್ಯಕ್ಷರು ಜನಾರ್ಧನ, ಮುಖಂಡರಾದ ದೊಡ್ಡಗುಬ್ಬಿ ಚಂದ್ರಶೇಖರ್, ಮುನಿವೆಂಕಟಪ್ಪ, ಮುನಿರಾಜು, ಗಂಗಾಧರ, ಮಹೇಂದ್ರ, ವಿಜಯಕುಮಾರ್, ಶೋಭಾ, ಸೋಮಣ್ಣ, ಮುರಳಿ ಗೌಡ, ದುದ್ದಜಯರಾಮ್, ವೈ.ಕಾಂತರಾಜು, ಸಿದ್ದಪ್ಪನಾಯಕ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಇದ್ದರೂ.

## ಮುಖ್ಯಮಂತ್ರಿ ಪರವಾಗಿ ದಲಿತರ ರ್‍ಯಾಲಿ ಯೋಜನೆ

• ಉದಯವಾಹಿನಿ, ಬೆಂಗಳೂರು



ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶಿಸುವವರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ನಾಯಕತ್ವದ ಹಗ್ಗಜಗ್ಗಾಟ ಕಡಿಮೆಯಾಗುವುದಿಲ್ಲ ಎಂಬ ಮಾತು ಕೇಳಿ ಬರುತ್ತಿವೆ.

ಹೀಗಾಗಿ ದಲಿತರ ಒಂದು ಭಾಗವು ತಮ್ಮ ಸಮುದಾಯದ ಮುಖ್ಯಮಂತ್ರಿಗಾಗಿ ಒತ್ತಾಯಿಸಲು ರ್‍ಯಾಲಿಯನ್ನು ಯೋಜಿಸುತ್ತಿದೆ. ಹಳೆಯ ಮೈಸೂರು ಪ್ರದೇಶದಲ್ಲಿ ನಡೆಯಲಿರುವ ರ್‍ಯಾಲಿಗೆ ಅನುಮತಿ ನೀಡುವಂತೆ ಕರ್ನಾಟಕದ ಪ್ರಮುಖ ದಲಿತ ಮುಖವಾಗಿರುವ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರ ಮೇಲೆ ಹಲವಾರು ದಲಿತ ನಾಯಕರು ಒತ್ತಡ ಹೇರುತ್ತಿದ್ದಾರೆ. ಚಾಮರಾಜನಗರದ ಪಾಪು ಎಂದೂ ಕರೆಯಲ್ಪಡುವ ವೆಂಕಟರಮಣ ಸ್ವಾಮಿ ನೇತೃತ್ವದ ಗುಂಪು ತುಮಕೂರಿನಲ್ಲಿ ಪರಮೇಶ್ವರ್ ಅವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ದಿನಾಂಕ ಕೋರಿದ್ದಾರೆ. ಆದರೆ ಪರಮೇಶ್ವರ ಇನ್ನೂ ಸ್ವಲ್ಪ ಸಮಯ ಕಾಯುವಂತೆ ಸಲಹೆ ನೀಡಿದರು.

ಸಿದ್ದರಾಮಯ್ಯ ಪಾಳಯದ ಸದಸ್ಯರಾಗಿರುವ ಪರಮೇಶ್ವರ ದಲಿತ ರ್‍ಯಾಲಿಗೆ ಬೆಂಬಲ ನೀಡಲು ಹಿಂಜರಿಯುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ನೆಹರು-ಗಾಂಧಿ ಕುಟುಂಬದ ನಿಷ್ಠಾವಂತ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಪ್ತರಾಗಿರುವ ಪರಮೇಶ್ವರ ಅವರ ವಿರುದ್ಧ ಹೋಗಲು ಸಿದ್ಧರಿಲ್ಲ ಎಂದು ಅವರು ಹೇಳಿದರು. ಅವರು ಖರ್ಗೆ ಅವರನ್ನು ಭೇಟಿಯಾಗಿದ್ದಾರೆ, ಆದರೆ ಅವರ ಭೇಟಿಯನ್ನು ಸೌಜನ್ಯದ ಭೇಟಿ ಎಂದಿದ್ದಾರೆ. ಆದರೆ ಭೇಟಿಯ ವೇಳೆ ಏನಾಯಿತು ಎಂಬ ಬಗ್ಗೆ ತಿಳಿದಿಲ್ಲ.

ಏತನ್ಮಧ್ಯೆ, ಸಿದ್ದರಾಮಯ್ಯ ಅವರನ್ನು ಉನ್ನತ ಹುದ್ದೆಯಲ್ಲಿ ಮುಂದುವರಿಸಲು ಬೆಂಬಲಿಸಲು ಅಹಿಂದ ಸಂಘಟನೆಗಳು ಮೈಸೂರು ಮತ್ತು ಹುಬ್ಬಳ್ಳಿ ಸೇರಿದಂತೆ ರಾಜ್ಯಾದ್ಯಂತ ರ್‍ಯಾಲಿಗಳನ್ನು ನಡೆಸಲು ಸಿದ್ಧತೆಗಳನ್ನು ಪ್ರಾರಂಭಿಸಿವೆ.

**ಪರಮೇಶ್ವರ ಅವರು ಕಾಂಗ್ರೆಸ್‌ನ ಕಟ್ಟಾ ನಿಷ್ಠಾವಂತರಾಗಿರುವುದರಿಂದ, ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾದರೆ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಡಿಎಸ್‌ಎಸ್ ನಾಯಕ ಮಾವಳ್ಳಿ ಶಂಕರ್ ಹೇಳಿದರು ಈ ಬೇಡಿಕೆಗೆ ಪುಷ್ಟಿ ನೀಡಲು ಶೀಘ್ರದಲ್ಲೇ ದಲಿತ ರ್‍ಯಾಲಿಯನ್ನು ಆಯೋಜಿಸಲಾಗುವುದು ಎಂದು ಹೇಳಿದರು. ಸ್ವಾತಂತ್ರ್ಯದ ನಂತರ ಅನೇಕ ಹಿರಿಯ ದಲಿತರಿಗೆ ಉನ್ನತ ಹುದ್ದೆ ಅಸ್ಪಷ್ಟವಾಗಿದೆ. ಈ ಬಾರಿ ಹಾಗಾಗಬಾರದು ಎಂದು ಅವರು ಹೇಳಿದರು.**

## ಪೊಲೀಸರಿಗೆ ಮಾಹಿತಿ ನೀಡದ ಮನೆ ಮಾಲೀಕರೊಬ್ಬರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು



ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆ ನೀಡಿದ ಬಳಿಕ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದ ಮನೆ ಮಾಲೀಕರೊಬ್ಬರ ವಿರುದ್ಧ ವೈಟ್‌ಫೀಲ್ಡ್ ಠಾಣೆ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ನಾಗೊಂಡನಹಳ್ಳಿ ನಿವಾಸಿ ರಾಘವೇಂದ್ರ ಎಂಬುವರ ವಿರುದ್ಧ ವಲಸೆ ಮತ್ತು ವಿದೇಶಿಯರ ಕಾಯ್ದೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಮಾಹಿತಿ ನೀಡದೆ ವಂಚಿಸಿದ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ.

ರಾಘವೇಂದ್ರ ಅವರು ತಮ್ಮ ಮನೆಯನ್ನು ಆಫ್ರಿಕಾದ ಇಬ್ಬರು ಮಹಿಳೆಯರಿಗೆ ಬಾಡಿಗೆಗೆ ನೀಡಿದ್ದರು. ಆದರೆ, ಕಾನೂನಿನ ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ, ವಿದೇಶಿಯರ ಪ್ರಾದೇಶಿಕ ನೋಂದಣಿ ಪ್ರಾಧಿಕಾರಕ್ಕೆ ಎಫ್‌ಆರ್‌ಆರ್‌ಒ 'ಸಿ' ಫಾರ್ಮ್ ಅನ್ವಯ ಮಾಹಿತಿ ನೀಡಿರಲಿಲ್ಲ. ಹಾಗಾಗಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ದೇಶದ ಯಾವುದೇ ಭಾಗದಲ್ಲಿ ವಿದೇಶಿಯರು ವಾಸಿಸುತ್ತಿದ್ದರೂ ಎಫ್‌ಆರ್‌ಆರ್‌ಒ ಹಾಗೂ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕು. ವೀಸಾ ಅವಧಿ ಮುಗಿದಿದ್ದರೂ ಅಕ್ರಮವಾಗಿ ವಾಸಿಸುತ್ತಿರುವ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದರು.

## ಬೆಂಗಳೂರಿನಲ್ಲಿ ಪ್ರತಿ ನಿಮಿಷಕ್ಕೆ 14 ಸಂಚಾರ ನಿಯಮ ಉಲ್ಲಂಘನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿಗರು ಪ್ರತಿ ನಿಮಿಷಕ್ಕೆ ಸರಾಸರಿ 14 ಸಂಚಾರ ಉಲ್ಲಂಘನೆಗಳನ್ನು ಮಾಡುತ್ತಾರೆ, ನಗರದಲ್ಲಿ ಪ್ರತಿದಿನ ಸುಮಾರು 21,000 ಉಲ್ಲಂಘನೆಗಳು ವರದಿಯಾಗುತ್ತವೆ. ಬೆಂಗಳೂರು ಸಂಚಾರ ಪೊಲೀಸರು (ಬಿಟಿಪಿ) ನವೆಂಬರ್ 2025 ರವರೆಗೆ 69,88,400 ಸಂಚಾರ ಉಲ್ಲಂಘನೆಗಳನ್ನು ದಾಖಲಿಸಿದ್ದಾರೆ, ಇದರಲ್ಲಿ ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸಿದ 31,61,183 ಪ್ರಕರಣಗಳು ಸೇರಿವೆ. ಬೆಂಗಳೂರು ಸಂಚಾರಿ ಪೊಲೀಸರ ದತ್ತಾಂಶದ ಪ್ರಕಾರ, 69,88,400 ಉಲ್ಲಂಘನೆಗಳಲ್ಲಿ ಶೇ. 87 ರಷ್ಟು ಕೃತಕ ಬುದ್ಧಿಮತ್ತೆ (ಎಐ) ಕ್ಯಾಮೆರಾಗಳನ್ನು ಬಳಸಿಕೊಂಡು ಪತ್ತೆ ಮಾಡಲಾಗಿದೆ, ಉಳಿದವುಗಳನ್ನು ಸಂಚಾರ ಪೊಲೀಸ್ ಸಿಬ್ಬಂದಿ ಸ್ಥಳದಲ್ಲೇ ದಾಖಲಿಸಿದ್ದಾರೆ.

ಹೆಲ್ಮೆಟ್ ಇಲ್ಲದೆ ಸವಾರರ 20,33,259 ಪ್ರಕರಣಗಳು ಮತ್ತು ಹಿಂಬದಿ ಸವಾರರು ಹೆಲ್ಮೆಟ್ ಧರಿಸದ 11,27,924 ಪ್ರಕರಣಗಳನ್ನು ಪೊಲೀಸರು ದಾಖಲಿಸಿದ್ದಾರೆ ಎಂದು ದತ್ತಾಂಶವು ತೋರಿಸುತ್ತದೆ. ಇದಲ್ಲದೆ, 11,16,278 ತಪ್ಪು ಪಾರ್ಕಿಂಗ್ ಪ್ರಕರಣಗಳನ್ನು ಸಹ ದಾಖಲಿಸಲಾಗಿದೆ. ಸಂಚಾರ ನಿಯಮಗಳನ್ನು ಪಾಲಿಸುವುದರಿಂದ ಅಪಘಾತಗಳನ್ನು ತಡೆಯಲು ಮತ್ತು ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಸಹಾಯವಾಗುತ್ತದೆ ಎಂದು ಉಪ ಪೊಲೀಸ್ ಆಯುಕ್ತ (ಡಿಸಿಪಿ) ಶ್ರೇಣಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ ಅನೇಕ ರಸ್ತೆ ಬಳಕೆದಾರರು ನಿಯಮಗಳನ್ನು ಪಾಲಿಸಲು ಬದ್ಧರಾಗಿಲ್ಲ. ಸಂಚಾರ ಶಿಸ್ತು ಕುಟುಂಬಗಳಿಂದಲೇ ಪ್ರಾರಂಭವಾಗಬೇಕು ಎಂದು ಅಧಿಕಾರಿ ತಿಳಿಸಿದ್ದಾರೆ.

## ರಂಗನಹಳ್ಳಿ ಶ್ರೀ ಶಿವ ಸತ್ಯಶನೇಶ್ವರ ಸ್ವಾಮಿ ಜಾತ್ರೆಗೆ ಶ್ರೀ ಶ್ರೀ ನಿಶ್ಚಲಾನಂದ ಮಹಾ ಸ್ವಾಮಿಜಿಯವರಿಗೆ ಆಹ್ವಾನ



**ಶ್ರೀ ಶನೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಕಳೆದ 22 ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದು ಈ ಸಮಾರಂಭದಲ್ಲಿ ನಡೆಯುವ ಈ ಸಮಾರಂಭಕ್ಕೆ ಆಗಮಿಸುವ ರಾಜ್ಯದ ಖ್ಯಾತ ಪೀಠಾಧಿಪತಿಗಳು , ತಿಪಟೂರು ನೊಣವಿನಕೆರೆ ತಾಲ್ಲೂಕಿನ ಹಲವು ಆಧ್ಯಾತ್ಮಿಕ ಶಕ್ತಿಯುತ ಗ್ರಾಮದೇವತೆಗಳ ಸಂಖ್ಯೆಯನ್ನು ಕೇಳಿ ಶ್ರೀಗಳು ಸಂತಸ ವ್ಯಕ್ತಪಡಿಸಿದರು**

**-ಶ್ರೀ ಶ್ರೀ ಡಾ. ನಿಶ್ಚಲಾನಂದ ಮಹಾಸ್ವಾಮೀಜಿಗಳು**

• ಬೆಂಗಳೂರು ಉದಯವಾಹಿನಿ

ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ರಂಗನಹಳ್ಳಿಯ ಶ್ರೀ ಶಿವ ಸತ್ಯ ಶನೇಶ್ವರ ಸ್ವಾಮಿ. ಶ್ರೀ ಆಂಜನೇಯ ಸ್ವಾಮಿ ಶ್ರೀ ಆದಿಶಕ್ತಿ ದುರ್ಗಾಪರಮೇಶ್ವರಿ ದೇವಿ ಹಾಗೂ ಶ್ರೀ ಆದಿ ಪರಾಶಕ್ತಿ ಕಾಳಿಕಾದೇವಿಯವರ 22ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಬೆಂಗಳೂರಿನ ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾಕ್ಟರ್ ನಿಶ್ಚಲಾನಂದ ಮಹಾಸ್ವಾಮೀಜಿಯವರಿಗೆ ಆಹ್ವಾನ ನೀಡಲಾಯಿತು.

ಉದಯವಾಹಿನಿ ಪತ್ರಿಕೆ ಕ್ಯಾಲೆಂಡರ್ ಮತ್ತು ಡೈರಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಶ್ರೀಗಳು ಪತ್ರಿಕೆಯ ವಿನ್ಯಾಸ ಮತ್ತು ಕಳೆದ ಐದು ವರ್ಷಗಳಿಂದ ಪ್ರಕಟಗೊಳ್ಳುತ್ತಿರುವ ಪತ್ರಿಕೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಾಲ್ಲೂಕುಗಳಲ್ಲಿ ಉತ್ತಮ ಹೆಸರುಗಳಿಸಿದೆ ಕ್ಯಾಲೆಂಡರ್ ಮತ್ತು ಡೈರಿ ವಿನ್ಯಾಸವನ್ನು ಸಹ ಡಾ. ಶ್ರೀ ಶ್ರೀ ನಿಶ್ಚಲಾನಂದ ಮಹಾಸ್ವಾಮಿಜಿಗಳು. ಸಂತಸ ವ್ಯಕ್ತಪಡಿಸಿದರು. ಸಂಪಾದಕರಾದ. ಹೊಂಬೇಗೌಡರು. ಅರಣ್ಯ ಪರಿಸರ ಸಂರಕ್ಷಣಾ ಅಧ್ಯಕ್ಷರಾದ ಕೆ. ಏನ್. ಮಂಜುನಾಥ್. ಕರ್ನಾಟಕ ಆಹಾರ ನಿಗಮ ನಿವೃತ್ತ ಜಿಲ್ಲಾ ವ್ಯವಸ್ಥಾಪಕರಾದ ಶ್ರೀಧರ್. ಉದಯ ವಾಹಿನಿ ರಾಜ್ಯ ವಿಶೇಷ ವರದಿಗಾರ ಬಾಣಾವರ ಉಮೇಶ್. ಸಮಾಜ ಸೇವಕರಾದ ಕುಮಾರ್ ನವೀನ್ ಉಪಸ್ಥಿತರಿದ್ದರು

## ಉದಯವಾಹಿನಿ ಕ್ಯಾಲೆಂಡರ್ ಡೈರಿ ಬಿಡುಗಡೆಗೊಳಿಸಿದ ಪೀಠಾಧಿಪತಿಗಳು



ಉದಯವಾಹಿನಿ ಚಿತ್ರ



• ಬೆಂಗಳೂರು ಉದಯವಾಹಿನಿ

ಚಿತ್ರದುರ್ಗದ ಶ್ರೀ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ ಹಾಗೂ ಸರ್ದಾರ್ ಸೇವಾಲಾಲ್ ಸ್ವಾಮೀಜಿ. ಬೆಂಗಳೂರಿನ ಗಾಂಧಿನಗರದಲ್ಲಿರುವ ಚಿತ್ರದುರ್ಗ ಮುರುಗರಾಜೇಂದ್ರ ಮಠದ ಬಸವ ಮಂದಿರದಲ್ಲಿ ಉದಯವಾಹಿನಿ ಕ್ಯಾಲೆಂಡರ್ ಮತ್ತು ಡೈರಿಯನ್ನು ಬಿಡುಗಡೆಗೊಳಿಸಿ ಶುಭ ಹಾರೈಸಿದರು ಬಿಗ್ ಬಾಸ್ ಖ್ಯಾತಿಯ ತುಕಾಲಿ ಸ್ಟಾರ್ ಸಂತೋಷ್ ಹಾಗೂ ಕಾಮಿಡಿ ಕಿಲಾಡಿ ಹಾಗೂ ಬಿಗ್ ಬಾಸ್ ಖ್ಯಾತಿಯ ಚಂದ್ರಪ್ರಭ ಸೇರಿದಂತೆ ಇನ್ನೂ ಹಲವಾರು ಕಿರುತೆರೆಯ ನಟರು ಹಾಗೂ ಗಣ್ಯರು ಉದಯವಾಹಿನಿ ಪತ್ರಿಕೆಯ ಕ್ಯಾಲೆಂಡರ್ ಹಾಗೂ ಡೈರಿಯನ್ನು ಬಿಡುಗಡೆಗೊಳಿಸಿ ಉದಯವಾಹಿನಿ ರಾಜ್ಯಮಟ್ಟದಲ್ಲಿ ಡಿಜಿಟಲ್ ಚಾನೆಲ್ ಪ್ರಾರಂಭ ಮಾಡಬೇಕು ವಿಶೇಷವಾಗಿ 2026 ವರ್ಷ ಅತ್ಯಂತ ಯಶಸ್ವಿ ವರ್ಷ ವಾಗಬೇಕೆಂದು ತುಕಾಲಿ ಸ್ಟಾರ್ ಸಂತೋಷ್ ಶುಭ ಹಾರೈಸಿದರು ಸಂದರ್ಭದಲ್ಲಿ ಉದಯವಾಹಿನಿ ಪತ್ರಿಕೆಯ ಪ್ರಧಾನ ಸಂಪಾದಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಪರಿಸರ ಸಂರಕ್ಷಣೆ ರಾಜ್ಯ ಗೌರವ ಅಧ್ಯಕ್ಷ ಟಿ ಹೊಂಬೆಗೌಡ. ಕರ್ನಾಟಕ ರಾಜ್ಯ ಅರಣ್ಯ ಪರಿಸರ ಸಂರಕ್ಷಣೆ ರಾಜ್ಯಾಧ್ಯಕ್ಷರಾದ ಕೆಎನ್ ಮಂಜುನಾಥ್. ಉದಯವಾಹಿನಿ ರಾಜ್ಯ ವಿಶೇಷ ವರದಿಗಾರ ಬಾಣಾವರ ಉಮೇಶ್. ಕರ್ನಾಟಕ ರಾಜ್ಯ ಆಹಾರ ನಿಗಮದ ನಿವೃತ್ತ ಜಿಲ್ಲಾ ವ್ಯವಸ್ಥಾಪಕ ಶ್ರೀಧರ್. ಸಮಾಜ ಸೇವಕರಾದ ಕುಮಾರ್. ನವೀನ್ ಉಪಸ್ಥಿತರಿದ್ದರು

## ಹೊಸ ರೇಷನ್ ಕಾರ್ಡ್ ನಿರೀಕ್ಷೆಯಲ್ಲಿರುವವರಿಗೆ ಗುಡ್‌ನ್ಯೂಸ್

• ಉದಯವಾಹಿನಿ, ಬೆಂಗಳೂರು

ಹೊಸ ರೇಷನ್ ಕಾರ್ಡ್ ನಿರೀಕ್ಷೆಯಲ್ಲಿರುವವರಿಗೆ ರಾಜ್ಯ ಸರ್ಕಾರ ಗುಡ್ ನ್ಯೂಸ್ ನೀಡಿದೆ. ಮುಂದಿನ ಒಂದೆರಡು ತಿಂಗಳಲ್ಲಿ ಪಡಿತರ ಚೀಟಿ ವಿತರಣೆ ಮಾಡಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಹೇಳಿದ್ದಾರೆ.

ಕಲಬುರಗಿ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಷ್ಕರಣೆ ಸೇರಿ ನಾನಾ ಕಾರಣಗಳಿಂದ ಕಳೆದ ಎರಡೂವರೆ ವರ್ಷದಿಂದ ಹೊಸ ಪಡಿತರ ಚೀಟಿ ನೀಡಲು ಸಾಧ್ಯವಾಗಿಲ್ಲ. ಸುಮಾರು 2.5ರಿಂದ 3ಲಕ್ಷ ಅರ್ಜಿ ಗಳು ಸದ್ಯ ಬಾಕಿ ಇರುವ ಮಾಹಿತಿ ಇದ್ದು, ಎಲ್ಲವೂ ಪರಿಶೀಲನೆ ಮಾಡಿ ಹೊಸ ಪಡಿತರ ಚೀಟಿ ಶೀಘ್ರ ವಿತರಣೆ ಮಾಡಲಾಗುವುದು ಎಂದು ಹೇಳಿದರು.

ವೈದ್ಯಕೀಯ ಕಾರಣಗಳಿಗೆ ಬಿಪಿಎಲ್ ಕಾರ್ಡ್ ಪಡೆಯುವವರಿಗೆ ಇಲಾಖೆಯ ಪೋರ್ಟಲ್ ಮುಕ್ತವಾಗಿರಿಸಿದಾಗ ಬೇರೆಯವರೂ ಅರ್ಜಿ ಹಾಕಿದ್ದು, ಅಂತಹ ಮೂರು ಲಕ್ಷ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ. ಫೆಬ್ರುವರಿ ತಿಂಗಳಿಂದ ಹೊಸ ಪಡಿತರ ಚೀಟಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಪ್ರತಿ ವ್ಯಕ್ತಿಗೆ 5 ಕೆಜಿ ಅಕ್ಕಿ ಜೊತೆಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ ಅಕ್ಕಿ ನೀಡಲಾಗುತ್ತಿತ್ತು. ಅಕ್ಕಿ ಬದಲು ದಕ್ಷಿಣ ಕರ್ನಾಟಕದಲ್ಲಿ ರಾಗಿ, ಉತ್ತರ ಕರ್ನಾಟಕದಲ್ಲಿ ಜೋಳ, ತೊಗರಿ ಬೇಳೆ ನೀಡಲು ಮುಂದಾಗಿದ್ದೇವೆ' ಎಂದರು.

# ನಮ್ಮ ಮೆಟ್ರೋ ಟಿಕೆಟ್ ದರ ಶೀಘ್ರದಲ್ಲೇ ಮತ್ತೆ ಏರಿಕೆ ಮುಂದಾದ ಬಿಎಂಆರ್‌ಸಿಎಲ್

### ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆ ಇದೆ ಪ್ರಯಾಣಿಕರು ಈ ದರ ಏರಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪ್ರಯಾಣಿಕರಿಗೆ ಶೀಘ್ರದಲ್ಲಿಯೇ ಮತ್ತೆ ದರ ಏರಿಕೆ ಬಿಸಿ ಮುಟ್ಟಲಿದೆ. ಮುಂಬರುವ ಫೆಬ್ರವರಿಯಿಂದ ಶೇಕಡಾ 5 ರಷ್ಟು ಟಿಕೆಟ್ ದರ ಏರಿಕೆ ಮಾಡಲು ಬಿಎಂಆರ್‌ಸಿಎಲ್ ಮುಂದಾಗಿದೆ. ಈಗಾಗಲೇ ದುಬಾರಿ ದರದಿಂದ ಬೇಸತ್ತ ಪ್ರಯಾಣಿಕರ ಜೇಬು ಮತ್ತೆ ಸುಡಲಿದೆ. ದರ ನಿಗದಿ ಸಮಿತಿ (ಎಫ್‌ಎಫ್‌ಸಿ) ಶಿಫಾರಸಿನಂತೆ, ಫೆಬ್ರವರಿಯಿಂದ ಪ್ರತಿ ವರ್ಷ ನಮ್ಮ ಮೆಟ್ರೋ ಟಿಕೆಟ್ ದರವನ್ನು ಶೇಕಡಾ ಐದರಷ್ಟು ಹೆಚ್ಚಿಸಲು ಚಿಂತನೆ ನಡೆದಿದೆ. ಕಳೆದ ವರ್ಷ (ಫೆಬ್ರವರಿ 2025 ರಲ್ಲಿ) ಶೇಕಡಾ 71 ರಷ್ಟು ಏರಿಕೆಯಾದ ಬೆನ್ನಲ್ಲೇ ಬರುತ್ತದೆ. ಈ ಹೆಚ್ಚಳವು ಸಾರ್ವಜನಿಕ ಸಾರಿಗೆಯನ್ನು ಬಳಸುವ ಜನರ ಮೇಲಿನ ಆರ್ಥಿಕ ಭಾರವನ್ನು ಮತ್ತಷ್ಟು ಹೆಚ್ಚಿಸಲಿದೆ.

**ಮತ್ತೆ ದರ ಏರಿಕೆಗೆ ಅವಕಾಶ ಇದೆಯೇ?:** ಮೆಟ್ರೋ ರೈಲುಗಳ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002ರ ಸೆಕ್ಷನ್ 33ರ ಅಡಿಯಲ್ಲಿ ಈ ಶಿಫಾರಸುಗಳು ಕಾನೂನಾತ್ಮಕವಾಗಿ ಕಡ್ಡಾಯವಾಗಿವೆ. ಇದೇ ನಿಯಮದ ಅಡಿಯಲ್ಲಿ, ಹೊಸ ದರ ಪರಿಷ್ಕರಣೆ ಸಮಿತಿ ರಚನೆಯಾಗುವವರೆಗೆ ವಾರ್ಷಿಕ ದರ ಏರಿಕೆಗೆ ಅವಕಾಶವಿದೆ.

**ದರ ಎಷ್ಟು ಬದಲಾವಣೆ ಆಗುತ್ತೆ?:** ಶೇಕಡಾ 5 ರಷ್ಟು ದರ ಏರಿಕೆಗೆ ಸಲಹೆ ಬಂದಿದ್ದು, 100 ರೂ. ಟಿಕೆಟ್‌ಗೆ 5 ರೂಪಾಯಿ ಹೆಚ್ಚಳವಾಗಲಿದೆ. ಉದಾಹರಣೆಗೆ ಬನಶಂಕರಿಯಿಂದ ಎಂಜಿ ರಸ್ತೆಗೆ ಈಗ 60 ರೂ ಟಿಕೆಟ್ ದರ ಇದ್ದು, ಏರಿಕೆ ಬಳಿಕ 63 ರೂಪಾಯಿ ಆಗಲಿದೆ.



**ಪಡೆಯುವ ಹಣಕ್ಕೆ ತಕ್ಕಂತೆ ಸೇವೆ ಇಲ್ಲ:** ಪ್ರಯಾಣಿಕರ ಪ್ರಕಾರ, ಹೆಚ್ಚುತ್ತಿರುವ ದರಗಳು ವಾಸ್ತವ ಪರಿಸ್ಥಿತಿಗೆ ಹೊಂದಿಕೆಯಾಗುತ್ತಿಲ್ಲ. ಮೆಟ್ರೋ ರೈಲುಗಳಲ್ಲಿ ವಿಪರೀತ ಜನಸಂದಣಿ, ಹೊಸ ಮಾರ್ಗಗಳ ನಿರ್ಮಾಣದಲ್ಲಿ ನಿಧಾನಗತಿ ಮತ್ತು ಕೊನೆಯ ಮೈಲಿ ಸಂಪರ್ಕದ ಕೊರತೆಗಳು ಪ್ರಯಾಣಿಕರ ಬೇಸರವನ್ನು ಹೆಚ್ಚಿಸಿವೆ.

ನೂರಾರು ರೂಪಾಯಿ ಕೊಟ್ಟು ಓಡಾಡಿದರೂ ಕುಳಿತುಕೊಳ್ಳಲು ಇರಲಿ, ನಿಂತುಕೊಳ್ಳಲೂ ಜಾಗ ಇರುವುದಿಲ್ಲ. ಬೆಳಿಗ್ಗೆ ಮತ್ತು ಸಂಜೆ ಜನ ಕಿಕ್ಕಿರಿದು ತುಂಬಿರುತ್ತಾರೆ. ಮೊದಲು ರೈಲುಗಳ ಸಂಖ್ಯೆ ಹೆಚ್ಚಿಸಲಿ ಆ ನಂತರ ದರ ಏರಿಕೆ ಮಾಡಲಿ ಎಂದು ಪ್ರಯಾಣಿಕ ಅವಿನಾಶ್ ಅಸಮಾಧಾನ ಹೊರ ಹಾಕಿದರು.

**ದುಡ್ಡುಕೊಟ್ಟು ಉಸಿರುಗಟ್ಟಿ ಹಿಡಿಯುವ ಬದಲು ಟ್ರಾಫಿಕ್ ವಾಸಿ:** ಮೆಟ್ರೋಗೆ ಹೆಚ್ಚು ಹಣ ಪಾವತಿಸಬೇಕು ಅಥವಾ ಟ್ರಾಫಿಕ್‌ನಲ್ಲಿ ಗಂಟೆಗಟ್ಟಲೆ ಕಳೆಯಬೇಕು. ಈ ಎರಡೂ ಆಯ್ಕೆಗಳು ಮಾತ್ರ ಬೆಂಗಳೂರಿನ ಪ್ರಯಾಣಿಕರಿಗೆ ಇದೆ. ದುಬಾರಿ ದರಕೊಟ್ಟು ಉಸಿರುಕಟ್ಟಿಕೊಂಡು ನಿಲ್ಲುವ ಬದಲು ನಾನು ಟ್ರಾಫಿಕ್‌ನಲ್ಲಿ ಅರ್ಧ ಗಂಟೆ ಕಳೆಯುತ್ತೇನೆ ಎಂದು ಶಿವಮೂರ್ತಿ ಹೇಳುತ್ತಾರೆ. ಎರಡು ಪಟ್ಟು ಟಿಕೆಟ್ ದರ ಹೆಚ್ಚಿಸಿ ಆದ್ರೆ, ಸೌಲಭ್ಯ ಕೊಡಿ ಟಿಕೆಟ್ ದರ ಎರಡು ಪಟ್ಟು ಹೆಚ್ಚಳ ಮಾಡಿ, ನಾನು ಕೊಡುತ್ತೇನೆ. ಆದರೆ, ಕನಿಷ್ಠ ಸೌಲಭ್ಯಗಳನ್ನು ನೀಡಿ. ಆಫೀಸಿಗೆ ತೆರಳುವಾಗ ನಿಂತುಕೊಳ್ಳಲು ಆಗದಷ್ಟು ಜನದಟ್ಟಣೆ ಇರುತ್ತದೆ. ಉಸಿರು ಬಿಗಿ ಹಿಡಿದು ಸಂಚಾರ ಮಾಡುತ್ತಿದ್ದೇವೆ. ರೈಲುಗಳ ಸಂಖ್ಯೆ, ಟ್ರಿಪ್ ಸಂಖ್ಯೆ ಹೆಚ್ಚಿಸಿ ಎಂದು ಹರ್ಷಿತಾ ಹೇಳುತ್ತಾರೆ.

**ಪ್ರಯಾಣಿಕರಿಂದ ತೀವ್ರ ವಿರೋಧ**

**ಈ ವಾರ್ಷಿಕ ದರ ಏರಿಕೆಯ ಪ್ರಸ್ತಾವನೆ ಪ್ರಯಾಣಿಕರಿಂದ ತೀವ್ರ ವಿರೋಧಕ್ಕೆ ಕಾರಣವಾಗಿದೆ. ಅನೇಕರು ಸಾರ್ವಜನಿಕ ಸಾರಿಗೆ ಸಾಮಾನ್ಯ ಜನರಿಗೆ ಕೈಗೆಟುಕದಂತೆ ಆಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೆಟ್ರೋ ಪ್ರಯಾಣ ಕೈಗೆಟುಕುವ ದರದಲ್ಲಿರಬೇಕು, ದುಬಾರಿ ಸೇವೆ ಆಗಬಾರದು. ಕಳೆದ ವರ್ಷದ ಏರಿಕೆಯ ನಂತರ, ಇದು ಮತ್ತೊಂದು ಹೊಡೆತದಂತೆ ಅನಿಸುತ್ತಿದೆ, ಎಂದು ಪ್ರತಿದಿನ ಮೆಟ್ರೋ ಬಳಸುವ ಸಚ್ಚಿದಾನಂದ ಬೇಸರ ವ್ಯಕ್ತಪಡಿಸಿದರು.**

**ದರ ಏರಿಕೆಯಿಂದ ಉಂಟಾಗುವ ಅನಾನುಕೂಲಗಳೇನು?**

**ಮೆಟ್ರೋ ಟಿಕೆಟ್ ದರ ಏರಿಕೆಯಿಂದ ಬಿಎಂಆರ್‌ಸಿಎಲ್‌ಗೆ ಒಂದಿಷ್ಟು ಆದಾಯ ಬರಬಹುದು. ಆದರೆ, ಪ್ರಯಾಣಿಕರಿಗೆ ಹೊರೆಯಂತೂ ಬೀಳಲಿದೆ. 2025 ರಲ್ಲಿ ದರ ಏರಿಕೆಯಾದ ಬಳಿಕವೇ ಶೇಕಡಾ 5 ರಿಂದ 10 ರಷ್ಟು ಪ್ರಯಾಣಿಕರು ಪರ್ಯಾಯ ಸಾರಿಗೆ ಬಳಸಿದರು. ಹೊಸ ಮಾರ್ಗ ಆರಂಭ, ಮಾರ್ಗ ವಿಸ್ತರಣೆಯಾದ ಹಿನ್ನೆಲೆ ಒಟ್ಟಾರೆ ಪ್ರಯಾಣಿಕರ ಸಂಖ್ಯೆ ತಗ್ಗಲಿಲ್ಲವಷ್ಟೇ.**

- **ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆ ಶೇಕಡಾ 5 ರಿಂದ 10 ರಷ್ಟು ತಗ್ಗಬಹುದು.**
- **ಮೆಟ್ರೋದಿಂದ ದೂರ ಉಳಿದ ಪ್ರಯಾಣಿಕರು ಖಾಸಗಿ ವಾಹನಗಳನ್ನು ರಸ್ತೆಗಿಳಿಸುವ ಪರಿಣಾಮ ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಬಹುದು.**
- **ದೇಶದಲ್ಲಿಯೇ ದುಬಾರಿ ಮೆಟ್ರೋ ದರ ಎಂಬ ಹೆಗ್ಗಳಿಕೆಗೆ ನಮ್ಮ ಮೆಟ್ರೋ ಪಾತ್ರವಾಗಲಿದೆ.**

ಉದಯ ವಾಹಿನಿ
ಪ್ರಾದೇಶಿಕ
ಮಂಗಳವಾರ 13 ಜನವರಿ 2026


# ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಗಣೇಶ್ ಪ್ರಸಾದ್ ಶಂಕುಸ್ಥಾಪನೆ

• ಉದಯವಾಹಿನಿ, ಗುಂಡ್ಲುಪೇಟೆ



ತಾಲ್ಲೂಕಿನ ಮುಂಟೀಪುರ, ಕರಕಲಮಾದಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಒಂದೂವರೆ ಕೋಟಿಗೂ ಹೆಚ್ಚು ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಶಂಕುಸ್ಥಾಪನೆ ನೆರವೇರಿಸಿದರು. ಮುಂಟೀಪುರ ಗ್ರಾಮದಲ್ಲಿ ಟಿಎಸ್ಪಿ ಯೋಜನೆಯಡಿ 50 ಲಕ್ಷ ವೆಚ್ಚದ ಸಿಸಿರಸ್ತೆ ಮತ್ತು ಚರಂಡಿ ನಿರ್ಮಾಣ, ಟಿ ಎಸ್ಪಿ ಯೋಜನೆಯಡಿ ತೆರಕಣಾಂಬಿಗೆ 25 ಲಕ್ಷ, ಕರಕಲಮಾದಹಳ್ಳಿ 25 ಲಕ್ಷ, ವಡ್ಡನ ಹೊಸಹಳ್ಳಿ ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ 25 ಲಕ್ಷ ವೆಚ್ಚದ ಸಿಸಿರಸ್ತೆ ಕಾಮಗಾರಿಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು ಕ್ಷೇತ್ರದಲ್ಲಿನ ಅಭಿವೃದ್ಧಿ ಸಹಿಸಲಾಗದ ವಿಪಕ್ಷ ನಾಯಕರು ಟೀಕೆ ಮಾಡುವುದರಲ್ಲೇ ಮುಳುಗಿಹೋಗಿದ್ದಾರೆ ಇದು ಅವರ ಬಾಲಿಶತನವನ್ನ ತೋರಿಸುತ್ತಿದೆ.

ವಿಪಕ್ಷದವರು ಎಷ್ಟೇ ಟೀಕೆ ಟಿಪ್ಪಣಿ ಮಾಡಿದರು ಕ್ಷೇತ್ರದ ಅಭಿವೃದ್ಧಿ ಪರ್ವ ಮುಂದುವರಿಯುತ್ತದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು ಮೂಲ ಸೌಕರ್ಯಕ್ಕೆ ಒತ್ತು ನೀಡಲಾಗಿದೆ, ಕ್ಷೇತ್ರದಲ್ಲಿ ಮತದಾರರ ನಂಬಿಕೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪಕ್ಷಾತೀತವಾಗಿ ಕೆಲಸ ಮಾಡಲಾಗುತ್ತಿದೆ ಇದನ್ನ ಸಹಿಸದ ಒಳಕಿಲುಬು ಸಹಿತರಿಗೆ ಉತ್ತರಿಸುತ್ತ ಕೂರಲು ಸಾಧ್ಯವೇ ಎಂದು ಲೇವಡಿ ಮಾಡಿದರು.

ಈ ವೇಳೆ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜಶೇಖರ್, ಎಪಿಎಂಸಿ ಅಧ್ಯಕ್ಷ ನಾಗರಾಜು, ಸಿಎಫ್ ಪ್ರಭಾಕರನ್, ಆರ್ ಎಫ್ ಓ ಮಲ್ಲೇಶ್, ಲೋಕೇಶ್ ಗೋಪಾಲಪುರ ಸೇರಿದಂತೆ ಹಲವರು ಹಾಜರಿದ್ದರು.

**ಹಿಮವದ್ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನೂತನ ಬಸ್ ಶೆಲ್ಟರ್ ನಿರ್ಮಾಣ**

ಐತಿಹಾಸಿಕ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳ ಬಹುದಿನದ ಬೇಡಿಕೆಗೆ ಸ್ಪಂದಿಸಲಾಗಿದೆ, ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ 20 ಲಕ್ಷ ವೆಚ್ಚದ ಬಸ್ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಇದರಿಂದ ಬಿಸಿಲು ಮಳೆ ಸಂದರ್ಭದಲ್ಲಿ ಭಕ್ತಾದಿಗಳಿಗೆ ಆಸರೆಯಾಗಲಿದೆ , ಇಲ್ಲಿಯೇ ಟಿಕೆಟ್ ವಿತರಣಾ ಕೇಂದ್ರ ತೆರೆಯುವುದರಿಂದ ಬೆಟ್ಟದ ಮೇಲೆ ತೆರಳುವವರಿಗೆ ಸಹಾಯಕವಾಗಲಿದೆ ಎಂದು ತಿಳಿಸಿದರು.

# ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗಲಿರುವ ರಾಮೋತ್ಸವ

## ಕಲೆ, ಸಂಸ್ಕೃತಿ, ಕ್ರೀಡೆಗೆ ಒತ್ತು : ಸಂಕ್ರಾಂತಿಯಂದೇ ರಾಮತಾರಕ ಯಜ್ಞ – ಶಾಸಕ ಇಕ್ಬಾಲ್ ಹುಸೇನ್

• ಉದಯವಾಹಿನಿ, ರಾಮನಗರ

ಶೋಲೆ ಸಿನಿಮಾ, ರಾಮ ದೇವರ ಬೆಟ್ಟ, ಸಪ್ತ ಗಿರಿಗಳ ಸಂಗಮ, ಏಷ್ಯಾ ಖಂಡದಲ್ಲಿ ರೇಷ್ಮೆ ಮತ್ತು ಮಾವು ಬೆಳೆಗೆ ಖ್ಯಾತಿಯಾಗಿರುವ ರಾಮನಗರ ಈ ಭಾರಿ ಸಂಕ್ರಾಂತಿ ಸಂಭ್ರಮದಲ್ಲಿ ಮೊದಲ ಬಾರಿಗೆ ರಾಮೋತ್ಸವ ಆಚರಿಸಿಕೊಳ್ಳಲು ಸಜ್ಜಾಗಿದ್ದು ಸಾಂಸ್ಕೃತಿಕ ಗತವೈಭವಕ್ಕೆ ಸಾಕ್ಷಿಯಾಗಲು ಸಜ್ಜಾಗಿದೆ.

ತ್ರೇತಾಯುಗದಲ್ಲಿ ಶ್ರೀ ರಾಮನು ಸೀತೆ ಮತ್ತು ಲಕ್ಷ್ಮಣರೊಂದಿಗೆ ಶ್ರೀ ರಾಮದೇವರ ಬೆಟ್ಟದಲ್ಲಿ ವಾಸ್ತವ್ಯ ಹೂಡಿದ್ದ ಸಮಯದಲ್ಲಿ ಕಾಕಾಸುರನನ್ನು ವಧೆ ಮಾಡಿದ ಪುರಾಣ ಪ್ರಸಿದ್ಧ ಭೂಮಿಯಲ್ಲಿ ನಾಲ್ಕು ದಿನಗಳ ಕಾಲ ರಾಮೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ರವರು ಹೊಸ ಇತಿಹಾಸಕ್ಕೆ ಮುನ್ನುಡಿ ಬರೆಯಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಮಾಜಿ ಸಂಸದ ಡಿ.ಕೆ.ಸುರೇಶ್‌ರವರು ಕನಕಪುರದಲ್ಲಿ ಕನಕೋತ್ಸವ ನಡೆಸುವ ಮಾದರಿಯಲ್ಲಿಯೇ ರಾಮನಗರದಲ್ಲಿ ಜ,15 ರಿಂದ 18 ರವರೆಗೆ ನಾಲ್ಕು ದಿನಗಳ ಕಾಲ ಇಕ್ಬಾಲ್‌ಹುಸೇನ್ ಅವರು ಸ್ವಂತ ಖರ್ಚಿನಲ್ಲಿ ರಾಮೋತ್ಸವ ಆಚರಣೆ ನಡೆಸುತ್ತಿದ್ದಾರೆ. ಧಾರ್ಮಿಕ ಕಾರ್ಯಗಳಿಗಷ್ಟೇ ಸೀಮಿತವಾಗದೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ವೇದಿಕೆ ಕಲ್ಪಿಸಲಾಗಿದೆ. ಅಷ್ಟೆ ಅಲ್ಲದೆ ರಾಮೋತ್ಸವದ ಸಂಭ್ರಮ ಮತ್ತು ಐಕ್ಯತೆಯ ಸಂದೇಶ ಹೊತ್ತ ಮ್ಯಾರಥಾನ್ ನಡಿಗೆ ನಡೆಯಲಿದೆ.

ಇದೇ ಮೊಟ್ಟ ಮೊದಲ ಬಾರಿಗೆ ದೊಡ್ಡಮಟ್ಟದಲ್ಲಿ ಬಿ.ಎಂ. ರಸ್ತೆಯಲ್ಲಿ ಬೆಂಗಳೂರು ಮೈಸೂರು ನಡುವೆ ಸಂಚರಿಸುವ ಪ್ರಯಾಣಿಕರ ಗಮನ ಸೆಳೆಯುತ್ತಿರುವ ಶ್ರೀರಾಮನ ಬಂಟ ಆಂಜನೇಯ ಸ್ವಾಮಿಯ ಬೃಹತ್ ಪ್ರತಿಮೆಯ ಬಳಿಯಿರುವ ಬನ್ನಿಮಂಟಪದ ಆವರಣದಲ್ಲಿ ಶೃಂಗೇರಿ ಮಠದ ರಾಜು ಶ್ರೀನಾಥಶರ್ಮಾ ನೇತೃತ್ವದಲ್ಲಿ 101 ವೈದಿಕರಿಂದ ಶ್ರೀ ರಾಮತಾರಕ ಯಜ್ಞ, 400ಕ್ಕೂ ಹೆಚ್ಚು ದೇವರುಗಳ ಉತ್ಸವ, ಶ್ರೀನಿವಾಸ ಕಲ್ಯಾಣೋತ್ಸವ, ಗಣೇಶ, ಚಾಮುಂಡೇಶ್ವರಿ ಮತ್ತು ಶ್ರೀ ರಾಮರ ಚರಿತ್ರೆಯನ್ನು ಅನಾವರಣ ಮಾಡುವ ಮಡಿಕೇರಿಯ ಮೂರು ಬೃಹತ್ ಸ್ಥಬ್ಧಚಿತ್ರಗಳು ರಾಮೋತ್ಸವದಲ್ಲಿ ಆಕರ್ಷಣೆಯಾಗಲಿವೆ.


ಉದಯವಾಹಿನಿ ಚಿತ್ರ

ಗಣಪತಿಯಿಂದ ಮಮತಾಸುರ ವಧೆ, ಬ್ರಹ್ಮಾಂಬಿಕೆಯಿಂದ ಅರುಣಾಸುರನ ವಧೆ ಕಥಾ ಸಾರಾಂಶವನ್ನು ಈ ಬಾರಿ ರಾಮನಗರದ ರಾಮೋತ್ಸವದಲ್ಲಿ ಪ್ರಪ್ರಥಮ ಬಾರಿಗೆ ಪರಿಚಯಿಸಲಾಗುತ್ತಿದೆ. ಮಡಿಕೇರಿಯ ಟ್ರೆಡಿಶನಲ್ ಕ್ರಿಯೇಶನ್‌ನ ರಾಘವೇಂದ್ರ. ಗೌತಮ್ ಮತ್ತು ತಂಡದವರಿಂದ ಮಂಟಪವನ್ನು, ಪ್ರಭಾವಳಿಯನ್ನು ಮಡಿಕೇರಿಯ ಪೂಜಾ ಲೈಟಿಂಗ್, ನಜೀರ್ ಡಿಜೆ ಹಾಗೂ ಬೆಳಕಿನ ವ್ಯವಸ್ಥೆಯನ್ನು ಲೋಕೇಶ್, ಎಸ್ ಕೆ ಎಂ ಜಿ ಕ್ರಿಯೇಷನ್ ನವೀನ್ ರವರು ನಡೆಸಿಕೊಡಲಿದ್ದಾರೆ.

ಒಟ್ಟಾರೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳು ನಗರದೆಲ್ಲೆಡೆ ಸಾಕಾರವಾಗಲಿದ್ದು, ರಾಮೋತ್ಸವವನ್ನು ಕಣ್ತುಂಬಿಕೊಳ್ಳಲು ಜನರಲ್ಲಿ ಕಾತುಕ ಹೆಚ್ಚಾಗಿದ್ದು, ಪಟ್ಟಣವು ಶ್ರೀರಾಮನ ಹೆಸರಿನಲ್ಲಿ ಮಧುವಣಗಿತ್ತಿಯಂತೆ ವಿದ್ಯುತ್ ದೀಪಲಂಕಾರದಿಂದ ಶೃಂಗಾರಗೊಳ್ಳುವ ಮೂಲಕ ರಾಮನೂರು ಭಕ್ತಿ-ಭಾವದಿಂದ ರಾಮೋತ್ಸವ ಸಾಕ್ಷಿಕರಿಸಲು ಸಜ್ಜುಗೊಳ್ಳುತ್ತಿದೆ.



ಕಳೆದ ಮೂರು ತಿಂಗಳಿಂದ ಕ್ಷೇತ್ರದಲ್ಲಿ ಸರಣಿ ಸಭೆ ನಡೆಸಿ ರಾಮೋತ್ಸವಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ. ಮಹಿಳೆಯರು ಬಿಡಿಸುತ್ತಿರುವ ರಂಗೋಲಿ ಆಕರ್ಷಣೀಯ, ಕ್ಷೇತ್ರದ ಜನರು ಒಂದಲ್ಲಾ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವ ವೇದಿಕೆಗಳು ನಿರ್ಮಾಣವಾಗಿವೆ. ಗ್ರಾಮದೇವತೆಗಳ ಉತ್ಸವ ವಿಶೇಷವಾಗಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದಂಪತಿಗಳು ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಚುನಾಯಿತ ಪ್ರತಿನಿಧಿಗಳು, ಚಲನಚಿತ್ರ ನಟರು, ಪ್ರಸಿದ್ಧ ಗಾಯಕರು ಆಗಮಿಸಲಿದ್ದಾರೆ.

-ಎಚ್.ಎ.ಇಕ್ಬಾಲ್‌ಹುಸೇನ್, ಶಾಸಕರು.



ರಾಮನಗರದಲ್ಲಿ ಇದೇ ಮೊದಲ ಬಾರಿಗೆ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರ ಸ್ವಂತ ಖರ್ಚಿನಲ್ಲಿ ರಾಮೋತ್ಸವ ಆಚರಿಸಲಾಗುತ್ತಿದೆ. ನಾಲ್ಕು ದಿನಗಳ ಕಾಲ ನಡೆಯುವ ರಾಮೋತ್ಸವದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಲೋಕವೇ ಸೃಷ್ಟಿಯಾಗಲಿದೆ. ಇದನ್ನು ಜನರು ಕಣ್ತುಂಬಿ ಕೊಳ್ಳುವಂತೆ ಮನವಿ ಮಾಡುತ್ತೇನೆ.

-ಎ.ಬಿ.ಚೇತನ್‌ಕುಮಾರ್, ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ.

## ಚಿರತೆ ದಾಳಿಗೆ ಕೊಟ್ಟಿಗೆಯಲ್ಲಿದ್ದ ಹಸು ಬಲಿ: ದೇಪಾಪುರದಲ್ಲಿ ಘಟನೆ


ಉದಯವಾಹಿನಿ ಚಿತ್ರ

ಗ್ರಾಮದ ಹೊರವಲಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ವನ್ಯಮೃಗಗಳು ಗ್ರಾಮದ ಒಳಕ್ಕೂ ನುಸುಳುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ, ಮುಂಜಾನೆ ಸಂದರ್ಭದಲ್ಲಿಯೇ ಕೊಟ್ಟಿಗೆಗೆ ನುಗ್ಗಿರುವ ಚಿರತೆ ಮನುಷ್ಯರ ಮೇಲೆ ಎರಗಿದರೆ ಹೊಣೆ ಯಾರು, ಗ್ರಾಮದ ಜನರು ನಿರ್ಭೀತಿಯಿಂದರಲು ಕ್ರಮ ಕೈಗೊಳ್ಳಬೇಕು. -ಮಾದಪ್ಪ ದೇಪಾಪುರ

• ಉದಯವಾಹಿನಿ, ಗುಂಡ್ಲುಪೇಟೆ

ಹುಲಿ ಬಂಧನದಿಂದ ನಿಟ್ಟುಸಿರು ಬಿಟ್ಟಿದ್ದ ದೇಪಾಪುರ ಗ್ರಾಮಸ್ಥರಿಗೆ ಈಗ ಚಿರತೆ ಭೀತಿ ಎದುರಾಗಿದೆ, ಮುಂಜಾನೆ ಗ್ರಾಮದ ಸಿದ್ದರಾಜು ಎಂಬವರ ಕೊಟ್ಟಿಗೆಯಲ್ಲಿದ್ದ ಹಸುವನ್ನ ಆಹುತಿ ಪಡೆದಿರುವ ಚಿರತೆ ಸ್ಥಳೀಯರನ್ನ ಬೆಚ್ಚಿಬೀಳಿಸಿದೆ.

ಬಂಡೀಪುರ ಹುಲಿ ರಕ್ಷಿತಾರಣ್ಯದ ಗುಂಡ್ಲುಪೇಟೆ ಬಫರ್ ಜೋನ್ ವಲಯದ ದೇಪಾಪುರ ಗ್ರಾಮದ ಒಳಗೆ ಪ್ರವೇಶಿಸಿರುವ ಚಿರತೆ ಕೊಟ್ಟಿಗೆಯಲ್ಲಿದ್ದ ಹಸುವನ್ನ ಬಲಿ ಪಡೆದಿದೆ, ಮುಂಜಾನೆ ಘಟನೆ ನಡೆಸಿದೆ ಎನ್ನಲಾಗಿದ್ದು ಹಸುವಿನ ಅರ್ಧ ದೇಹವನ್ನ ಚಿರತೆ ಭಕ್ಷಿಸಿದೆ, ಘಟನೆ ಮಾಹಿತಿಯನ್ನರಿತ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ಹಸು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡುವ ಜೊತೆಗೆ ಚಿರತೆ ಸೆರೆಗೆ ಬೋನ್ ಇರಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಮಿನಿ ನ್ಯೂಸ್

### ಬಿಜೆಪಿ ಪಾದಯಾತ್ರೆ ಹಾಸ್ಯಾಸ್ಪದ: ಸಚಿವ ಡಾ. ಎಚ್.ಸಿ. ಮಹದೇವಪ್ಪ

• ಉದಯವಾಹಿನಿ, ಮೈಸೂರು

ಬಿಜೆಪಿ ಆಡಳಿತದಲ್ಲಿ ಬಳ್ಳಾರಿ ಹೇಗೆ ರಿಪಬ್ಲಿಕ್ ಆಗಿತ್ತು. ಸಂಪತ್ತು ಯಾರ ಕೈಯಲ್ಲಿ ಇತ್ತು ಎಂಬುದು ಗೊತ್ತಿದೆ. ಆರೋಪಿಗಳೇ ಪಾದಯಾತ್ರೆ-ಸಮಾವೇಶ ಮಾಡುತ್ತೇವೆ ಎನ್ನುವುದು ಹಾಸ್ಯಾಸ್ಪದ' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಟೀಕಿಸಿದರು. ಬಳ್ಳಾರಿ ಘಟನೆ ಖಂಡಿಸಿ ಬಿಜೆಪಿಯು ಪಾದಯಾತ್ರೆಗೆ ಸಿದ್ಧತೆ ನಡೆಸಿರುವ ಕುರಿತು ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು ರಾಜಕೀಯ ಉದ್ದೇಶಕ್ಕೆ ನಡೆಯುವ ಯಾತ್ರೆಯಿಂದ ಪ್ರಯೋಜನವಿಲ್ಲ ಎಂದರು. ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಜಾರಿಗೆ ಕಿರಣ್ ಮಜುಂದಾರ್ ಸೇರಿದಂತೆ ಹಲವರು ವಿರೋಧಿಸುತ್ತಿರುವ ಪ್ರತಿಕ್ರಿಯಿಸಿ, ರಾಜ್ಯದಲ್ಲಿನ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗಬೇಕು. ಇಲ್ಲವಾದರೆ ನಾವು ಏನು ಮಾಡಬೇಕೋ ಮಾಡುತ್ತೇವೆ ಎಂದರು. ಉದ್ಯೋಗ ಖಾತ್ರಿ ಯೋಜನೆಗೆ ತಿದ್ದುಪಡಿ ವಿಚಾರದಲ್ಲಿ ಯಾರು ಬಂದರೂ ಚರ್ಚೆಗೆ ಸಿದ್ಧರಿದ್ದೇವೆ. ಇದೊಂದು ಸಂವಿಧಾನ ವಿರೋಧಿ ನಡೆ. ಅದಕ್ಕಾಗಿಯೇ ಕಾಂಗ್ರೆಸ್ ನರೇಗಾ ಬಚಾವೊ ಆಂದೋಲನ ಹಮ್ಮಿಕೊಳ್ಳುತ್ತಿದೆ' ಎಂದರು.

### ಸಿದ್ದರಾಮಯ್ಯ ಕಳಂಕರಹಿತ ನಾಯಕ: ಡಾ.ಎಂ.ಸಿ. ಸುಧಾಕರ್

• ಉದಯವಾಹಿನಿ, ಚಿಂತಾಮಣಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳಂಕರಹಿತ ಮತ್ತು ಯಾರಿಗೂ ಸರಿಸಾಟಿ ಇಲ್ಲದ ನಾಯಕರಾಗಿದ್ದು, ನಿರಂತರವಾಗಿ ಬಡವರಪರ ಕಾರ್ಯಕ್ರಮಗಳನ್ನು ನೀಡುವ ಮೂಲಕ ಅಪೂರ್ವ ಸಾಧನೆ ಮಾಡಿದ್ದಾರೆ ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸಿದ್ದರಾಮಯ್ಯ ಅವರು ದೀರ್ಘಕಾಲ ಮುಖ್ಯಮಂತ್ರಿ ದಾಖಲೆ ಮಾಡಿದ ಹಿನ್ನೆಲೆಯಲ್ಲಿ ಕುರುಬರ ಸಂಘವು ನಗರದಲ್ಲಿ ಐತಿಹಾಸಿಕ ವಿಜಯೋತ್ಸವ ಮತ್ತು ಸ್ನೇಹಮಿಲನ ಕಾರ್ಯಕ್ರಮ ಹಮ್ಮಿಕೊಂಡಿತು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಹಿಂದುಳಿದ ಬಡ ಕುಟುಂಬದಲ್ಲಿ ಜನಿಸಿ ಹಲವಾರು ಸಂಕಷ್ಟಗಳನ್ನು ಎದುರಿಸಿ, ರಾಜಕೀಯ ಏಳುಬೀಳುಗಳ ನಡುವೆ ಈ ಸಾಧನೆ ಮಾಡಿದ್ದಾರೆ. ಸಿದ್ದರಾಮಯ್ಯ ಅವರ ಜೀವನದ ಅನುಭವಗಳು ಕಲಿಸಿದ ಪಾಠದಿಂದಲೇ ಬಡವರಿಗೆ ಸ್ಪಂದಿಸುವುದನ್ನು ಕರಗತ ಮಾಡಿಕೊಂಡರು ಎಂದರು. ಕಳಂಕರಹಿತ ರಾಜಕಾರಣಿಯಾಗಿದ್ದರೂ ವಿರೋಧಪಕ್ಷಗಳು ಅವರ ಆತ್ಮವಿಶ್ವಾಸ ಕುಂದಿಸುವ ಮತ್ತು ಮನ ನೋಯಿಸುವ ಕೆಲಸ ಮಾಡುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

### ಬಸ್ ನಿಲ್ದಾಣ ಇಲ್ಲದೆ ನಾಗರಿಕರ ಪ್ರಯಾಣಿಕರ ಪರದಾಟ

• ಉದಯವಾಹಿನಿ, ಕುಣಿಗಲ್

ಪುರಸಭೆ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಭೂಮಿ ಪೂಜೆ ನಡೆದು ಎರಡು ತಿಂಗಳು ಕಳೆದರೂ ಕಾಮಗಾರಿ ಆರಂಭವಾಗಿಲ್ಲ. ಇದರಿಂದಾಗಿ ನಾಗರಿಕರು ಮತ್ತು ಪ್ರಯಾಣಿಕರ ಪರದಾಟ ಮುಂದುವರಿದಿದೆ. ತಾತ್ಕಾಲಿಕ ಪರ್ಯಾಯ ವ್ಯವಸ್ಥೆಗೆ ಆಗ್ರಹಿಸಿದ್ದಾರೆ.

**ನಿಲ್ದಾಣದ ಹಿನ್ನೆಲೆ:** ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಕುಣಿಗಲ್‌ನಲ್ಲಿ ಪುರಸಭೆ ಬಸ್ ನಿಲ್ದಾಣ ಕಾರ್ಯನಿರ್ವಹಿಸುತ್ತಿತ್ತು. ತುಮಕೂರು, ಮೈಸೂರು, ಮಾಗಡಿ, ಬೆಂಗಳೂರು-ಹಾಸನ ಮಾರ್ಗದ ಸರ್ಕಾರಿ ಮತ್ತು ಖಾಸಗಿ ಬಸ್‌ಗಳು ಇಲ್ಲಿಂದ ಕಾರ್ಯ ನಿರ್ವಹಿಸುತ್ತಿದ್ದವು. ನಿಲ್ದಾಣ ಪ್ರದೇಶದಲ್ಲಿದ್ದ ಅಂಗಡಿಗಳ ಬಾಡಿಗೆಯಿಂದ ಪುರಸಭೆಗೆ ಆದಾಯ ಬರುತ್ತಿತ್ತು. ಕಾಲ ಕ್ರಮೇಣ, ಸ್ಟಡ್ ಫಾರಂ ಬಳಿ ಸಾರಿಗೆ ಸಂಸ್ಥೆ ನಿಲ್ದಾಣ ನಿರ್ಮಾಣವಾದ ನಂತರ ಪುರಸಭೆ ನಿಲ್ದಾಣ ಖಾಸಗಿ ಬಸ್‌ಗಳಿಗೆ ಮೀಸಲಾಯಿತು.

**ನವೀಕರಣದ ಆರಂಭ ಮತ್ತು ಸ್ಥಗಿತ:** 2005ರಲ್ಲಿ ಪುರಸಭೆಯು ಆಧುನಿಕ ಬಸ್ ನಿಲ್ದಾಣ ನಿರ್ಮಿಸುವ ಉದ್ದೇಶದಿಂದ ಹಳೆ ನಿಲ್ದಾಣ ಮತ್ತು ಅಂಗಡಿಗಳನ್ನು ತೆರವುಗೊಳಿಸಿತು. ಇದರಿಂದ ಬಸ್ ನಿಲ್ದಾಣವನ್ನೇ ಅವಲಂಬಿಸಿದ್ದ ಅನೇಕ ಕುಟುಂಬಗಳು ಆರ್ಥಿಕ ತೊಂದರೆಗೆ ಒಳಗಾದವು. ಆದರೆ, ಹೊಸ ನಿಲ್ದಾಣ ನಿರ್ಮಾಣ ಕಾರ್ಯ ಸಾಗಲಿಲ್ಲ. ಆ ಪ್ರದೇಶದಲ್ಲಿ ಖಾಸಗಿ ನಿಲ್ದಾಣ ಮತ್ತು ಅಂಗಡಿಗಳು ಹುಟ್ಟಿಕೊಂಡು, 20 ವರ್ಷಗಳಿಂದ ಸ್ಥಳೀಯ ಜನರ ಜೀವನಾಧಾರವಾಗಿ ನಿಂತವು.

**ಇತ್ತೀಚಿನ ಪ್ರಯತ್ನ:** ಶಾಸಕ ಡಾ.ರಂಗನಾಥ್ ಪುನಃ ಆಯ್ಕೆಯಾದ ನಂತರ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಯಿತು. ಹಿಂದಿನ ಪುರಸಭೆ ಜನಪ್ರತಿನಿಧಿಗಳು ತಮ್ಮ ಅಧಿಕಾರಾವಧಿ ಕೊನೆ ದಿನ ನಿರ್ಮಾಣದ ಭೂಮಿ ಪೂಜೆ ನಡೆಸಿದರು. ಪೂಜೆ ನಂತರ ಗುಡಿಸಲು ಅಂಗಡಿಗಳು ಮತ್ತು ಶಿಥಿಲವಾದ ತಂಗುದಾಣಗಳನ್ನು ತೆರವುಗೊಳಿಸಲಾಯಿತು.

### ಮೌಢ್ಯ ಕಂದಾಚಾರ ತೊಲಗಲಿ: ನಾಯಕಿ ಟಿ.ಸಿ.ದೀಪಿಕಾ

• ಉದಯವಾಹಿನಿ, ತುಮಕೂರು

ಅಂಧ ಮಹಿಳೆಯರ ಟಿ-20 ವಿಶ್ವಕಪ್ ಗೆದ್ದ ಭಾರತ ತಂಡವನ್ನು ಮುನ್ನಡೆಸಿದ ನಾಯಕಿ ಟಿ.ಸಿ.ದೀಪಿಕಾ, ಆಟಗಾರ್ತಿಯರಾದ ಎನ್. ಆರ್.ಕಾವ್ಯಾ, ವಿ.ಕಾವ್ಯಾ ಅವರಿಗೆ ನಗರದಲ್ಲಿ ಅದ್ದೂರಿ ಮೆರವಣಿಗೆ ಮೂಲಕ ಸ್ವಾಗತ ಕೋರಲಾಯಿತು. ರಾಜ್ಯ ಕಾಡುಗೊಲ್ಲರ ಸಂಘದಿಂದ ಅಭಿನಂದನಾ ಸಮಾರಂಭ ಆಯೋಜಿಸಲಾಗಿತ್ತು. ಇದರ ಪ್ರಯುಕ್ತ ಮೆರವಣಿಗೆ ನೆರವೇರಿತು. ಶಿರಾ ತಾಲ್ಲೂಕಿನ ಕರೆತಿಮ್ಮನಹಳ್ಳಿಯ ದೀಪಿಕಾ, ಕೋರ ಬಳಿಯ ನಾಯಕನಪಾಳ್ಯದ ಎನ್.ಆರ್.ಕಾವ್ಯಾ, ಶಿವಮೊಗ್ಗ ಜಿಲ್ಲೆಯ ಕಾವ್ಯಾ ಅವರನ್ನು ಅಲಂಕೃತ ಬೆಳ್ಳಿ ರಥದಲ್ಲಿ ಕೂರಿಸಿ ಮೆರವಣಿಗೆ ಮಾಡಲಾಯಿತು. ಟೌನ್‌ಹಾಲ್‌ನಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ವೀರಗಾಸೆ, ನಾಸಿಕ್ ಡೋಲು, ಚಿಟ್ಟಿ ಮೇಳ, ಕಂಸಾಳೆ, ಗಾರುಡಿ ಗೊಂಬೆ ಸೇರಿ ವಿವಿಧ ಕಲಾ ತಂಡಗಳು ಮೆರವಣಿಗೆ ಮುನ್ನಡೆಸಿದವು. ನೂರಾರು ಜನ ಹೆಜ್ಜೆ ಹಾಕಿದರು. ಆಟಗಾರ್ತಿಯರು ಕನ್ನಡ ಬಾವುಟ ಹಿಡಿದು ಕುಳಿತಿದ್ದರು. ಬಿ.ಎಚ್. ರಸ್ತೆ ಮೂಲಕ ಸಾಗಿ ಬಂದ ಮೆರವಣಿಗೆ ಎಂ.ಜಿ.ರಸ್ತೆಯ ಬಾಲಭವನದ ಬಳಿ ಕೊನೆಯಾಯಿತು. ಸಂಸದ ಗೋವಿಂದ ಕಾರಜೋಳ, ಶಾಸಕ ಕೆ.ಎನ್.ರಾಜಣ್ಣ ಇತರರು ಮೆರವಣಿಗೆಗೆ ಚಾಲನೆ ನೀಡಿದರು. ಹೆಮ್ಮೆ ಇದೆ: ನನಗೆ ಒಂದು ಕಣ್ಣು ಇಲ್ಲದಿದ್ದರೂ ಪರವಾಗಿಲ್ಲ. ವಿಶ್ವಕಪ್ ಗೆಲ್ಲುವ ಮೂಲಕ ದೇಶ, ರಾಜ್ಯ, ನಮ್ಮ ಜಿಲ್ಲೆಗೆ ಹೆಸರು ತಂದುಕೊಟ್ಟ ಹೆಮ್ಮೆ ಇದೆ ಎಂದು ಟಿ.ಸಿ.ದೀಪಿಕಾ ಹೇಳಿದರು.ಬಾಲಭವನದಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಕಾಡುಗೊಲ್ಲರ ಹಟ್ಟಿಗಳಲ್ಲಿ ಮೂಢನಂಬಿಕೆ, ಕಂದಾಚಾರ ಪಾಲಿಸಲಾಗುತ್ತಿದೆ.

## ರೂ.7 ಕೋಟಿ ವೆಚ್ಚದಲ್ಲಿ ಸಾವನದುರ್ಗ ಅಭಿವೃದ್ಧಿ: ಶಾಸಕ ಎಚ್.ಸಿ. ಬಾಲಕೃಷ್ಣ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಗಡಿ

ಸಾವನದುರ್ಗ ಬೆಟ್ಟವನ್ನು ಏಕದಿನದ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ಟೊಯೊಟಾ ಕಂಪನಿ ಮುಂದೆ ಬಂದಿದೆ.

ರೂ.7 ಕೋಟಿ ವೆಚ್ಚದಲ್ಲಿ ಬೆಟ್ಟದಲ್ಲಿ ಪ್ರವಾಸಿಗರಿಗೆ ಮೂಲಸೌಕರ್ಯ ಒದಗಿಸಲು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು. ಸಾವನದುರ್ಗ ಬೆಟ್ಟದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ನಿಟ್ಟಿನಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಸಾವದುರ್ಗಕ್ಕೆ ಆಹ್ವಾನಿಸಲು ಚಿಂತನೆ ನಡೆದಿದೆ. ಈಗಗಲೇ ಈ ಬಗ್ಗೆ ಅರಣ್ಯ ಅಧಿಕಾರಿಗಳ ಜತೆ ಚರ್ಚೆ ಮಾಡಲಾಗಿದೆ ಎಂದರು.

ವಾರಾಂತ್ಯದಲ್ಲಿ ಸಾವನದುರ್ಗ ಬೆಟ್ಟಕ್ಕೆ ಬರುವ ಪ್ರವಾಸಿಗರು ಮತ್ತು ಚಾರಣಿಗರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ಆದರೆ, ಅದಕ್ಕೆ ತಕ್ಕಂತೆ ಅನುಕೂಲತೆಗಳು ಇಲ್ಲ. ಹಾಗಾಗಿ ಊಟ, ವಸತಿ, ನೀರು, ಶೌಚಾಲಯ ಮುಂತಾದ ಮೂಲಸೌಕರ್ಯ ಕಲ್ಪಿಸಿದರೆ ಸಾವನದುರ್ಗ ಪ್ರಮುಖ ಪ್ರವಾಸಿ ತಾಣವಾಗಿ ಅಭಿವೃದ್ಧಿ ಹೊಂದಲಿದೆ ಎಂದರು.

ಈ ಹಿಂದೆ ಎಚ್.ಎಂ.ರೇವಣ್ಣ ಸಚಿವರಾಗಿದ್ದ ಅವಧಿಯಲ್ಲಿ ಕೆಂಪೇಗೌಡ ಉದ್ಯಾನ ನಿರ್ಮಾಣ ಮಾಡಲಾಗಿತ್ತು. ಜಿಂಕೆ ಸೇರಿದಂತೆ ಹಲವು ವನ್ಯಜೀವಿಗಳನ್ನು ಸಾಕಲಾಗಿತ್ತು. ಸರಿಯಾದ ನಿರ್ವಹಣೆ ಇಲ್ಲದೆ ಯಾವುದೇ ಪ್ರಾಣಿಗಳು ಇಲ್ಲ. ಉದ್ಯಾನವನ್ನು ಪುನಶ್ಚೇತನಗೊಳಿಸಲು ನಿರ್ಧರಿಸಲಾಗಿದ್ದು ಮತ್ತೇ ಇಲ್ಲಿಗೆ ಜಿಂಕೆ ಸೇರಿದಂತೆ ಮುಂತಾದ ಪ್ರಾಣಿ, ಪಕ್ಷಿಗಳನ್ನು ತರುವ ಯೋಚನೆ ಇದೆ ಎಂದರು.

ನಾಯಕನಪಾಳ್ಯ ಗೇಟ್ ಬಳಿ ಇರುವ ದಳವಾಯಿ ಕೆರೆಯಲ್ಲಿ ದೋಣಿ ವಿಹಾರ ಆರಂಭಿಸುವ ಯೋಚನೆ ಇದೆ. ಜೊತೆಗೆ ಮಂಚನಬೆಲೆಯಿಂದ ಸಾವನದುರ್ಗದವರೆಗೂ ರೋಪ್ ವೇ ನಿರ್ಮಾಣದ ಯೋಜನೆ ಇದೆ. ಅರಣ್ಯ ಇಲಾಖೆ ಯಾವ ರೀತಿ ಸ್ಪಂದಿಸುತ್ತದೆ ಮತ್ತು ಕಾನೂನಿನಲ್ಲಿ ಅವಕಾಶ ಇದೆಯಾ ನೋಡಬೇಕು.

ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಲಾಗುತ್ತಿದೆ ಎಂದು ಬಾಲಕೃಷ್ಣ ವಿವರಿಸಿದರು.

# ಮಠದ ಉಮಾಮಹೇಶ್ವರ ಶ್ರೀಗಳ ಮೇಲೆ ದಾಳಿ

• ಉದಯವಾಹಿನಿ, ಚಿಕ್ಕಬಳ್ಳಾಪುರ



ಜಿಲ್ಲೆಯ ಕಳವರದ ಓಂಕಾರ ಜ್ಯೋತಿ ಮಠದ ಉಮಾಮಹೇಶ್ವರ ಶ್ರೀಗಳ ಮೇಲೆ ಅವರ ಜನ್ಮ ದಿನದಂದೇ ಗುಂಪು ದಾಳಿ ಮಾಡಿ ನಿಂದಿಸಿ ಹಲ್ಲೆಗೈದು ದೌರ್ಜನ್ಯ ಎಸಗಿದೆ. 10ರ ಮಧ್ಯಾಹ್ನ ನೂರಕ್ಕೂ ಹೆಚ್ಚು ಜನ ಮಠದೊಳಗೆ ಏಕಾಏಕಿ ಅತಿಕ್ರಮಣ ಪ್ರವೇಶ ಮಾಡಿ ಕೊಠಡಿಯ ಬಾಗಿಲು ಒದ್ದು ಶ್ರೀಗಳನ್ನು ಎಳೆದಾಡಿ ತಳ್ಳಿದ್ದರಿಂದ ನೆಲಕ್ಕೆ ಬಿದ್ದ ಶ್ರೀಗಳು ಗಾಯಗೊಂಡು ಆಸ್ಪತ್ರೆಗೆ ದಾಖಲಾದರು. ಘಟನೆಗೆ ಪೋಲೀಸರು ಮೂಕಪ್ರೇಕ್ಷಕರಾಗಿದ್ದರು.

ವಿಟು ಚಾನಲ್‌ನ ಸೂರ್ಯ ಸ್ವಾಮೀಜಿಯವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆಯೊಡ್ಡಿ ಟಿವಿ ಹಾಗೂ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡಿದ್ದಾನೆ. ಮರಿಯಪ್ಪ ಸ್ವಾಮಿಯವರು ಇಲ್ಲಿ ಭೂಮಿ ಖರೀದಿಸಿ ಮಠ ಕಟ್ಟಿ ನಿಧನಾನಂತರ ಅವರ ಧರ್ಮ ಪತ್ನಿ ಜಯಮ್ಮ ಇದುವರೆಗೆ ಮಠ ಮುನ್ನಡೆಸಿದ್ದಾರೆ. ಅವರಿಗೆ ವಯಸ್ಸಾಗಿದ್ದರಿಂದ ಉಮಾಮಹೇಶ್ವರ ಶ್ರೀಗಳನ್ನು ಕರೆಸಿಕೊಂಡು ಟ್ರಸ್ಟ್ ರಚಿಸಿ ಮಠದ ಆಸ್ತಿಯನ್ನು ಟ್ರಸ್ಟ್‌ಗೆ ವರ್ಗಾಯಿಸಿದ್ದಾರೆ. ಕಳೆದ ಜುಲೈನಲ್ಲಿ ಪೀಠಾರೋಹಣವೂ ನಡೆದಿದ್ದು ಇದು ಗೊತ್ತಾಗುತ್ತಿದ್ದಂತೆಯೇ ರಕ್ತಸಂಬಂಧಿಕರೆಂದು ಹೇಳಿಕೊಂಡು ಲೀಲಾ ಚಂದ್ರಶೇಖರ್ ವೆಂಕಟರೆಡ್ಡಿ ಗೋಪಿನಾಥ್ ಪ್ರಕಾಶ ಗುರುಪ್ರಸಾದ್ ಮುಂತಾದವರು ಈ ದೊಂಬಿ ಎಬ್ಬಿಸಿದ್ದಾರೆ. ಹುಳಿಮಾವುವಿನ ಪಾರ್ಥಸಾರಥಿ ಹಾಗೂ ಲಕ್ಷ್ಮೀನಾರಾಯಣ ಇದಕ್ಕೆ ಕುಮ್ಮಕ್ಕು ನೀಡಿರುವುದಾಗಿ ಕೇಳಿ ಬಂದಿದೆ. ಸಿದ್ಧಾರೂಢ ಮಿಷನ್ ನ ಡಾ. ಆರೂಢಭಾರತೀ ಸ್ವಾಮೀಜಿ, ಅಖಿಲ ಭಾರತ ಸಂತ ಮಹಾಪರಿಷತ್‌ನ ಉಪಾಧ್ಯಕ್ಷ ರಾಜೇಶನಾಥ ಗುರುಜಿ ಸಾಮಾಜಿಕ ಕಾರ್ಯಕರ್ತೆ ಚಿತ್ರ ನಟಿ ರಮಿತಾ ಸೂರ್ಯವಂಶಿ ಹಾಗೂ ಭಕ್ತಾದಿಗಳ ಸಮ್ಮುಖದಲ್ಲಿಯೇ ಅವರ ಪ್ರತಿರೋಧದ ನಡುವೇ ಈ ದುರ್ಘಟನೆ ನಡೆದಿದ್ದು ಸೂರ್ಯ ಮತ್ತು ಗುಂಪು ತಮ್ಮನ್ನೂ ಅಶ್ಲೀಲವಾಗಿ ನಿಂದಿಸಿ ಘನತೆಗೆ ಧಕ್ಕೆ ತಂದಿದೆ ಎಂದಿದ್ದಾರೆ. ಪೋಲೀಸ್ ದೂರು ದಾಖಲಾಗಿದ್ದು ಇದುವರೆಗೆ ಯಾರನ್ನೂ ಬಂಧಿಸಿಲ್ಲ. ಆರೋಪಿ ಕಿಡಿಗೇಡಿಗಳನ್ನು ಬಂಧಿಸಬೇಕು ಹಾಗೂ ಕರ್ತವ್ಯಲೋಪ ಎಸಗಿದ ಪೋಲೀಸರನ್ನು ಅಮಾನತು ಮಾಡಬೇಕೆಂದು ಸಾಧು ಸಂತರು ಟ್ರಸ್ಟಿಗಳು ಭಕ್ತಾದಿಗಳು ಆಗ್ರಹಿಸಿದ್ದಾರೆ.

# 24ಕ್ಕೆ ಹುಬ್ಬಳ್ಳಿಯಲ್ಲಿ 47,345 ಮನೆ ಹಂಚಿಕೆ: ಸಚಿವ ಜಮೀರ್ ಅಹ್ಮದ್

• ಉದಯವಾಹಿನಿ, ಚಿಂತಾಮಣಿ

ಗ್ಯಾರಂಟಿಗಳ ಯೋಜನೆಗಳ ನಡುವೆಯೂ ಬಡವರಿಗೆ ಕಳೆದ ವರ್ಷದ ಫೆಬ್ರುವರಿಯಲ್ಲಿ 36,789 ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. ಅದೇ ರೀತಿ ಹುಬ್ಬಳ್ಳಿಯಲ್ಲಿ ಇದೇ 24ರಂದು ಬಡವರಿಗೆ 47,345 ಮನೆಗಳನ್ನು ವಿತರಿಸಲಾಗುವುದು ಎಂದು ವಸತಿ ಮತ್ತು ವಕ್ಫ್ ಖಾತೆ ಸಚಿವ ಜಮೀರ್ ಅಹ್ಮದ್ ಖಾನ್ ಅವರು ತಿಳಿಸಿದರು.

ಬಿಜೆಪಿ ನಾಯಕರು ಸುಳ್ಳು ಹೇಳಿಕೊಂಡು ಕಾಲ ಕಳೆಯುತ್ತಿದ್ದಾರೆ. 2019ರಿಂದ 2023ರವರೆಗಿನ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಆಗಿದ್ದ ಎಚ್.ಡಿ. ಕುಮಾರಸ್ವಾಮಿ ಹಾಗೂ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಆಡಳಿತಾವಧಿಯಲ್ಲಿ ಬಡವರಿಗೆ ಒಂದು ಮನೆಯನ್ನು ನೀಡಿರಲಿಲ್ಲ. ಕೊಳಚೆ ನಿರ್ಮೂಲನಾ ಮಂಡಳಿಯಿಂದ ಅವರ ಕಾಲದಲ್ಲಿ ಒಂದು ಮನೆ ಮಂಜೂರು ಮಾಡಿದ್ದರೂ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ' ಸವಾಲು ಹಾಕಿದರು.

ಒಂದು ಮನೆ ನಿರ್ಮಾನಕ್ಕೆ ರೂ.7.5 ಲಕ್ಷ ವೆಚ್ಚವಾಗುತ್ತದೆ. ಈ ಪೈಕಿ ರಾಜ್ಯ ಸರ್ಕಾರ ರೂ.1.5 ಲಕ್ಷ ಮತ್ತು ಕೇಂದ್ರ ಸರ್ಕಾರ ರೂ.1.5 ಲಕ್ಷ ನೀಡುತ್ತದೆ. ಉಳಿದ ರೂ.4.5 ಲಕ್ಷವನ್ನು ಫಲಾನುಭವಿಗಳು ಭರಿಸಬೇಕು ಎಂದರು.


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. 2028ರವರೆಗೆ ಮುಖ್ಯಮಂತ್ರಿಯಾಗಿರುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಮಾಡುವುದಿದ್ದರೆ ಹೈಕಮಾಂಡ್ ಮಾಡುತ್ತದೆ. ಹೈಕಮಾಂಡ್ ತೀರ್ಮಾನವನ್ನು ಎಲ್ಲರೂ ಪಾಲಿಸುತ್ತೇವೆ ಎಂದರು.

# 2ಎಗೆ ನಾಮಧಾರಿ ಒಕ್ಕಲಿಗರು: ಕೇಂದ್ರ ಸಚಿವ ಕುಮಾರಸ್ವಾಮಿ ಭರವಸೆ

## ಬೇಡಿಕೆಗಳ ಸಂಪೂರ್ಣ ಮಾಹಿತಿ, ಹಿಂದುಳಿದ ವರ್ಗಗಳ ಆಯೋಗ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಬೇಡಿಕೆಯ ಪತ್ರಗಳನ್ನೂ ತನ್ನಿ ಎಂದು ಹೇಳಿಕೆ

• ಉದಯವಾಹಿನಿ, ಕೆ.ಆರ್.ನಗರ

ಅತ್ಯಂತ ಸಣ್ಣ ಪ್ರಮಾಣದಲ್ಲಿರುವ ನಾಮಧಾರಿಗೌಡ ಒಕ್ಕಲಿಗ ಸಮುದಾಯವನ್ನು 2ಎ ಪ್ರವರ್ಗ'ಕ್ಕೆ ಸೇರಿಸುವ ಪ್ರಯತ್ನಕ್ಕೆ ನಾನು ಪ್ರಾಮಾಣಿಕವಾಗಿ ಬೆಂಬಲ ನೀಡುತ್ತೇನೆ' ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು. ಇಲ್ಲಿ ನಡೆದ ನಾಮಧಾರಿಗೌಡ ಸಮುದಾಯ ಭವನದ ಬೆಳ್ಳಿಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, ಬೇಡಿಕೆಗಳ ಸಂಪೂರ್ಣ ಮಾಹಿತಿ, ಹಿಂದುಳಿದ ವರ್ಗಗಳ ಆಯೋಗ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಬೇಡಿಕೆಯ ಪತ್ರಗಳನ್ನೂ ತನ್ನಿ ಎಂದು ಹೇಳಿದರು. ಸಣ್ಣ ಪ್ರಮಾಣದ ಜನಸಂಖ್ಯೆ ಹೊಂದಿರುವ ನಾಮಧಾರಿಗೌಡ ಸಮುದಾಯವು ರಾಜಕೀಯ ಸೇರಿ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕಿದೆ. ನಮ್ಮನ್ನು ಗುರುತಿಸಬೇಕು ಎಂದು ಸಮುದಾಯದ ಜನರು ಕೇಳುತ್ತಲೇ ಇದ್ದಾರೆ. ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ ಎಂದರು.

**ಸಣ್ಣ ಸಮುದಾಯಗಳಿಗೆ:** ಚಿಕ್ಕಮಗಳೂರು ಭಾಗದಲ್ಲಿ ಸರ್ಪ ಒಕ್ಕಲಿಗರು ಇದ್ದಾರೆ. ಕಡಿಮೆ ಜನ ಸಂಖ್ಯೆಯ ಆ ಸಮುದಾಯಕ್ಕೆ ಸಾವಿರ ಮತಗಳೂ ಇರಲಿಲ್ಲ.

ಎಸ್.ಆರ್.ಲಕ್ಷ್ಮಯ್ಯ ಎಂಬ ನಾಯಕರಿದ್ದರು. ಸಮುದಾಯವನ್ನು ಎಚ್.ಡಿ.ದೇವೇಗೌಡರು ಎರಡು ಬಾರಿ ಶಾಸಕರನ್ನಾಗಿ ಮಾಡಿದರು. ನಂತರ ಅವರ ಪುತ್ರ ಧರ್ಮೇಗೌಡರು 2 ಬಾರಿ ಪರಿಷತ್ ಸದಸ್ಯರಾದರು. ಒಮ್ಮೆ ಉಪಸಭಾಪತಿಯಾದರು. ಅವರ ಇನ್ನೊಬ್ಬ ಪುತ್ರ ಎಸ್.ಎಲ್ ಭೋಜೇಗೌಡರು ನಮ್ಮ ಪಕ್ಷದ ಎಂಎಲ್‌ಸಿ ಆಗಿದ್ದಾರೆ ಎಂದು ತಿಳಿಸಿದರು.

ನಾಮಧಾರಿಗೌಡ ಸಮುದಾಯದ ಒಬ್ಬರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಲಾಗುವುದು. ಸಮಾಜದ ಯುವಕರು ರಾಜಕೀಯಕ್ಕೆ ಬರಬೇಕು. ನನಗೆ ರಾಜಕೀಯ ಶಕ್ತಿ ತುಂಬಲೆಂದು ನಾನು ಭರವಸೆ ನೀಡುವುದಿಲ್ಲ. ಪ್ರಾಮಾಣಿಕವಾಗಿ ಸ್ಪಂದಿಸುತ್ತೇನೆ' ಎಂದು ತಿಳಿಸಿದರು.

ಶಾಸಕ ಡಿ.ರವಿಶಂಕರ್, ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್, ನವನಗರ ಅರ್ಬನ್ ಕೋ ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬರಸಂತ್ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ಕೇಂದ್ರ ಸಮಿತಿ ಗೌರವ ಅಧ್ಯಕ್ಷ ಡಿ.ಸುಂದರರಾಜ್, ಸಂಘದ ಅಧ್ಯಕ್ಷ ಅಶೋಕ್ ಕುಮಾರ್, ಉಪಾಧ್ಯಕ್ಷ ಕೆ.ಆರ್.ಗಿರೀಶ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕೃಷ್ಣಗೌಡ, ನಿಕಟಪೂರ್ವ ಕಾರ್ಯದರ್ಶಿ ಎಂ.ಆರ್.ಪುಟ್ಟರಾಜು ಉಪಸ್ಥಿತರಿದ್ದರು


ಉದಯವಾಹಿನಿ ಚಿತ್ರ

**ಅನುದಾನದ ಭರವಸೆ**

ದೇವಸ್ಥಾನ ಕಟ್ಟಲು ಸಿಎ ನಿವೇಶನ ಕೇಳಿದ್ದೀರಿ. ರಾಜ್ಯ ಸರ್ಕಾರದಿಂದ ಕೊಡಿಸುವ ಕೆಲಸ ಮಾಡುತ್ತೇನೆ. ಸಮುದಾಯ ಭವನದ ಅಭಿವೃದ್ಧಿಗೆ ಅನುದಾನ ಕೊಡುತ್ತೇನೆ' ಎಂದು ಭರವಸೆ ನೀಡಿದರು.

ಇನ್ನೊಂದು ಅತಿ ಸಣ್ಣ ಸಮುದಾಯವಾದ ಉಪ್ಪಾರ ಸಮಾಜಕ್ಕೂ ಪಕ್ಷ ಅವಕಾಶ ಕೊಟ್ಟಿದೆ. ಎಚ್.ಸಿ. ನೀರಾವರಿ ಅವರನ್ನು ರಾಜಕೀಯಕ್ಕೆ ತಂದೆವು. ಅನೇಕ ಸಮುದಾಯಗಳಿಗೆ ಜೆಡಿಎಸ್ ಅವಕಾಶ ತೆರೆದಿದೆ. ಕೆಲವರು ನಾವು ಹಿಂದುಳಿದ ನಾಯಕರೆಂದು ಫಲಕ ಹಾಕಿಕೊಂಡು ಓಡಾಡುತ್ತಾರೆ. ಆದರೆ, ಆ ಸಮುದಾಯವನ್ನು ಬೆಳೆಸಿದವರು.

-ದೇವೇಗೌಡರು

ಅಂತರಾಳದಿಂದ..
EDITORIAL

# ಕಾಸರಗೋಡಿನಲ್ಲಿ ಮಾತ್ರ ಕನ್ನಡ ಉಳಿದರೆ ಸಾಕೆ? ಕರ್ನಾಟಕದಲ್ಲೂ ಉಳಿಯಬೇಡವೆ?

ಇತ್ತೀಚೆಗೆ ಬೆಂಗಳೂರಿನ ಕೋಗಿಲು ಬುಲ್ಡೋಜರ್ ಪ್ರಕರಣಕ್ಕೆ ಸಂಬಂಧಿಸಿ ನೆರೆಯ ಕೇರಳ ಮುಖ್ಯಮಂತ್ರಿಯವರು ಹೇಳಿಕೆ ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಜುಗರಕ್ಕೆ ತಳ್ಳಿದ್ದರು. ಇದೀಗ ಕಾಸರಗೋಡಿನಲ್ಲಿ ಮಲಯಾಳಂ ಹೇರಿಕೆ ವಿಷಯವನ್ನು ಮುಂದಿಟ್ಟು ಸಿದ್ದರಾಮಯ್ಯ ಕೇರಳ ಮುಖ್ಯಮಂತ್ರಿಗೆ ಪತ್ರವನ್ನು ಬರೆದಿದ್ದಾರೆ. ಮಲಯಾಳಂ ಭಾಷಾ ಮಸೂದೆ-2025 ರಿಂದಾಗಿ ಕೇರಳ ಅದರಲ್ಲೂ ಕಾಸರಗೋಡಿನಲ್ಲಿರುವ ಕನ್ನಡ ಭಾಷಿಗರ ಮೇಲೆ ಮಲಯಾಳಂ ಹೇರಿದಂತಾಗುತ್ತದೆ ಎಂದು ಸಿದ್ದರಾಮಯ್ಯ ಪತ್ರದಲ್ಲಿ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.

> **ಮಾತೃ ಭಾಷೆ ಮಲಯಾಳಂ ಅಲ್ಲದ ವಿದ್ಯಾರ್ಥಿಗಳು ರಾಷ್ಟ್ರೀಯ ಶಿಕ್ಷಣ ಪಠ್ಯ ಕ್ರಮಕ್ಕೆ ಅನುಗುಣವಾಗಿ ಶಾಲೆಯಲ್ಲಿ ಲಭ್ಯವಿರುವ ಭಾಷೆ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಕನ್ನಡಿಗರ ಭಾಷಾ ಹಕ್ಕು ರಕ್ಷಿಸುವ ಸಲುವಾಗಿ ಈ ಮಸೂದೆಯನ್ನು ತಂದಿದ್ದೇವೆ ಎಂದು ಮುಖ್ಯಮಂತ್ರಿ ಪಿಣರಾಯಿ ತಿಳಿಸಿದ್ದರೆ, ಸಿದ್ದರಾಮಯ್ಯ ಅವರು ಮಸೂದೆ ಅಧ್ಯಯನ ಮಾಡದೆ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದಾರೆ. ಹೊಸ ಮಸೂದೆಯಲ್ಲಿ ಮಲಯಾಳಂ ಐಚ್ಛಿಕ ಎಂದು ಕಾನೂನು ಸಚಿವ ಪಿ. ರಾಜೀವ್ ಸ್ಪಷ್ಟಪಡಿಸಿದ್ದಾರೆ.**

ಕೇರಳ ಸರಕಾರವು ಪ್ರಸ್ತಾವಿತ ವಿಧಾನವನ್ನು ಭಾಷಾ ಅಲ್ಪಸಂಖ್ಯಾತ ಸಮುದಾಯಗಳು, ಶಿಕ್ಷಣ ತಜ್ಞರು ಮತ್ತು ನೆರೆಯ ರಾಜ್ಯಗಳೊಂದಿಗೆ ವಿಶಾಲವಾದ, ಎಲ್ಲರನ್ನು ಒಳಗೊಂಡ ಸಂವಾದದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಇದಕ್ಕೆ ಕೇರಳ ಮುಖ್ಯಮಂತ್ರಿಯೂ ಪ್ರತಿಕ್ರಿಯಿಸಿದ್ದು ಕಾಸರಗೋಡು ಕನ್ನಡಿಗರ ಮೇಲೆ ನಾವು ಮಲಯಾಳಂ ಹೇರುತ್ತಿಲ್ಲ. ಭಾಷಾ ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆ ಕಲಿಯಲು ಯಾವ ಅಡ್ಡಿಯೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕಾಸರಗೋಡು ಕನ್ನಡಿಗರ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಳಜಿ ಅಭಿನಂದನೀಯ. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು ಎಂದು ಕಯ್ಯಾರ ಕಿಂಞಣ್ಣ ರೈ ಬಿ. ಎಂ. ಇದಿನಬ್ಬ ಸೇರಿದಂತೆ ಹಲವು ಸಾಹಿತಿಗಳು, ಕನ್ನಡ ಪರ ಹೋರಾಟಗಾರರು ಈ ಹಿಂದೆ ಧ್ವನಿಯೆತ್ತಿದ್ದರು. ಆದರೆ ಇಂದು ಕಾಸರಗೋಡು ಕರ್ನಾಟಕಕ್ಕೆ ಸೇರುವುದು ದೂರದ ಮಾತಾಗಿದೆ. ಕರ್ನಾಟಕ ಪರ ಹೋರಾಟ ಕಾಸರಗೋಡಿನಲ್ಲಿ ತಣ್ಣಗಾಗಿದ್ದು, ಹೊಸ ತಲೆಮಾರು ಕೇರಳವನ್ನೇ ತಮ್ಮ ರಾಜ್ಯವಾಗಿ ಸ್ವೀಕರಿಸಿ ಬೆಳೆಯುತ್ತಿದೆ. ಇಂತಹ ಸಂದರ್ಭದಲ್ಲಿ ಅಲ್ಲಿರುವ ಕನ್ನಡ ಭಾಷಿಗರ ಹಿತಕಾಯುವ ಬಗ್ಗೆ ರಾಜ್ಯ ಸರಕಾರ ಕೇರಳಕ್ಕೆ ಒತ್ತಡಗಳನ್ನು ಹಾಕಬಹುದಾಗಿದೆ.

ಕಾಸರಗೋಡನ್ನು ಕೇರಳಕ್ಕೆ ಬಿಟ್ಟುಕೊಟ್ಟರೂ ಅಲ್ಲಿರುವ ಕನ್ನಡಿಗರ ಹಿತಾಸಕ್ತಿಯನ್ನು ರಾಜ್ಯ ಮರೆತಿಲ್ಲ ಎನ್ನುವುದನ್ನು ಈ ಮೂಲಕ ಕೇರಳ ಸರಕಾರಕ್ಕೆ ಸ್ಪಷ್ಟಪಡಿಸಿದಂತಾಗಿದೆ. ಕೇರಳ ಸರಕಾರವು ಸ್ಪಷ್ಟೀಕರಣವನ್ನು ನೀಡಿರುವುದರಿಂದ, ಕರ್ನಾಟಕದ ರಾಜಕಾರಣಿಗಳು ಅನಗತ್ಯ ವಿವಾದಗಳನ್ನು ಸೃಷ್ಟಿಸುವುದು ಸ್ವತಃ ಕಾಸರಗೋಡಿನಲ್ಲಿರುವ ಕನ್ನಡಿಗರಿಗೂ ಬೇಕಾಗಿಲ್ಲ ಯಾಕೆಂದರೆ, ಕಾಸರಗೋಡಿನ ಜನರು ಹಲವು ದಶಕಗಳಿಂದ ಅತ್ತ ಕೇರಳಕ್ಕೂ ಇತ್ತ ಕರ್ನಾಟಕಕ್ಕೂ ಸಲ್ಲದವರಂತೆ ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಾ ಬಂದಿದ್ದಾರೆ. ಹಿರಿಯ ತಲೆಮಾರು ಕಾಸರಗೋಡು ಕರ್ನಾಟಕಕ್ಕೆ ಸೇರುತ್ತದೆ ಎನ್ನುವ ಆಸೆಯೊಂದಿಗೆ ಜೀವ ಹಿಡಿದು ಬದುಕಿದ್ದರು. ಆದರೆ ಹೊಸ ತಲೆಮಾರು, ಕೇರಳ ರಾಜ್ಯದೊಂದಿಗೆ ಮಾನಸಿಕವಾಗಿ ಬೆಸೆದು ಬಾಳುವ ಪ್ರಯತ್ನವನ್ನು ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಅನಗತ್ಯ ಹಸ್ತಕ್ಷೇಪ ಕನ್ನಡ-ಮಲಯಾಳಂ ಸಂಘರ್ಷಕ್ಕೆ ಕಾರಣವಾಗಿ ಅವರಿಗೆ ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸಬಹುದು. ಮಲಯಾಳಂ ದ್ರಾವಿಡ ಭಾಷೆಗಳಲ್ಲಿ ಒಂದು. ಅದು ಕೇರಳದ ರಾಜ್ಯ ಭಾಷೆ. ರಾಜ್ಯದಲ್ಲಿ ತನ್ನ ಭಾಷೆಯನ್ನು ಉಳಿಸಿ ಬೆಳೆಸುವುದಕ್ಕೆ ಕ್ರಮ ತೆಗೆದು ಕೊಂಡರೆ ಅದನ್ನು ಆಕ್ಷೇಪಿಸುವಂತಿಲ್ಲ. ಕಾಸರಗೋಡಿನಲ್ಲಿ ಕನ್ನಡ-ಮಲಯಾಳಂ ಜೊತೆಯಾಗಿ ಹೆಜ್ಜೆಯಿಟ್ಟು ಮುಂದೆ ಸಾಗುವುದು ಅನಿವಾರ್ಯವಾಗಿದೆ. ಈ ವಾಸ್ತವವನ್ನು ಈಗಾಗಲೇ ಕಾಸರಗೋಡಿನ ಕನ್ನಡಿಗರೂ ಅರ್ಥಮಾಡಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ಕರ್ನಾಟಕದ ಬಿಜೆಪಿ ನಾಯಕರು ಕಾಸರಗೋಡಿನ ಬಗ್ಗೆ ಅಲ್ಲಿನ ಕನ್ನಡಿಗರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಇದೇ ಸಂಘ ಪರಿವಾರ ಮತ್ತು ಬಿಜೆಪಿಯ ನಾಯಕರು ಕೊರೋನ ಕಾಲದಲ್ಲಿ ಕಾಸರಗೋಡಿನ ಜನರೊಂದಿಗೆ ಹೇಗೆ ವರ್ತಿಸಿದ್ದರು ಎನ್ನುವುದು ಕಾಸರಗೋಡು ಕನ್ನಡಿಗರು ಇನ್ನೂ ಮರೆತಿಲ್ಲ. ಕಾಸರಗೋಡು ಕರ್ನಾಟಕದ ಆಸ್ತಿ ಎಂದು ಬೊಬ್ಬಿಡುತ್ತಿದ್ದ ದಕ್ಷಿಣ ಕನ್ನಡದ ಜನಪ್ರತಿನಿಧಿಗಳು ಕೊರೋನ ಕಾಲದಲ್ಲಿ ಕಾಸರಗೋಡಿನ ಕನ್ನಡಿಗರನ್ನು ಗಡಿದಾಟಿ ಮಂಗಳೂರಿಗೆ ಆಗಮಿಸಲು ಅವಕಾಶ ನೀಡಲಿಲ್ಲ. ಆಸ್ಪತ್ರೆಗಳಿಗಾಗಿ ಕಾಸರಗೋಡಿನ ದೊಡ್ಡ ಸಂಖ್ಯೆಯ ಜನರು ಮಂಗಳೂರನ್ನೇ ಆಶ್ರಯಿಸುತ್ತಾ ಬಂದಿದ್ದರು. ಕೊರೋನ ಕಾಲದಲ್ಲಿ ಆಂಬ್ಯುಲೆನ್ಸ್‌ನಲ್ಲಿ ತುರ್ತು ಚಿಕಿತ್ಸೆಗಾಗಿ ಮಂಗಳೂರಿಗೆ ಆಗಮಿಸುತ್ತಿದ್ದ ಕಾಸರಗೋಡಿನ ಜನರನ್ನು ಕೇರಳಿಗರು ಎಂಬ ಹಣೆ ಪಟ್ಟಿ ಕಟ್ಟಿ ಅವರನ್ನು ತಡೆಯಲಾಯಿತು. ಕಾಡಿಬೇಡಿದರೂ ಅವರನ್ನು ಕರ್ನಾಟಕದೊಳಗೆ ಬಿಜೆಪಿ ಮತ್ತು ಸಂಘಪರಿವಾರ ನಾಯಕರು ಬಿಟ್ಟುಕೊಟ್ಟರಲಿಲ್ಲ. ಆಗ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಸ್ತಿತ್ವದಲ್ಲಿತ್ತು. ಕಾಸರಗೋಡಿನ ಕನ್ನಡಿಗರ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿರುವ ವಿರೋಧ ಪಕ್ಷದ ನಾಯಕ ಅಶೋಕ್, ಕನ್ನಡದ ಭಾಗವೇ ಆಗಿರುವ ಬೆಳಗಾವಿಯಲ್ಲಿ ಕನ್ನಡಿಗರ ದುಸ್ಥಿತಿಯ ಬಗ್ಗೆ ಎಷ್ಟು ಮಾತನಾಡಿದ್ದಾರೆ? ಬೆಳಗಾವಿ ಗಡಿಯಲ್ಲಿ ಮರಾಠಿ ಭಾಷಿಗರು ಕನ್ನಡ ಧ್ವಜಕ್ಕೆ ಅವಮಾನಿಸುತ್ತಿರುವುದರ ಬಗ್ಗೆ ಸಂಘ ಪರಿವಾರವಾಗಲಿ, ಬಿಜೆಪಿ ಮುಖಂಡರಾಗಲಿ ಧ್ವನಿಯೆತ್ತಿದ ಉದಾಹರಣೆಯಿಲ್ಲ. ಬಿಜೆಪಿ ನಾಯಕರು ಕಾಸರಗೋಡಿನಲ್ಲಿ ಕನ್ನಡ ಉಳಿಸುವ ಬಗ್ಗೆ ಮಾತನಾಡುವ ಮೊದಲು ಬೆಳಗಾವಿಯ ಗಡಿಭಾಗದಲ್ಲಿ ಕನ್ನಡಿಗರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಮಾತನಾಡಬೇಕು.

ಹಾಗೆಯೇ ರಾಜ್ಯ ಸರಕಾರ ಕಾಸರಗೋಡಿನ ಕನ್ನಡದ ಬಗ್ಗೆ ಕಾಳಜಿ ವಹಿಸಿದಂತೆಯೇ ಕರ್ನಾಟಕದಲ್ಲಿಯೂ ಕನ್ನಡ ಉಳಿಸುವ ಬಗ್ಗೆ ಕಾಳಜಿವಹಿಸಬೇಕು. ಕಾಸರಗೋಡಿನ ಕನ್ನಡಿಗರ ಸ್ಥಿತಿ ಪಕ್ಕಕ್ಕಿರಲಿ, ದಕ್ಷಿಣ ಕನ್ನಡದಲ್ಲಿ ಕನ್ನಡ ಭಾಷೆಯ ಸ್ಥಿತಿಗತಿಯ ಬಗ್ಗೆ ಸರಕಾರಕ್ಕೆ ಎಷ್ಟು ಗೊತ್ತಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಶಾಲೆಗಳು ಒಂದೊಂದಾಗಿ ಮುಚ್ಚುತ್ತಿರುವಂತೆಯೇ ಕನ್ನಡ ಮಾತನಾಡುವವರ ಸಂಖ್ಯೆಯೂ ಇಳಿಮುಖವಾಗುತ್ತಿದೆ.



# ರಾಮಾಯಣ

ಶ್ರೀರಾಮನು ಸೀತಾದೇವಿಯ ಆಭರಣಗಳನ್ನು ನೋಡಿ ದುಃಖಿಸಿದ್ದು

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ಕುರಿತು ಸುಗ್ರೀವ, ನಿನಗೆ ನನ್ನ ಪರಾಕ್ರಮವು ಗೊತ್ತಿಲ್ಲದ ಪಕ್ಷದಲ್ಲಿ ನಿನಗೆ ಗೊತ್ತಾಗುವಂತೆ ಮಾಡಿ ವಿಶ್ವಾಸವನ್ನು ಹುಟ್ಟಿಸುತ್ತೇನೆ ಎಂದು ನುಡಿದು ದುಂದುಭಿಯ ಶರೀರವನ್ನು ಪಾದಾಂಗುಷ್ಠದಿಂದ ಲೀಲಾಮಾತ್ರದಲ್ಲಿ ಮೇಲಕ್ಕೆ ಒದೆಯಲು ಆ ಶರೀರವು ಹತ್ತು ಗಾವುದ ದೂರವನ್ನು ದಾಟಿ ಬಿದ್ದಿತು. ಅದನ್ನು ನೋಡಿ ಸುಗ್ರೀವನು ಸೂರ್ಯಪ್ರಭೆಯಂತೆ ತನು ಕಾಂತಿಯುಳ್ಳ ಶ್ರೀರಾಮನನ್ನು ಕುರಿತು ಹೀಗೆಂದನು: ಶ್ರೀರಾಮ. ನನ್ನ ಅಣ್ಣನಾದ ವಾಲಿಯು ದುಂದುಭಿಯೊಡನೆ ಯುದ್ಧವನ್ನು ಮಾಡಿ ಸತ್ತ್ವಗೆಟ್ಟಿದ್ದ ಸಮಯದಲ್ಲಿ ಮಾಂಸಪೂರಿತವಾದ ದುಂದುಭಿಯ ಹಸಿಯ ಶರೀರವನ್ನು ಒಂದು ಗಾವುದ ದೂರದವರೆಗೆ ಎತ್ತಿ ಎಸೆದನು. ಈಗ ಒಣಗಿ ಮಾಂಸವಿಲ್ಲದೆ ಹುಲ್ಲಿನಂತೆ ಹಗುರವಾದ ಆ ಶರೀರವನ್ನು ಪಾದಾಂಗುಷ್ಟದಿಂದ ಹತ್ತು ಗಾವುದದೂರ ಹೋಗಿ ಬೀಳುವಂತೆ ಎಸೆದ ಮಾತ್ರದಿಂದಲೇ ನಿನ್ನಲ್ಲಿ ವಾಲಿಗಿಂತಲೂ ಬಲಾಧಿಕ್ಯವುಂಟೆಂದು ತಿಳಿಯಲು ಸಾಧ್ಯವಿಲ್ಲ. ಶ್ರೀರಾಮ. ವಾಲಿಯಿಂದಲೇ ದುಂದುಭಿಯ ಹಸಿಯ ಶರೀರವು ಒಂದು ಗಾವುದ ದೂರ ಎಸೆಯಲ್ಪಟ್ಟಿರುವಾಗ, ಒಣಶರೀರವು ಹತ್ತು ಗಾವುದದವರೆಗೆ ನಿನ್ನಿಂದ ಎಸೆಯಲ್ಪಟ್ಟುದು ಆಶ್ಚರ ವಲ್ಲ. ಆದ್ದರಿಂದ ನಿನ್ನ ಈ ಮಹಾಧನುಸ್ಸಿಗೆ ಹೆದೆಯೇರಿಸಿ ಒಂದು ಸಾಲವೃಕ್ಷವನು ನಿನ್ನ ಬಾಣದಿಂದ ಭೇದಿಸು. ನಿಶ್ಚಯವಾಗಿಯೂ ಅದನ್ನು ಭೇದಿಸಬಲ್ಲೆ. ಅದರಿಂದ ನನಗೆ ಸಂತೋಷವಾಗುವುದು. ನೀನು ತೇಜಸ್ವಿಗಳಲ್ಲಿ ಸೂರ್ಯನಂತೆಯೂ, ಮಹಾಪರ್ವತಗಳಲ್ಲಿ ಹಿಮಾಲಯದಂತೆಯ ಮೃಗಗಳಲ್ಲಿ ಸಿಂಹದಂತೆಯೂ ಮನುಷ್ಯರಲ್ಲಿ ಶ್ರೇಷ್ಟನೂ ಶೂರನೂ ಆಗಿದ್ದೀಯೆ ಎಂದನು.

**ಶ್ರೀರಾಮನು ವಾಲಿಸುಗ್ರೀವರ ಭೇದವನ್ನು ತಿಳಿಯದೆ ವಾಲಿಯನ್ನು ಬಿಟ್ಟಿದ್ದು:** ಈ ಪ್ರಕಾರ ಸುಗ್ರೀವನು ನುಡಿಯಲು ಶ್ರೀರಾಮನು ಆತನ ಸಂದೇಹಪರಿಹಾರಕ್ಕಾಗಿ ತನ್ನ ಭಯಂಕರವಾದ ಬಿಲ್ಲನ್ನು ತೆಗೆದು ಹೆಡೆಯನ್ನೇರಿಸಿದನು. ಆ ಬಿಲ್ಲಿನಲ್ಲಿ ಭೀಕರವಾದ ಒಂದು ಅಂಬನ್ನು ಹೂಡಿ ಸುಗ್ರೀವನು ಹೇಳಿದ ಮರಗಳನ್ನು ಗುರಿಮಾಡಿ ಎಸೆದನು. ಚಿನ್ನದ ಮುಲಾಮುಳ್ಳ ಆ ಬಾಣವು ಆ ಏಳು ಮರಗಳನ್ನೂ ತಟಹಾಯ್ದು ಪರ್ವತದ ತಪ್ಪಲನ್ನು ಭೇದಿಸಿ ಪುನಃ ಬಂದು ಶ್ರೀರಾಮನ ಬತ್ತಳಿಕೆಯನ್ನು ಸೇರಿತು. ಸುಗ್ರೀವನು ಆ ಬಾಣದ ಬಲವನ್ನು ಕಂಡು ಶ್ರೀರಾಮನಿಗೆ ಸಮಾನರಾದ ಪರಾಕ್ರಮಿಗಳಿಲ್ಲವೆಂದು ಆಶ್ಚರ ಪಟ್ಟು, ಆತನು ವಾಲಿಯನ್ನು ಸಂಹರಿಸು ವುದಕ್ಕೆ ಸಮರ್ಥನೆಂದು ನಿಶ್ಚಯಿಸಿದನು. ಅವನು ಶ್ರೀರಾಮನಿಗೆ ಕೈಮುಗಿದು ಹರ್ಷದಿಂದ ಶ್ರೀರಾಮ ಹಾಗೂ ಲೋಕದಲ್ಲಿ ಧನುರ್ವಿದ್ಯಾಪಾರಂಗತರಾದ ವೀರಭಟರಲ್ಲಿ ನೀನೇ ಶ್ರೇಷ್ಠನು. ಸಮಸ್ತ ದೇವಾಸುರರನ್ನಾದರೂ ನೀನು ಬಾಣಗಳಿಂದ ಕೊಲ್ಲುವುದಕ್ಕೆ ಸಮರ್ಥನು. ವಾಲಿಯನ್ನು ಕೊಲ್ಲುವೆ ಯೆಂದು ಹೇಳುವುದೇನು ಒಂದು ಬಾಣದಿಂದ ಏಳು ಮರಗಳನ್ನು ಕೆಡಹಿ ಭೂಮಿಯಲ್ಲಿ ತಾಗುವಂತೆ ಶರ ಸಂಧಾನ ಮಾಡುವ ನಿನಗೆ ಎದುರಾಗಿ ರಣರಂಗದಲ್ಲಿ ನಿಲ್ಲುವವರಾರು ನನ್ನ ಮನಸ್ಸಿನಲ್ಲಿದ್ದ ಸಂದೇಹವು ತೀರಿತು. ನನ್ನ ದುಃಖವೂ ನಿವೃತ್ತವಾಯಿತು.

ಮುಂದುವರಿಯುವುದು...




# ಶಬರಿಮಲೆಯಲ್ಲಿ ಕನ್ನಡದ ನಾದ

## ಭಾಷಾಭಿಮಾನ, ಭಕ್ತಿಯ ಅಪೂರ್ವ ಸಂಗಮ



☛ ವಿಶ್ವಾಸ್.ಡಿ.ಗೌಡ

ಶಬರಿಮಲೆ ಎಂದರೆ ಕೇವಲ ಒಂದು ಪವಿತ್ರ ಕ್ಷೇತ್ರ ಮಾತ್ರವಲ್ಲ; ಅದು ಭಾರತದ ಅನೇಕ ಭಾಷೆಗಳು, ಸಂಸ್ಕೃತಿಗಳು ಮತ್ತು ನಂಬಿಕೆಗಳು ಒಂದಾಗುವ ಮಹಾನ್ ಆಧ್ಯಾತ್ಮಿಕ ಸಂಗಮ. ದಿನದ ಪೂಜಾಕ್ರಿಯೆಗಳೆಲ್ಲ ಮುಗಿದು, ರಾತ್ರಿ ಹೊತ್ತು ಶಬರಿಮಲೆಯಲ್ಲಿ ಸ್ವಾಮಿ ಅಯ್ಯಪ್ಪನನ್ನು ವಿಶ್ರಾಂತಿಗೆ ಒಪ್ಪಿಸುವ ಸಮಯದಲ್ಲಿ ಕೇಳಿಬರುವ ಒಂದು ಮಧುರ ನಾದವಿದೆ. ಅದೇ ''ಹರಿವರಾಸನಂ'' ಈ ಲಾಲಿತ್ಯಮಯ ಕೀರ್ತನೆಯನ್ನು ದಶಕಗಳ ಕಾಲ ತನ್ನ ದೈವಿಕ ಕಂಠದಿಂದ ಹಾಡಿರುವವರು ಮಹಾನ್ ಗಾಯಕ ಕೆ. ಜೆ. ಯೇಸುದಾಸ್. ವಿಶೇಷವೆಂದರೆ, ಈ ಕೀರ್ತನೆಯು ಕನ್ನಡ ಭಾಷೆಯಲ್ಲಿ ಗಾನಗೊಳ್ಳುವುದು ಇದು ಕನ್ನಡ ಭಾಷಾಭಿಮಾನಿಗಳಿಗೆ ಹೆಮ್ಮೆಯ ವಿಷಯವೂ, ಭಾರತೀಯ ಭಾಷಾ ಸೌಹಾರ್ದತೆಗೆ ಶ್ರೇಷ್ಠ ಉದಾಹರಣೆಯೂ ಆಗಿದೆ.

**ಹರಿವರಾಸನಂ ಕೇವಲ ಒಂದು ಹಾಡಲ್ಲ;** ಅದು ದೇವರನ್ನು ಮಲಗಿಸುವ ಪವಿತ್ರ ವಿಧಾನದ ಅವಿಭಾಜ್ಯ ಅಂಗ. ದಿನವಿಡೀ ಲಕ್ಷಾಂತರ ಭಕ್ತರ ಪ್ರಾರ್ಥನೆ, ಮಂತ್ರೋಚ್ಚಾರಣೆ, ದೀಪಾರಾಧನೆಯ ಬಳಿಕ, ರಾತ್ರಿ ಹೊತ್ತು ಅಯ್ಯಪ್ಪಸ್ವಾಮಿಗೆ ವಿಶ್ರಾಂತಿ ನೀಡುವಾಗ ಈ ಕೀರ್ತನೆ ಹಾಡಲಾಗುತ್ತದೆ. ಈ ಕ್ಷಣದಲ್ಲಿ ದೇವಾಲಯದ ವಾತಾವರಣ ಸಂಪೂರ್ಣವಾಗಿ ಮೌನ, ಶಾಂತಿ ಮತ್ತು ಆಧ್ಯಾತ್ಮಿಕತೆಯಿಂದ ತುಂಬಿರುತ್ತದೆ. ಆ ನಿಶ್ಯಬ್ದವನ್ನು ತಟ್ಟುವ ಕನ್ನಡದ ಮಧುರ ಶಬ್ದಗಳು, ಮನಸ್ಸಿಗೆ ಅಪೂರ್ವ ಶಾಂತಿಯನ್ನು ನೀಡುತ್ತವೆ.

ಕನ್ನಡ ಭಾಷೆ ಇಲ್ಲಿ ಕೇವಲ ಸಂವಹನದ ಸಾಧನವಾಗಿ ಉಳಿಯದೆ, ಭಕ್ತಿಯ ಭಾಷೆಯಾಗಿ ಅರಳುತ್ತದೆ. ದೇವಾಲಯ ಕೇರಳದಲ್ಲಿದ್ದರೂ, ಅಲ್ಲಿನ ಅತ್ಯಂತ ಮಹತ್ವದ ರಾತ್ರಿ ವಿಧಿಯಲ್ಲಿ ಕನ್ನಡ ಕೀರ್ತನೆಗೆ ಸ್ಥಾನ ದೊರೆತಿರುವುದು ಹಾಗೂ ಭಾರತೀಯ ಸಂಸ್ಕೃತಿಯ ವಿಶಾಲ ಹೃದಯತೆಯನ್ನು ತೋರಿಸುತ್ತದೆ.

**ಭಾಷೆ ಎಂಬುದು ಗಡಿ ಎಳೆಯುವ ಸಾಧನವಲ್ಲ;** ಅದು ಹೃದಯಗಳನ್ನು ಸಂಪರ್ಕಿಸುವ ಸೇತುವೆ ಎಂಬ ಸಂದೇಶವನ್ನು ಶಬರಿಮಲೆ ನಮಗೆ ನೀಡುತ್ತದೆ. ಯೇಸುದಾಸರ ಕಂಠದಲ್ಲಿ ಹರಿವರಾಸನಂ ಕೇಳಿದಾಗ, ಭಾಷೆಯ ಮಿತಿಗಳು ಕರಗುತ್ತವೆ. ಅವರು ಮಲಯಾಳಿಯಾದರೂ, ಕನ್ನಡವನ್ನು ಶುದ್ಧ ಉಚ್ಚಾರಣೆಯೊಂದಿಗೆ, ಅಪಾರ ಭಕ್ತಿಭಾವದಿಂದ ಹಾಡಿದ್ದಾರೆ. ಇದರಿಂದ ಕನ್ನಡ ಭಾಷೆಯ ಸೌಂದರ್ಯ, ಗಂಭೀರತೆ ಮತ್ತು ಸಂಗೀತಾತ್ಮಕ ಶಕ್ತಿ ಜಗತ್ತಿನಾದ್ಯಂತ ಪ್ರತಿಧ್ವನಿಸಿದೆ. ಅನೇಕ ಕನ್ನಡಿಗರಿಗೆ, ''ನಮ್ಮ ಭಾಷೆಯಲ್ಲಿ ಸ್ವಾಮಿ ಅಯ್ಯಪ್ಪನನ್ನು ಮಲಗಿಸುತ್ತಾರೆ'' ಎಂಬ ವಿಚಾರವೇ ಅಪಾರ ಗರ್ವ ಮತ್ತು ಸಂತೋಷವನ್ನು ನೀಡುತ್ತದೆ. ಈ ಸಂದರ್ಭದಲ್ಲಿ ಕನ್ನಡ ಭಾಷಾಭಿಮಾನವು ಅತಿರೇಕದ ಅಥವಾ ಇತರ ಭಾಷೆಗಳನ್ನು ತಗ್ಗಿಸುವ ಮನೋಭಾವವಲ್ಲ. ಬದಲಾಗಿ, ಅದು ಪರಸ್ಪರ ಗೌರವದ ಭಾಷಾಭಿಮಾನ. ಕನ್ನಡ ಕೀರ್ತನೆ ಶಬರಿಮಲೆಯಲ್ಲಿ ಪ್ರತಿದಿನವೂ ಹಾಡಲ್ಪಡುವುದರಿಂದ, ಅಲ್ಲಿ ಬರುವ ಬೇರೆ ಭಾಷೆಯ ಭಕ್ತರೂ ಕನ್ನಡದ ಸೌಂದರ್ಯವನ್ನು ಅನುಭವಿಸುತ್ತಾರೆ. ಇದು ಭಾಷಾ ಸೌಹಾರ್ದತೆಯ ಜೀವಂತ ಪಾಠ. ಇಂದಿನ ಕಾಲದಲ್ಲಿ ಭಾಷಾ ವಿಚಾರಗಳು ಅನೇಕ ಬಾರಿ ವಿವಾದಕ್ಕೆ ಕಾರಣವಾಗುತ್ತಿವೆ. ಆದರೆ ಶಬರಿಮಲೆಯ ಈ ಪರಂಪರೆ ನಮಗೆ ಹೇಳುವುದೇನೆಂದರೆ ? ಭಾಷೆ ವಿವಾದಕ್ಕಲ್ಲ, ವಿನಯಕ್ಕೆ; ವಿಭಜನೆಗಲ್ಲ ಭಕ್ತಿಗೆ. ದೇವರ ಮುಂದೆ ಎಲ್ಲರೂ ಸಮಾನರು; ಹಾಗೆಯೇ ಎಲ್ಲಾ ಭಾಷೆಗಳೂ ಸಮಾನ ಗೌರವಕ್ಕೆ ಪಾತ್ರ. ಕನ್ನಡ ಭಾಷೆಯು ಈ ಪವಿತ್ರ ವಿಧಿಯಲ್ಲಿ ಸ್ಥಾನ ಪಡೆದಿರುವುದು, ಅದರ ಶ್ರೀಮಂತ ಸಾಹಿತ್ಯ ಮತ್ತು ಸಂಸ್ಕೃತಿಯ ಗೌರವವಾಗಿದೆ. ಅಂತಿಮವಾಗಿ ಹೇಳಬೇಕಾದರೆ, ಶಬರಿಮಲೆಯಲ್ಲಿ ರಾತ್ರಿ ಹೊತ್ತು ಕನ್ನಡದಲ್ಲಿ ಹಾಡಲ್ಪಡುವ ಹರಿವರಾಸನಂ, ಕೇವಲ ಒಂದು ಧಾರ್ಮಿಕ ಆಚರಣೆ ಮಾತ್ರವಲ್ಲ. ಅದು ಕನ್ನಡ ಭಾಷೆಯ ಗೌರವಘೋಷ, ಭಾರತೀಯ ಏಕತೆಯ ಸಂಗೀತರೂಪ, ಮತ್ತು ಭಕ್ತಿಯ ಮಧುರ ನಿದ್ರಾಗೀತೆ. ಈ ನಾದ ಕೇಳುವ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ, ನಮ್ಮ ಭಾಷೆ ದೇವರ ಬಳಿಗೂ ತಲುಪಿದೆ ಎಂಬ ಮೌನವಾದ ಹೆಮ್ಮೆ ಉಕ್ಕುತ್ತದೆ.

# ಕನ್ನಡದ ಒಂಟಿ ಸಲಗ: ಪಾಪು

ನೃಪತುಂಗದೇತ್ತರಕ್ಕೆರಿದ ಪುಟ್ಟಪ್ಪನಿವನು
ನೃಪನಂತೆ ದೃಢ ನಿಲುವಿನಾ ದೊಡ್ಡಪ್ಪನಿವನು
ಕರುನಾಡಿನ ಧೀರದಾತ ನಾಡೋಜನಿತನು
ಪ್ರಪಂಚದ ಪುಟಗಳಲಿ ಕರ್ನಾಟಕ ಕಥೆ ಬರೆದಾತನು
ನೆಲದ ನಕ್ಷತ್ರಗಳ ಸೆಳವಲಿ ಸುವರ್ಣ ಕರ್ನಾಟಕ ಕಟ್ಟಿದವನು
ತೆರೆದು ಗವಾಕ್ಷಿ ಶಿಲಾಬಾಲಿಕೆಯನು ನುಡಿಸಿದವನು
ಕಬ್ಬಿಗರೆದೆಯಲಿ ಬದುಕುವ ಮಾತಿನಮೃತ ಹರಿಸಿದವನು
ಕಲಾಸಂಗಮದಲಿ ಬೆಳೆದು ಭಾರತದ ಬೆಳಕಾದವನು
ಕನ್ನಡಿಗರೊಗ್ಗಟ್ಟಿನ ಮೊದಲ ಮಹಾಧಿವೇಶನದ ಕರ್ತಾರನು
ಏಕೀಕರಿಸಿದಾತ ಕರ್ನಾಟಕವನು ಧೀಮಂತ ಹೋರಾಟಗಾನು
ಸೃಜನಶೀಲ ಸಾಹಿತ್ಯ ಲೋಕದ ಅಪ್ರತಿಮ ಬರಹಗಾರನು
ಗೋಕಾಕ ವರದಿ ಅನುಷ್ಠಾನದ ಕನ್ನಡ ಕಾವಲುಗಾರನು
ವಿಶ್ವವಾಣಿಯಲಿ ಏಲಕ್ಕಿ ಕಂಪನ್ನುರಡಿದ ಹಲಗೇರಿ ವೀರನು
ವಿಶಾಲ ಕರ್ನಾಟಕ ಕನಸಿನ ಸುವಿಶಾಲ ಹೃದಯತಾರನು
ನಮ್ಮನ ನಮ್ಮೇಶದೊಳಗಣ ಹೊಸತನ ತಂದ ಶೂರನು
ಕನ್ನಡದ ಕಟ್ಟಾಳು ಪಾಪು ಪ್ರಪಂಚದ ಹರಿಕಾರನು
ಕನ್ನಡದುಳಿವಿಗೆ ಸಿಂಹದಂತೆ ಗರ್ಜಿಸಿದ ಧೈರ್ಯವಂತನು
ಕವಿಸಂಘ ಮೆಳೈಸಿದಾ ಕನ್ನಡ ಅಸ್ಮಿತೆಯ ಮತಿವಂತನು
ಹೋರಾಟದ ಪಯಣದಿ ಸೋಲಿಲ್ಲದ ಒಂಟಿಸಲಗನು
ಕರುನಾಡ ನೆಲ ಜಲ ಭಾಷೆವುಳಿವಿನಂಬಿಗನಿವನು
ನಾಡು - ನುಡಿ ಚಿಂತನದ ದಿಟ್ಟನುಡಿಗಳೆಮಗೆ ಬಲವಿತ್ತವನು
ಪತ್ರಿಕೋದ್ಯಮದ ಭೀಷ್ಮನೀತ ಕವಿಸಂ ಸಾರಥ್ಯಗಾರನು
ಕನ್ನಡದುಸಿರು ಬಳಸಿ ಬರೆವುದರಲಿದೆ ಕನ್ನಡದುಳಿವೆಂದಾತನು
ಕನ್ನಡಕೊಬ್ಬನೇ ಪಾಪು ಈ ಅಭಿಮಾನಕಳಿವಿಲ್ಲದಾತನು



# ಏನೂ ಇಲ್ಲದಿದ್ದಾಗ, ಎಲ್ಲವನ್ನು ಒದಗಿಸಿದ ಕೀರ್ತಿ



■ ಎಸ್.ಎಸ್.ಕಬ್ಬೂರ

ಇಂಟರ್ನೆಟ್ ಇಲ್ಲದ ಜೀವನವನ್ನು ಕಲ್ಪಿಸಿಕೊಳ್ಳಿ, ಇದು ಎಲ್ಲರಿಗೂ ಕಷ್ಟವಾಗಬಹುದು ಹಾಗೂ ಏಕೆಂದರೆ ಇಂಟರ್ನೆಟ್ ಇಲ್ಲದೆ ಬೆಳೆಯಲು ಮತ್ತು ಸಾಕಷ್ಟು ಉತ್ತಮವಾಗಿ ನಿರ್ವಹಿಸಲು ಸಾದ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ಈಗ ನಿರ್ಮಾಣವಾಗಿದೆ. ಅದೇ ರೀತಿ ದೂರದರ್ಶನ ಇಲ್ಲದ ಜೀವನವನ್ನೂ ಸಹ ಕಲ್ಪಿಸಿಕೊಳ್ಳಲು ಸಾದ್ಯವಿಲ್ಲ.

ಮೇಲೆ ತಿಳಿಸಿದ ವಿಷಯಗಳಿಲ್ಲದೆ ಮತ್ತು ರೇಡಿಯೊ ಇಲ್ಲದೆ ಜೀವನವನ್ನು ಕಲ್ಪಿಸಿಕೊಂಡಾಗ ಹಾಗೂ ಎಲ್ಲಾ ರೀತಿಯ ಪ್ರಸಾರಗಳು, ನಮ್ಮ ಜೀವನವನ್ನು ಸಂತೋಷದಾಯಕ ಮತ್ತು ಹೆಚ್ಚು ಆಸಕ್ತಿಕರವಾಗಿಸಲು ಕೊಡುಗೆಯನ್ನು ಈ ರೇಡಿಯೋ ನೀಡಿದೆ ಮತ್ತು ತಂಪಾದ ಕತ್ತಲ ರಾತ್ರಿಗಳಲ್ಲಿ ಸಾಕಷ್ಟು ಮನರಂಜನೆಯನ್ನು ಒದಗಿಸಿದೆ. ಪಬ್ಲಿಕ್ ರೇಡಿಯೋ ಬ್ರಾಡ್‌ಕಾಸ್ಟಿಂಗ್ ಡೇ ತಂತ್ರಜ್ಞಾನವನ್ನು ಶ್ಲಾಘಿಸಲು ಮತ್ತು ಅದು ನಮ್ಮ ಜೀವನವನ್ನು ಎಷ್ಟು ಸುಧಾರಿಸಿದೆ ಎಂದು ಸಮರ್ಪಿಸಲಾಗಿದೆ. ಸಾರ್ವಜನಿಕ ರೇಡಿಯೋ ಬ್ರಾಡ್ ಕಾಸ್ಟಿಂಗ್ ಡೇ ಅನ್ನು ಈ ರೀತಿಯ ಸಂವಹನವು ಪ್ರಪಂಚದ ಮೇಲೆ ಮಾಡಿದ, ಮತ್ತು ಮಾಡುತ್ತಲೇ ಇರುವ ಪ್ರಭಾವಕ್ಕೆ ಮೆಚ್ಚುಗೆಯನ್ನು ತೋರಿಸಲು ಅವಕಾಶವನ್ನು ಒದಗಿಸಲು ಸ್ಥಾಪಿಸಲಾಗಿದೆ. ಆದರೆ ರೇಡಿಯೊಗೆ ಏನೂ ಇಲ್ಲದಿದ್ದಾಗ, ಎಲ್ಲವನ್ನು ಒದಗಿಸಿದ ಕೀರ್ತಿ ಇದೆ.

ಸಾರ್ವಜನಿಕ ರೇಡಿಯೊ ಪ್ರಸಾರ ದಿನದಂದು ಪ್ರಪಂಚವು ಬಹಳ ವಿಶೇಷವಾದ ರೇಡಿಯೋ ತಂತ್ರಜ್ಞಾನವನ್ನು ಆಚರಿಸುತ್ತದೆ. ರೇಡಿಯೊವನ್ನು ಕಂಡುಹಿಡಿದ ಮತ್ತು ಸಾರ್ವಜನಿಕ ಪ್ರಸಾರವನ್ನು ರೂಪಿಸಿದವರನ್ನು ಈ ದಿನ ಗೌರವಿಸುತ್ತದೆ. ಈ ದಿನ ನಮಗೆ ತಂತ್ರಜ್ಞಾನ ಮತ್ತು ನಮ್ಮ ಜೀವನದಲ್ಲಿ ಅದರ ಪ್ರಾಮುಖ್ಯತೆಗಾಗಿ ಹೊಸ ಭರವಸೆ ಮೂಡಿಸಿದೆ. ಪ್ರತಿಯೊಂದು ದೇಶವು ಪ್ರಸಾರ ವ್ಯವಸ್ಥೆಯನ್ನು ಹೊಂದಿದೆ. ಈ ಪ್ರಸಾರ ವ್ಯವಸ್ಥೆಯನ್ನು ಸರ್ಕಾರವು ನಡೆಸುತ್ತದೆ.

**ಹಿನ್ನಲೆ:-** ಇಟಲಿಯ ಮಾರ್ಕೊನಿಯೂ ಸೇರಿದಂತೆ ಆ ಕಾಲಕ್ಕೆ ಹಲವು ವಿಜ್ಞಾನಿಗಳು ಟೆಲಿಗ್ರಾಫ್ ಸಂದೇಶಗಳನ್ನು ತಂತಿಯ ಸಹಾಯವಿಲ್ಲದೇ ಕಳಿಸುವ ವಿಧಾನಗಳ ಕುರಿತು ಸಂಶೋಧನೆ ನಡೆಸಿದ್ದರು. ಇದನ್ನು ಪ್ರಪ್ರಥಮವಾಗಿ ಮಾಡಿದ ಕೀರ್ತಿ ಭಾರತೀಯ ವಿಜ್ಞಾನಿ ಜಗದೀಶ್‌ಚಂದ್ರ ಬೋಸರಿಗೆ ಸಲ್ಲಬೇಕು. 1895 ರಲ್ಲಿಯೇ ಅವರು ತಾವು ಸಂಶೋಧಿಸಿ ನಿರ್ಮಿಸಿದ್ದ ನಿಸ್ತಂತು ಪ್ರೇಷಕವನ್ನು ಕಲಕತ್ತೆಯ ಪುರಭವನದಲ್ಲಿ ಸಾರ್ವಜನಿಕವಾಗಿ ಪ್ರದರ್ಶಿಸಿದರು. ಯಾವ ತಂತಿಯ ಸಂಪರ್ಕವೂ ಇಲ್ಲದೇ ದೂರದಲ್ಲಿಟ್ಟಿದ್ದ ತಮ್ಮ ಉಪಕರಣದಿಂದ ವಿದ್ಯುತ್ ತರಂಗಗಳನ್ನು ಉತ್ಪಾದಿಸಿ ಒಂದು ಕೋಣೆಯಲ್ಲಿಟ್ಟಿದ್ದ ಭಾರವಾದ ವಸ್ತುವನ್ನು ಚಲಿಸುವಂತೆ ಮಾಡಲು ಮತ್ತು ಒಂದು ವಿಶೇಷ ವಿದ್ಯುತ್ ಗಂಟೆ ಬಾರಿಸುವಂತೆ ಮಾಡಲು ಅವನ್ನು ಉಪಯೋಗಿಸಿದರು. ಅವರ ಆ ಉಪಕರಣಕ್ಕೆ ಕೊಹಿಯರರ್ ಎಂದು ಹೆಸರು. ಇಂದಿನ ಬಾನುಲಿ ವ್ಯವಸ್ಥೆಯ ಆದಿಮರೂಪ ಇದಾಗಿದ್ದಿತೆಂದು ಗಮನಿಸಿದರೆ ಅವರ ಸಂಶೋಧನೆಯ ಮಹತ್ವ ಗೊತ್ತಾಗುತ್ತದೆ. ಈ ಶೋಧನೆಯ ವಿವರವನ್ನು 1896 ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಗೆ ತಿಳಿಸಿದಾಗ ಅದು ಆಶ್ಚರ್ಯಚಕಿತವಾಯಿತು. ರಾಯಲ್ ಸೊಸೈಟಿ ಮುಂದೆ ಅವರನ್ನು ಉಪನ್ಯಾಸಗಳಿಗಾಗಿ ಮೂರು ಬಾರಿ ಆಹ್ವಾನಿಸಿ ಗೌರವಿಸುವುದಕ್ಕೆ ಇದು ನಾಂದಿಯಾಯಿತು. ಇಟಾಲಿಯನ್ ಸಂಶೋಧಕ ಎಲೆಕ್ಟ್ರಿಕಲ್ ಇಂಜಿನಿಯರ್ ಗುಗ್ಲಿಲ್ಮೊ ಮಾರ್ಕೋನಿ ಅವರು 1895ರಲ್ಲಿ ತನ್ನ ಮೊದಲ ರೇಡಿಯೊ ಪ್ರಸರಣವನ್ನು ಕಳುಹಿಸಿದಾಗ ಸ್ವೀಕರಿಸಿದಾಗ ರೇಡಿಯೊ ಸಂವಹನದ ಸಾಧ್ಯತೆಯನ್ನು ಸಾಬೀತುಪಡಿಸಿದರು.

1945ರ ಹೊತ್ತಿಗೆ, ದೂರದರ್ಶನದ ಆವಿಷ್ಕಾರದೊಂದಿಗೆ, ರೇಡಿಯೋ ಅದರ ಪ್ರಭಾವವು ರೂಪಾಂತರಗೊಂಡಿತು. ಇತಿಹಾಸದಲ್ಲಿ ಮೊದಲ ಸಾರ್ವಜನಿಕ ರೇಡಿಯೊ ಪ್ರಸಾರವು ಜನವರಿ 13, 1910 ರಂದು ನಡೆಯಿತು, ಆ ದಿನದ ಕೆಲವು ಪ್ರಸಿದ್ಧ ಒಪೆರಾ ಗಾಯಕರನ್ನು ಒಳಗೊಂಡ ಲೈವ್ ಒಪೆರಾವನ್ನು ಮೆಟ್ರೋಪಾಲಿಟನ್ ಒಪೇರಾ ಹೌಸ್‌ನಿಂದ ಪ್ರಸಾರ ಮಾಡಲಾಯಿತು.

**ಕೊನೆಯ ಮಾತು:-** ಇಂದು ಜಾಗತಿಕವಾಗಿ ಅತ್ಯಂತ ವ್ಯಾಪಕವಾಗಿ ಲಭ್ಯವಿರುವ ಎಲೆಕ್ಟ್ರಾನಿಕ್ ಸಮೂಹ ಮಾಧ್ಯಮವಾಗಿ ಉಳಿದಿದೆ.

ಆದರೆ ಇದು ವಿವಿಧ ಮಾಧ್ಯಮಗಳಿಂದ ಸ್ಪರ್ಧೆಯನ್ನು ಎದುರಿಸಿತು ಹಾಗೂ ಎದುರಿಸುತ್ತಲೇ ಇದೆ. 21ನೇ ಶತಮಾನದಲ್ಲಿ ರೇಡಿಯೋ ಪ್ರಸಾರಗಳು ಡಿಜಿಟಲ್ ಉಪಗ್ರಹ ಇಂಟರ್ನೆಟ್ ಆಧಾರಿತ ಸೇವೆಗಳಿಂದ ಸ್ಪರ್ಧಾತ್ಮಕ ಒತ್ತಡವನ್ನು ಎದುರಿಸುತ್ತವೆ.




### ಭಾರತದಲ್ಲಿ ಸಾರ್ವಜನಿಕ ಆಕಾಶವಾಣಿ ಪ್ರಸಾರ ದಿನದ ಇತಿಹಾಸ

- **ಆಕಾಶವಾಣಿ ಭಾರತದಲ್ಲಿ ಸರಕಾರದ ರೇಡಿಯೋ ವ್ಯವಸ್ಥೆಗೆ ಈ ಹೆಸರು ಇದೆ. ಸಂಸ್ಕೃತದ ಈ ಶಬ್ದಕ್ಕೆ ''ಆಕಾಶದಿಂದ ಬರುವ ದನಿ'' ಎಂದರ್ಥ.**
- **ಕೆಲವರು ರವೀಂದ್ರನಾಥ್ ಠಾಗೋರ್ ಅವರು 1930ರಲ್ಲಿ ರೇಡಿಯೋ ಪದಕ್ಕೆ ಆಕಾಶವಾಣಿ ಎಂಬ ಪದವನ್ನು ಚಲಾವಣೆಗೆ ತಂದರು ಎಂದು ಹೇಳುತ್ತಾರೆ. ಇನ್ನೂ ಕೆಲವರು 1920 ರಲ್ಲಿ ಕನ್ನಡದ ಬರಹಗಾರರಾದ ನಾ.ಕಸ್ತೂರಿಯವರು ಈ ಪದವನ್ನು ಸೂಚಿಸಿದರು ಎನ್ನುತ್ತಾರೆ.**
- **ಇದನ್ನು ಡಾ.ಎಂ.ವಿ.ಗೋಪಾಲಸ್ವಾಮಿಯವರು ಅನುಮೋದಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಿದರು. ಕೇಂದ್ರ ಸರಕಾರವು ಇದನ್ನು 1943 ರಲ್ಲಿ ಮಾನ್ಯ ಮಾಡಿ ಮೈಸೂರು ಆಕಾಶವಾಣಿ ಎಂದು ನಾಮಕರಣ ಮಾಡಿತು. ಮುಂದೆ ಆಲ್ ಇಂಡಿಯಾ ರೇಡಿಯೋಗೆ ಕೂಡ 1956 ರಲ್ಲಿ ಅಧಿಕೃತವಾಗಿ ಆಕಾಶವಾಣಿ ಎಂದು ಹೆಸರಿಡಲಾಯಿತು.**

# ಮತಾಂತರ ಮತ್ತು ಲವ್ ಜಿಹಾದ್ ಭಾರತವನ್ನು ದುರ್ಬಲಗೊಳಿಸಲು ಈಸ್ಟ್ ಇಂಡಿಯಾ ಕಂಪನಿ ಯಂತಹವರಿಂದ ಪಿತೂರಿ!: ಜಗದ್ಗುರು ಶಂಕರಾಚಾರ್ಯ

ಹೆಚ್ಚುತ್ತಿರುವ ಲವ್ ಜಿಹಾದ್, ಮತಾಂತರದ ಘಟನೆಗಳು ಭಾರತೀಯ ಸಂಸ್ಕೃತಿ, ಸನಾತನ ಧರ್ಮ ಮತ್ತು ಹಿಂದೂಸ್ಥಾನವನ್ನು ದುರ್ಬಲಗೊಳಿಸಲು ರೂಪಿಸಲಾದ ಸುಸಂಘಟಿತ ಪಿತೂರಿಯಾಗಿದೆ ಎಂದು ದ್ವಾರಕಾ ಶಾರದಾ ಪೀಠಾಧೀಶ್ವರ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸ್ವಾಮಿ ಸದಾನಂದ ಸರಸ್ವತಿ ಮಹಾರಾಜರು ಎಚ್ಚರಿಸಿದ್ದಾರೆ. ಈ ಸಂಕಟದ ಕುರಿತು ಐತಿಹಾಸಿಕ ಉಲ್ಲೇಖ ನೀಡಿದ ಅವರು, ಯಾವ ರೀತಿ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರದ ನೆಪದಲ್ಲಿ ಭಾರತಕ್ಕೆ ಬಂದು, ವಂಚನೆಯಿಂದ ದೇಶವನ್ನು ಗುಲಾಮಗಿರಿಗೆ ತಳ್ಳಿ 200 ವರ್ಷಗಳ ಕಾಲ ಆಳ್ವಿಕೆ ನಡೆಸಿತೋ, ಇಂದು ಅದೇ ರೀತಿಯ ಪರಿಸ್ಥಿತಿಯನ್ನು ಮತಾಂತರದ ಮೂಲಕ ಸೃಷ್ಟಿಸಲಾಗುತ್ತಿದೆ, ಎಂದು ಮಾರ್ಮಿಕವಾಗಿ ನುಡಿದರು. ಭಾರತದ ರಕ್ಷಣಾ ಸಚಿವಾಲಯ ಮತ್ತು ಮಿಲಿಟರಿ ಶಕ್ತಿ ಇಂದು ಎಷ್ಟು ಪ್ರಬಲವಾಗಿದೆ ಎಂದರೆ ಯಾವುದೇ ರಾಷ್ಟ್ರವು ನಮ್ಮ ಮೇಲೆ ನೇರ ದಾಳಿ ಮಾಡಲು ಧೈರ್ಯ ಮಾಡಲಾರದು. ಆದ್ದರಿಂದಲೇ, ನಿರ್ದಿಷ್ಟ ಜನಸಂಖ್ಯೆಯನ್ನು ಹೆಚ್ಚಿಸುವ ಮೂಲಕ ದೇಶವನ್ನು ಒಳಗಿನಿಂದಲೇ ದಮನ ಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು.




**200 ವರ್ಷಗಳ ಕಾಲ ಆಳ್ವಿಕೆ ನಡೆಸಿತೋ**

ಪುಣೆಯ ವೇದಾಚಾರ್ಯ ಘೈಸಾಸ ಗುರೂಜಿ ವೇದ ಪಾಠ ಶಾಲೆಯ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಭಾಗವತ ಕಥಾ ಪ್ರವಚನ ಕಾರ್ಯಕ್ರಮದಲ್ಲಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿ ರಾಷ್ಟ್ರಭಕ್ತ ನ್ಯಾಯವಾದಿ ಸಮಿತಿಯ ಸದಸ್ಯರು ಶಂಕರಾಚಾರ್ಯರನ್ನು ಭೇಟಿ ಮಾಡಿ ಮಾರ್ಗದರ್ಶನ ಪಡೆದರು.

ಸಮಿತಿಯ ಕಾರ್ಯವೈಖರಿಯನ್ನು ಶ್ಲಾಘಿಸಿದ ಜಗದ್ಗುರುಗಳು, ಸಮಿತಿಯು ಅತ್ಯಂತ ಶ್ರೇಷ್ಠವಾದ ಕೆಲಸವನ್ನು ಮಾಡುತ್ತಿದೆ ಎಂದು ಹರಸಿದರು.

> **ಅಲ್ಪಸಂಖ್ಯಾತರಿಗೆ ಅವರ ಮದರಸಾ ಮತ್ತು ಚರ್ಚ್‌ಗಳಲ್ಲಿ ಧರ್ಮ ಶಿಕ್ಷಣ ಪಡೆಯುವ ಸ್ವಾತಂತ್ರ್ಯವಿರುವಂತೆ, ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಹಿಂದೂ ಮಕ್ಕಳಿಗೆ 'ಹಿಂದೂ ಧರ್ಮ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಶಾಲಾ ಹಂತದಲ್ಲೇ ಮಕ್ಕಳಿಗೆ ಧರ್ಮ ಮತ್ತು ಸಂಸ್ಕಾರದ ಜ್ಞಾನ ದೊರೆತರೆ, ಅವರು ಯಾವುದೇ ಆಮಿಷ ಅಥವಾ ಪಿತೂರಿಗಳಿಗೆ ಬಲಿಯಾಗುವುದಿಲ್ಲ ಎಂದು ತಿಳಿಸಿದರು. ಕೊನೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಮುಖ್ಯಮಂತ್ರಿಗಳು ಮತ್ತು ರಾಷ್ಟ್ರಪ್ರೇಮಿ ಸಂಸ್ಥೆಗಳು ಈ ವಿಷಯದ ಗಂಭೀರತೆಯನ್ನು ಅರಿತು ಒಗ್ಗಟ್ಟಾಗಬೇಕೆಂದು ಜಗದ್ಗುರುಗಳು ಕರೆ ನೀಡಿದರು.**

**ಜಗದ್ಗುರು ಶಂಕರಾಚಾರ್ಯರ ಪ್ರಮುಖ ವಿಚಾರಗಳು:** ಲವ್ ಜಿಹಾದ್ ಮತ್ತು ಮತಾಂತರವು ಕೇವಲ ಧಾರ್ಮಿಕ ವಿಷಯಗಳಲ್ಲ, ಬದಲಾಗಿ ಇದು ರಾಜಕೀಯ ಪ್ರಾಬಲ್ಯ ಸಾಧಿಸುವ ದೂರಗಾಮಿ ಯೋಜನೆಯಾಗಿದೆ.

ಪ್ರಜಾಪ್ರಭುತ್ವದಲ್ಲಿ ಬಹುಮತವೇ ಅಧಿಕಾರದ ಮೂಲವಾಗಿದೆ, ಆದ್ದರಿಂದ ಹಿಂದೂಗಳ ಸಂಖ್ಯೆಯನ್ನು ಕಡಿಮೆ ಮಾಡಿ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದು ಒಂದು ವ್ಯವಸ್ಥಿತ ತಂತ್ರವಾಗಿದೆ.


ಕ್ರಿಶ್ಚಿಯನ್ ಮಿಷನರಿಗಳು ಸೇವೆಯ ಹೆಸರಿನಲ್ಲಿ ಆಮಿಷವೊಡ್ಡಿ ಹಿಂದೂಗಳನ್ನು ಮತಾಂತರಿಸುತ್ತಿರುವುದಕ್ಕೆ ಕಡಿವಾಣ ಹಾಕುವುದು ಅನಿವಾರ್ಯವಾಗಿದೆ. ಈ ಪಿತೂರಿಯನ್ನು ತಡೆಯಲು ಮಹಾರಾಷ್ಟ್ರ ಮತ್ತು ಕೇಂದ್ರ ಸರ್ಕಾರಗಳು ಇತರ ರಾಜ್ಯಗಳಂತೆ ಲವ್ ಜಿಹಾದ್ ವಿರುದ್ಧ ಅತ್ಯಂತ ಕಠಿಣ ಕಾನೂನನ್ನು ಜಾರಿಗೆ ತರಬೇಕು ಎಂದು ಅವರು ಆಗ್ರಹಿಸಿದರು.

## ದ್ವೇಷ ಭಾಷಣ ತಡೆ ಮಸೂದೆ ರಾಜ್ಯಪಾಲರು ಕೇಳಿದರೆ ವಿವರಣೆ ಕೊಡುವೆ: ಸಿದ್ದರಾಮಯ್ಯ

• ಉದಯವಾಹಿನಿ, ಮಂಗಳೂರು

ದ್ವೇಷ ಭಾಷಣ ತಡೆ ಮಸೂದೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಿರಸ್ಕರಿಸಿಲ್ಲ, ಹಿಂದಕ್ಕೂ ಕಳುಹಿಸಿಲ್ಲ. ಆಕ್ಷೇಪವನ್ನೂ ವ್ಯಕ್ತಪಡಿಸಿಲ್ಲ. ರಾಜ್ಯಪಾಲರು ಬಯಸಿದರೆ ಮಸೂದೆ ಬಗ್ಗೆ ವಿವರಣೆ ಕೊಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು. ಮಸೂದೆ ವಿರೋಧಿಸಿ ಬಿಜೆಪಿ ಮುಖಂಡರು ರಾಜ್ಯಪಾಲರನ್ನು ಭೇಟಿ ಮಾಡುವ ಕುರಿತು ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯಪಾಲರು ಯಾವಾಗ ಕರೆಯುತ್ತಾರೆ ನೋಡೋಣ. ಮಸೂದೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಸರ್ವಾನುಮತದಿಂದ ಅಂಗೀಕಾರಗೊಂಡಿದೆ ಎಂದು ಹೇಳಿದರು. ಬಳ್ಳಾರಿಯಿಂದ ಬೆಂಗಳೂರಿಗೆ ಬಿಜೆಪಿ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿ, ಪಾದಯಾತ್ರೆ ಮಾಡಲಿ. ಬೇಡ ಎಂದವರು ಯಾರು. ಬಿಜೆಪಿಯವರು, ಅದರಲ್ಲೂ ಶಾಸಕ ಜನಾರ್ದನ ರೆಡ್ಡಿ, ಶ್ರೀರಾಮುಲು ಕಾಯುತ್ತಾ ಇದ್ದಾರೆ. ಅಲ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ಅಸೂಯೆಯಿಂದ ಹೀಗೇ ಮಾಡುತ್ತಿದ್ದಾರೆ ಎಂದರು.

ನಾವು ಹಿಂದೆ ಬಳ್ಳಾರಿ ಪಾದಯಾತ್ರೆ ಮಾಡಿದ್ದು ಒಳ್ಳೆಯ ವಿಚಾರಕ್ಕಾಗಿ. ರೆಡ್ಡಿ ಸಹೋದರರು ರಿಪಬ್ಲಿಕ್ ಆಫ್ ಬಳ್ಳಾರಿ ನಡೆಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಆಗಿನ ಲೋಕಾಯುಕ್ತ ಸಂತೋಷ್ ಹೆಗ್ಡೆ ವರದಿ ಕೊಟ್ಟಿದ್ದರು. ವಿಧಾನಸಭೆಯಲ್ಲಿ ಚರ್ಚಿಸಿದಾಗ ರೆಡ್ಡಿ ಸಹೋದರರು ಮತ್ತು ಆಗಿನ ಮುಖ್ಯಮಂತ್ರಿ ಯಡಿಯೂರಪ್ಪ ನನ್ನ ಮೇಲೆ ಮುಗಿಬಿದ್ದಿದ್ದರು. ಅದಕ್ಕಾಗಿ ಪಾದಯಾತ್ರೆ ಮಾಡಿದ್ದೆವು ಎಂದರು. ಬಿಜೆಪಿಯವರು ಏತಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದಾರೆ. ಬಳ್ಳಾರಿಯಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆ ಉದ್ಘಾಟನೆ ಬ್ಯಾನರ್ ಹಾಕಿದ್ದನ್ನು ತೆಗೆದವರು ಯಾರು. ತೆಗೆಯುವ ಅಗತ್ಯ ಏನಿತ್ತು. ಅದರಿಂದಲೇ ಪ್ರಚೋದನೆ ಆಗಿದ್ದಲ್ಲವೇ? ಬ್ಯಾನರ್ ತೆಗೆಯದೇ ಇದ್ದಿದ್ದರೆ ಪ್ರಚೋದನೆ ಎಲ್ಲಿ ಆಗುತ್ತಿತ್ತು ಎಂದು ಪ್ರಶ್ನಿಸಿದರು.



### 2028ಕ್ಕೆ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ, ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ

## ರೈತರ ಹಿತ ಕಾಪಾಡದ ಕಾಂಗ್ರೆಸ್ ಸರ್ಕಾರ

• ಉದಯವಾಹಿನಿ, ಬೇಲೂರು



ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರ ರೈತರ ಹಿತ ಕಾಪಾಡದೆ ಅಧಿಕಾರದ ಲಾಲಾಸೆಯಲ್ಲಿ ತೇಲುತ್ತಿದೆ ಎಂದು ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಹೇಳಿದರು. ಇಲ್ಲಿನ ಶಿವಕುಮಾರಸ್ವಾಮಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ, ತಾಲ್ಲೂಕು ಮಟ್ಟದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಶಕ್ತಿ ಕುಂದಿಸಲು, ರಾಜ್ಯ ಸರ್ಕಾರ ಎರಡು ಸಮಾವೇಶಗಳನ್ನು ನಡೆಸಿದೆ.

ಜಿಲ್ಲಾಧಿಕಾರಿಗಳಿಂದ ಹಿಡಿದು ಆಶಾ ಕಾರ್ಯಕರ್ತೆಯರು, ನೀರುಗಂಟಿಗಳನ್ನು ಸಹ ಸಮಾವೇಶಕ್ಕೆ ಬಳಸಿಕೊಂಡಿದ್ದಾರೆ. ಜೋಡೆತ್ತು ಎಂದು ಹೇಳಿಕೊಂಡು ಕುಮಾರಣ್ಣನ ಹತ್ತಿರ ರಾತ್ರಿ, ಹಗಲು ಸಹಿ ಮಾಡಿಸಿಕೊಳ್ಳುತ್ತಿದ್ದವರು ಈಗ ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ಮುಗಿಸಲು ಹುನ್ನಾರ ಮಾಡುತ್ತಿದ್ದಾರೆ ಎಂದರು. ಜಿಲ್ಲೆಯ ಈಶಾನ್ಯ ದಿಕ್ಕಾದ ಅರಸೀಕೆರೆಯಿಂದ ಸಮಾವೇಶದ ಪ್ರಚಾರ ಮಾಡಲು ಪ್ರಾರಂಭಿಸಿದ್ದೇನೆ. ನೀನೆ ಸಾಕಿದ ಗಿಣಿ, ನಿನ್ನ ಹದ್ದಾಗಿ ಕುಕ್ಕಿತಲ್ಲೋ ಎಂಬಂತೆ ಅರಸೀಕೆರೆಯಲ್ಲಿ ಆಗಿದೆ. ನಂಬಿಕೆ ದ್ರೋಹಿಗಳು ಇದ್ದಾರೆ ಎಂದರು. ಆನೆ ಕಾರಿಡಾರ್ ನಿರ್ಮಿಸಲು ಕುಮಾರಣ್ಣ 100 ಕೋಟಿ ಮೀಸಲಿಟ್ಟಿದ್ದರು. ಈಗಿನವರು ಬರೀ ಭಾಷಣ ಮಾಡಿ ಹೋಗ್ತಾರೆ ಅದನ್ನು ಮಾಡಲು ಕುಮಾರಣ್ಣನೆ ಬರಬೇಕು ಎಂದು ಪ್ರತಿಪಾದಿಸಿದಿರು.

ನಾನು ಕ್ಷೇತ್ರಕ್ಕೆ 1800 ಕೋಟಿ ಅನುದಾನ ತಂದು, ಅಭಿವೃದ್ಧಿ ಮಾಡಿದರೂ ಚುನಾವಣೆಯಲ್ಲಿ ಸೋಲು ಅನುಭವಿಸಬೇಕಾಯಿತು. ನಾನು, ಎಚ್.ಡಿ.ರೇವಣ್ಣ ಅವರ ಸಹಕಾರದಿಂದ ತಂದ ಅನುದಾನವನ್ನು, ಕೆಲವರು ನಾನೇ ತಂದಿದ್ದು ಎಂದು ಹೇಳುಕೊಳ್ಳುತ್ತಾರೆ ಎಂದರು. ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ತೋ.ಚ. ಅನಂತಸುಬ್ಬರಾಯ ಮಾತನಾಡಿ, ಮೈತ್ರಿ ವಿಚಾರದಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿರಬೇಕು. ಜನವರಿ 24ರ ನಂತರ ತಾಲ್ಲೂಕು, ಹೋಬಳಿ ಮಟ್ಟದ ಪದಾಧಿಕಾರಿಗಳನ್ನು ಪುನರ್‌ನೇಮಿಸಲಾಗುವುದು ಎಂದರು.

> ಜಿಲ್ಲೆಯಲ್ಲಿ ಹೇಳೋರು, ಕೇಳೋರು ಯಾರು ಇಲ್ಲದಂತಾಗಿದೆ, ಯಾವ ಕೆಲಸಗಳು ಆಗುತ್ತಿಲ್ಲ. ಜಿಲ್ಲೆಗೆ ಜೆಡಿಎಸ್ ಪಕ್ಷದ ಕೊಡುಗೆ ಸಾಕಾಷ್ಟಿದೆ. ಈಗಿನ ಸರ್ಕಾರ ಹಾಗೂ ಹಿಂದಿನ ಸರ್ಕಾರ ಏನು ಮಾಡಿಲ್ಲ, ಜನವರಿ 24ರಂದು ಹಾಸನದಲ್ಲಿ ಜೆಡಿಎಸ್ ಪಕ್ಷದ ಸಮಾವೇಶ ಆಯೋಜಿಸಲಾಗಿದ್ದು, ಸುಮಾರು 2 ಲಕ್ಷ ಜನ ಸೇರಲಿದ್ದಾರೆ. ಬೇಲೂರಿನಿಂದ ಕನಿಷ್ಠ 20 ಸಾವಿರ ಕಾರ್ಯಕರ್ತರು ಆಗಮಿಸಬೇಕು ಎಂದು ಕರೆ ನೀಡಿದರು. 2028ಕ್ಕೆ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದ ಗದ್ದುಗೆ ಏರುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.
>
> – ಎಚ್.ಡಿ.ರೇವಣ್ಣ
> ಹೊಳೆನರಸೀಪುರ ಕ್ಷೇತ್ರದ ಶಾಸಕ

> ಜನರು ಗ್ಯಾರಂಟಿಗೆ ಮರುಳಾಗಿ ಮತ ನೀಡಿದ್ದರಿಂದ ಈಗ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಕ್ಷೇತ್ರದಲ್ಲಿ ನಾನು ತಂದ ಕೆಲಸಗಳು ಈಗಲೂ ನಡೆಯುತ್ತಿವೆ. ನಾವು ಬೇರು ಮಟ್ಟದಿಂದ ಪಕ್ಷವನ್ನು ಸಂಘಟಿಸಿ ಮುಂದಿನ ಚುನಾವಣೆಗಳನ್ನು ಎದುರಿಸಬೇಕು.
>
> –ಕೆ.ಎಸ್.ಲಿಂಗೇಶ್
> ಜೆಡಿಎಸ್ ಜಿಲ್ಲಾಘಟಕದ ಅಧ್ಯಕ್ಷ

## ಮಿನಿ ನ್ಯೂಸ್

### ಉದಯವಾಹಿನಿ ಪತ್ರಿಕೆಗೆ ಚಿತ್ರದುರ್ಗ ಡಿಸಿ ಟಿ.ವೆಂಕಟೇಶ್ ಶುಭಾಷಯ

• ಉದಯವಾಹಿನಿ, ಚಿತ್ರದುರ್ಗ

ಜಿಲ್ಲೆಯ ಜನಾನುರಾಗಿ ಅಧಿಕಾರಿ ಎಂದು ಹೆಸರುಗಳಿಸಿರುವ ಚಿತ್ರದುರ್ಗ ಜಿಲ್ಲಾಧಿಕಾರಿ ವೆಂಕಟೇಶ್ ಟಿ. ಅವರು ನಾಡಿನ ಹೆಸರಾಂತ ಪ್ರಾದೇಶಿಕ ದಿನಪತ್ರಿಕೆಯಾದ ಉದಯವಾಹಿನಿ ದಿನಪತ್ರಿಕೆಗೆ ಶುಭಾಷಯ ಕೋರಿದ್ದಾರೆ. ಸೋಮವಾರ ಉದಯವಾಹಿನಿ ಪತ್ರಿಕೆಯ ಚಿತ್ರದುರ್ಗ ಜಿಲ್ಲಾ ವರದಿಗಾರ ರವಿ ಕೆ.ಅಂಬೇಕರ್ ನೂತನ ವರ್ಷದ ಉಡುಗೊರೆಯಾಗಿ ನೀಡಿದ ಉದಯವಾಹಿನಿ ಪತ್ರಿಕೆಯ 2026ರ ಕ್ಯಾಲೆಂಡರ್ ವೀಕ್ಷಿಸಿದ ಅವರು ಕ್ಯಾಲೆಂಡರ್ ನ ಗುಣಮಟ್ಟ ಹಾಗೂ ವಿವರ ಉಪಯುಕ್ತವಾಗಿದ್ದು ಉದಯವಾಹಿನಿ ದಿನಪತ್ರಿಕೆಯ ಸಂಪಾದಕರು, ಜಿಲ್ಲಾ ವರದಿಗಾರರು, ಪತ್ರಿಕೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ, 2026ರ ಹೊಸ ಕ್ಯಾಲೆಂಡರ್ ಬಿಡುಗಡೆಯ ಶುಭಾಶಯಗಳನ್ನು ಕೋರಿ ನಿಮ್ಮ ಸುದ್ದಿಗಳು ಎಲ್ಲೆಡೆ ಎಲ್ಲರಿಗೂ ದಿನದರ್ಶನದಂತೆ ಬೆಳಕು ತರಲಿ ಎಂದು ಹಾರೈಸಿದರು.


ಉದಯವಾಹಿನಿ ಚಿತ್ರ

### ಅಪಘಾತ ನಿಯಂತ್ರಣ- ವೇಗದ ಮಿತಿ ಅಳವಡಿಸುವಂತೆ ಮನವಿ

• ಉದಯವಾಹಿನಿ, ಬಸವನಬಾಗೇವಾಡಿ

ಪಟ್ಟಣದಲ್ಲಿ ಜನಸಂದಣಿ, ವಾಹನಗಳ ಸಂಚಾರ ಹೆಚ್ಚಾಗಿದ್ದು. ವೃದ್ಧರು ಮಕ್ಕಳು ನಡೆದಾಡುವ ಸ್ಥಳಗಳಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತಿದ್ದು. ಹೀಗಾಗಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿವೆ. ತಹಶೀಲ್ದಾರ್ ಕಚೇರಿಯಿಂದ ವಿಜಯಪುರ ರಸ್ತೆಯ ಬಸವೇಶ್ವರ ಮಹಾವಿದ್ಯಾಲಯದವರೆಗೆ, ಬಸವೇಶ್ವರ ವೃತ್ತದಿಂದ ಅಂಬೇಡ್ಕರ್ ವೃತ್ತ ದವರೆಗೆ ವಾಹನಗಳ ಚಾಲನೆ ಮಿತಿ 40 ಕಿಮೀ ಗಂಟೆಗೆ ಅಳವಡಿಸಬೇಕು ಎಂದು ವಿವೇಕ್ ಬ್ರಿಗೇಡ್ ಸದಸ್ಯರು ಸೋಮವಾರ ಡಿಎಸ್ಪಿ ಬಲ್ಲಪ್ಪ ನಂದಗಾವಿ, ಪಿ. ಆಯ್ ಗುರುಶಾಂತ, ದಾಶ್ಯಾಳ ಅವರಿಗೆ ಮನವಿ ಸಲ್ಲಿಸಿದರು. ಜನ ದಟ್ಟಣೆಯ ಪ್ರದೇಶಗಳಾದ ಬಸವೇಶ್ವರ ದೇವಾಲಯ ಎದುರು, ಬಸ್ ಸ್ಟ್ಯಾಂಡ್ ಎದುರಿಗೆ, ಅಂಬೇಡ್ಕರ್ ವೃತ್ತ ಸರ್ಕಾರಿ ಆಸ್ಪತ್ರೆ ಹಾಗೂ ಅರಳಿಕಟ್ಟಿ,ಬಸವ ಭವನ ಹತ್ತಿರ ಜೀಬ್ರಾ ಕ್ರಾಸ್‌ಗಳನ್ನು ಹಾಕಿಸಿ ಅಪಘಾತವನ್ನು ತಡೆಗಟ್ಟಲು ಮುಂದಾಗುವಂತೆ ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ವಿನೂತ ಕಲ್ಲೂರ, ಶಂಕರ ಬೈಕೋಳ, ರವಿಗೌಡ ಚಿಕ್ಕೊಂಡ, ಶಶಿಕಾಂತ ಸ್ಥಾವರಮಠ, ಪ್ರಜ್ವಲ್ ಕಾರಕೂನ, ಗಂಗಾಧರ ಅರಿಯಾ, ದಯಾನಂದ ಸಾರ್ವಾಡ ಸೇರಿದಂತೆ ಅನೇಕರು ಇದ್ದರು.


ಉದಯವಾಹಿನಿ ಚಿತ್ರ

### ರೈಲು ಪ್ರಯಾಣ ದರ ಹೆಚ್ಚಳ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

• ಉದಯವಾಹಿನಿ, ರಾಯಚೂರು

ಭಾರತೀಯ ರೈಲ್ವೆ ಇಲಾಖೆ ಡಿ.26ರಿಂದ ರೈಲು ಟಿಕೆಟ್ ದರ ಏರಿಕೆ ಮಾಡಿರುವುದನ್ನು ವಿರೋಧಿಸಿ, ಟಿಕೆಟ್ ದರ ಏರಿಕೆಯನ್ನು ತಕ್ಷಣ ರದ್ದುಗೊಳಿಸಬೇಕು ಎಂದು ಒತ್ತಾಯಿಸಿ ರಾಯಚೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ರೈಲ್ವೆ ನಿಲ್ದಾಣದ ಎದುರು ಪ್ರತಿಭಟನೆ ನಡೆಸಿದರು. ಸಾಮಾನ್ಯ ದರ್ಜೆ ಪ್ರಯಾಣದ ದೂರ 215 ಕಿ.ಮೀ ಮೀರಿದರೆ ಪ್ರತಿ ಕಿ.ಮೀಗೆ 1 ಪೈಸೆ ಮತ್ತು ನಾನ್ ಎಸಿ ಮೇಲ್ ಎಕ್ಸ್‌ಪ್ರೆಸ್ ಮತ್ತು ಎಲ್ಲಾ ಎಸಿ ದರ್ಜೆಗಳಿಗೆ ಪ್ರತಿ ಕಿ.ಮೀಗೆ 2 ಪೈಸೆ ಹೆಚ್ಚಿಸಲಾಗಿದೆ. ಇದು ವರ್ಷದಲ್ಲಿ ಎರಡನೇ ಬಾರಿ ದರವನ್ನು ಏರಿಕೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸರ್ಕಾರ ಮತ್ತು ಇಲಾಖೆಯ ಈ ಕ್ರಮದಿಂದ ಪ್ರಯಾಣಿಕರಿಗೆ ಆರ್ಥಿಕ ಹೊರೆಯಾಗಿದೆ. ದುಬಾರಿ ವೆಚ್ಚದ ಆಹಾರ ಪದಾರ್ಥಗಳಿಂದ ಈಗಾಗಲೇ ಪೋಷಣೆ, ಮಕ್ಕಳ ಶಿಕ್ಷಣ ಹಾಗೂ ಇತರೆ ವೆಚ್ಚಗಳಿಂದ ಜನರು ರೋಸಿ ಹೋಗಿದ್ದಾರೆ. ರೈಲ್ವೆ ಪ್ರಯಾಣದ ದರ ಏರಿಕೆ ಮಾಡಿರುವುದು ಅವರ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಕಾಲಮಿತಿಯಲ್ಲೇ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಪ್ಪಳ

ನಮ್ಮ ಭಾಗದ ಲಕ್ಷಾಂತರ ರೈತರ ಜೀವನಾಡಿ ಆಗಿರುವ ತುಂಗಭದ್ರಾ ಜಲಾಶಯದ ನೂತನ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ನಡೆಯುತ್ತಿದ್ದು ಕಾಲಮಿತಿಯೊಳಗೆ ಮುಗಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು. ತುಂಗಭದ್ರಾ ಡ್ಯಾಂಗೆ ಭೇಟಿ ನೀಡಿ, ನೂತನ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ಪರಿಶೀಲಿಸಿದ ಬಳಿಕ ಮಾಧ್ಯಮದವರಿಗೆ ಮಾಹಿತಿ ನೀಡಿ, ಮಾತನಾಡಿದರು.

ತುಂಗಭದ್ರಾ ಅಣೆಕಟ್ಟೆಯ ನೂತನ ಕ್ರಸ್ಟ್‌ಗೇಟ್ ಅಳವಡಿಕೆ ಕಾರ್ಯವು ಪ್ರಗತಿಯಲ್ಲಿದ್ದು ಗೇಟ್ ಸಂಖ್ಯೆ 18ರ ಕೆಲಸ ಪೂರ್ಣಗೊಂಡಿದೆ. ಕ್ರಸ್ಟ್‌ಗೇಟ್‌ಗಳ ಎರೆಕ್ಷನ್ ಮತ್ತು ಡಿಸ್‌ಮೆಟಲಿಂಗ್ ಕಾರ್ಯಕ್ಕೆ ತಲಾ ಎರಡು ತಂಡಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಗೇಟ್ ಸಂಖ್ಯೆ 15ರ ಕೆಲಸ ಪೂರ್ಣಗೊಳ್ಳುವ ಹಂತದಲ್ಲಿದೆ. ಆರಂಭದಲ್ಲಿ ತಿಂಗಳಲ್ಲಿ 6 ಗೇಟ್ ಅಳವಡಿಸುವುದಾಗಿ ಕಂಪನಿಯವರು ಹೇಳಿದ್ದರು. ಈಗ ಒಂದು ತಿಂಗಳಲ್ಲಿ 8 ಗೇಟ್‌ಗಳನ್ನು ಅಳವಡಿಸುವುದಾಗಿ ಹೇಳುತ್ತಿದ್ದಾರೆ ಎಂದರು. ಜೂನ್ ಒಳಗೆ ಎಲ್ಲಾ ಎಲ್ಲಾ 33 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲು ಟೈಮ್ ಬಾಂಡ್ ನೀಡಲಾಗಿದೆ. ಮೇ ಒಳಗೆ ಪೂರ್ಣಗೊಳಿಸುವುದಾಗಿ ಟೆಂಡರ್ ಪಡೆದ ಕಂಪನಿಯವರು ತಿಳಿಸಿದ್ದಾರೆ ಎಂದರು.

33 ಕ್ರಸ್ಟ್ ಗೇಟ್‌ಗಳ ಬದಲಾವಣೆಗೆ ಒಟ್ಟು 54 ಕೋಟಿ ಟೆಂಡರ್ ಕರೆದು ಕೆಲಸ ಆರಂಭಿಸಲಾಗಿದೆ. ಈಗಾಗಲೇ ಆಂಧ್ರಪ್ರದೇಶ ಸರ್ಕಾರ 20 ಕೋಟಿ ನೀಡಿದೆ. ನಮ್ಮ ರಾಜ್ಯದ ಪಾಲು 10 ಕೋಟಿಯನ್ನು ಟಿಬಿ ಬೋರ್ಡ್‌ಗೆ ಈಗಾಗಲೇ ನೀಡಲಾಗಿದೆ. ತೆಲಂಗಾಣ ರಾಜ್ಯದವರೂ ತಮ್ಮ ಪಾಲಿನ ಮೊತ್ತ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು. ಈಗಾಗಲೇ 15 ಗೇಟ್‌ಗಳ ಫ್ಯಾಬ್ರಿಕೇಶನ್ ಪೂರ್ಣಗೊಂಡಿದ್ದು ಅಳವಡಿಕೆ ಮಾತ್ರ ಬಾಕಿಯಿದೆ. 8 ಗೇಟ್‌ಗಳು ಫ್ಯಾಬ್ರಿಕೇಶನ್ ಹಂತದಲ್ಲಿದ್ದು ಹೊಸಪೇಟೆ ಮತ್ತು ಗದಗ ಜಿಲ್ಲೆಯಲ್ಲಿ ತಲಾ 4 ಗೇಟ್‌ಗಳ ಪೈಕಿ ತಲಾ ಎರಡು ಗೇಟ್‌ಗಳು ಇನ್ನೂ ಎರಡು ದಿನಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದರ ಜತೆ ಆಯಾ ಗೇಟ್‌ಗಳ ಡಿಸ್‌ಮೆಟಲಿಂಗ್ ಪೂರ್ಣಗೊಂಡಿದು ಇತರೆ ಎಲ್ಲಾ ಕಾಮಗಾರಿಗಳು ಪ್ರಗತಿಯಲಿವೆ. ಮೇ ತಿಂಗಳ 2 ವಾರದಲ್ಲಿ ಪೂರ್ಣ ಟಿಬಿ ಬೋರ್ಡ್ ಕಾರ್ಯದರ್ಶಿ ಒ.ಆರ್.ಕೆ ರೆಡ್ಡಿ ಮಾತನಾಡಿ ಡಿಸ್‌ಮೆಟಲಿಂಗ್ ಮತ್ತು ಎರೆಕ್ಷನ್ ಎರಡೂ ಕೆಲಸಗಳು ನಡೆಯುತ್ತಿವೆ.

ಗೇಟ್ ಸಂಖ್ಯೆ 18 ಮತ್ತು 20ರ ಕೆಲಸ ಪೂರ್ಣಗೊಂಡಿದ್ದು 27ರ ಕೆಲಸವನ್ನು 3 ದಿನದಲ್ಲಿ ಕೈಗೊಳ್ಳಲಾಗುವುದು. ಗೇಟ್ ಸಂಖ್ಯೆ 4ರ ಕಾಮಗಾರಿಯನ್ನು ಪ್ರಾರಂಭಿಸಿ ನಾಲ್ಕು ಗೇಟ್‌ಗಳನ್ನು ಅಳವಡಿಸಲಾಗುವುದು. ಮೊದಲ ಗೇಟ್ ಅಳವಡಿಸಲು 8 ರಿಂದ 10 ದಿನ ಸಮಯ ತೆಗೆದುಕೊಂಡಿದೆ. ಎರಡನೇ ಗೇಟ್ ಅಳವಡಿಸಲು 6 ದಿನ ಸಮಯ ತೆಗೆದು ಕೊಳ್ಳಲಿದೆ. ಒಟ್ಟು 40 ಜನ ಕೆಲಸ ಮಾಡುತ್ತಿದ್ದಾರೆ. ಮೇ ತಿಂಗಳ ಎರಡನೇ ವಾರದಲ್ಲಿ ಪೂರ್ಣಗೊಳಿಸಲಾಗುವುದು' ಎಂದು ಮಾಹಿತಿ ನೀಡಿದರು.

## ಸರ್ಕಾರಿ ಶಾಲೆಗಳ ಶೇ. 70ರಷ್ಟು ನ್ಯೂನತೆ ಸರಿಪಡಿಸಿರುವೆ: ಸಚಿವ ಮಧು ಬಂಗಾರಪ್ಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಆನವಟ್ಟಿ

ಸರ್ಕಾರಿ ಶಾಲೆಗಳಲ್ಲಿ ಶೇ 70ರಷ್ಟು ನ್ಯೂನತೆಗಳನ್ನು ಸರಿಪಡಿಸಲಾಗಿದೆ. ಉಳಿದ ಸಮಸ್ಯೆಗಳನ್ನು ಅದಷ್ಟು ಬೇಗ ಸರಿಪಡಿಸಿ, ಎಲ್ಲಾ ಸರ್ಕಾರಿ ಶಾಲೆಗಳನ್ನು ಉತ್ತಮ ದರ್ಜೆಯ ಸರ್ಕಾರಿ ಶಾಲೆಗಳಾಗಿ ಪರಿವರ್ತಿಸಲಾಗುವುದು ಎಂದು ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು. ಆನವಟ್ಟಿ ಪಟ್ಟಣ ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಂಡಿದ್ದ 50 ಲಕ್ಷ ವೆಚ್ಚದ ವಿವಿಧ ಕಾಮಗಾರಿಗಳ ಭೂಮಿ ಪೂಜೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ಫಲಾನುಭವಿಗಳಿಗೆ ಸೌರ ಹಾಗೂ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದರು.

ಸದ್ಯದಲ್ಲಿಯೇ ದೊಡ್ಡ ಮೊತ್ತದ ಅನುದಾನ ಶಿಕ್ಷಣ ಇಲಾಖೆಗೆ ಬರಲಿದ್ದು, ನಂತರ ಸರ್ಕಾರಿ ಶಾಲೆಗಳ ಚಿತ್ರಣ ಸಂಪೂರ್ಣ ಬದಲಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಹಳ್ಳಿಗಳಲ್ಲಿ ಜೆಜೆಎಂ ಅಡಿ ಕುಡಿಯುವ ನೀರಿನ ಪೈಪ್‌ಲೈನ್ ನಿರ್ಮಾಣ ಕಾಮಗಾರಿ ಬಹುತೇಕ ಮುಗಿದಿದೆ. ಆನವಟ್ಟಿಯಲ್ಲಿ 7 ಲಕ್ಷದ ಒಂದು, 5 ಲಕ್ಷದ ಎರಡು ಟಿಎಚ್‌ಒ ಟ್ಯಾಂಕ್‌ಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಶರಾವತಿ ನದಿಯಿಂದ ದೊಡ್ಡ ಪೈಪ್‌ಗಳ ಕಾಮಗಾರಿ ಶೀಘ್ರವಾಗಿ ಮುಗಿಸಿ ಅನವಟ್ಟಿ, ಸೊರಬ, ಶಿರಾಳಕೊಪ್ಪ ಮುಂತಾದ ಕಡೆ ನದಿಯಿಂದ ಕುಡಿಯುವ ನೀರು ಪೂರೈಸಲಾಗುವುದು ಎಂದು ಭರವಸೆ ನೀಡಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರು 354 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಅಂದಾಜು 600 ಕೋಟಿ ಅನುದಾನ ಒದಗಿಸಲಿದ್ದಾರೆ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಸೊರಬ, ಆನವಟ್ಟಿ, ಶಿರಾಳಕೊಪ್ಪ ನೂತನ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ 380 ಕೋಟಿ ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ ಎಂದು ಮಧು ಮಾಹಿತಿ ನೀಡಿದರು.

## ಮನರೇಗಾ ಭ್ರಷ್ಟಾಚಾರ ಅರಿಯಲು 11 ವರ್ಷ ಬೇಕಾಯಿತೇ?

• ಉದಯವಾಹಿನಿ, ದಾವಣಗೆರೆ

ಮನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರಕ್ಕೆ 11 ವರ್ಷ ಬೇಕಾಯಿತೇ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನಿಸಿದರು. ಯೋಜನೆಯಲ್ಲಿ ಅವ್ಯವಹಾರ ನಡೆಯುತ್ತಿದ್ದರೆ ತನಿಖೆ ನಡೆಸಲು ಕೇಂದ್ರ ಸರ್ಕಾರಕ್ಕೆ ಅವಕಾಶವಿತ್ತು. ಇದನ್ನು ಬಿಟ್ಟು ಯೋಜನೆಯ ಮೂಲಸ್ವರೂಪವನ್ನೇ ಬದಲಿಸಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು. ಮನರೇಗಾ ಯೋಜನೆಯ ಸ್ವರೂಪ ಬದಲಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ರಾಜ್ಯದಲ್ಲಿ ಕಾಂಗ್ರೆಸ್ ಹೋರಾಟ ಕೈಗೆತ್ತಿಕೊಂಡಿದೆ. ಪಕ್ಷದ ಎಲ್ಲಾ ಕಾರ್ಯಕರ್ತರು, ಮನರೇಗಾ ಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು. ಮನರೇಗಾ ಯೋಜನೆಯಡಿ ಗ್ರಾಮಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗಿದೆ. ಕೆರೆ, ರಸ್ತೆ, ಶಾಲೆ, ನಾಲೆ, ಚರಂಡಿ ಸೇರಿ ಹಲವು ಕಾಮಗಾರಿಗಳನ್ನು ನಡೆಸಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಗೆ ಸರ್ಕಾರ ಕೋಟ್ಯಂತರ ರೂಪಾಯಿ ಅನುದಾನ ನೀಡಿತ್ತು. ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರ ಕೊಡಲಿ ಪೆಟ್ಟು ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಆರೋಪಿಸಿದರು.

ಗ್ರಾಮೀಣ ಪ್ರದೇಶದ ಬಡವರಿಗೆ ಕೂಲಿ ನೀಡಿ ಆರ್ಥಿಕ ಸಬಲೀಕರಣಕ್ಕೆ ಯೋಜನೆ ಒತ್ತು ನೀಡಿತ್ತು. ಕೇಂದ್ರ ಮತ್ತು ರಾಜ್ಯದ ಅನುದಾನದ ಪಾಲನ್ನು 60:40ಕ್ಕೆ ಬದಲಾವಣೆ ಮಾಡಿರುವುದು ಕೂಡ ಆಕ್ಷೇಪಾರ್ಹ. ಯೋಜನೆಯಿಂದ ಮಹಾತ್ಮ ಗಾಂಧೀಜಿ ಹೆಸರನ್ನು ಉದ್ದೇಶ ಪೂರ್ವಕವಾಗಿ ಕೈಬಿಡಲಾಗಿದೆ. ಕೇಂದ್ರ ಸರ್ಕಾರದ ಈ ಹುನ್ನಾರವನ್ನು ವಿರೋಧಿಸಿ ರಾಜ್ಯಾದ್ಯಂತ ಹೋರಾಟ ನಡೆಸಲಾಗುತ್ತಿದೆ ಎಂದರು.



## ಕಳ್ಳಭಟ್ಟಿ ಮಾರುವವರನ್ನು ಗಡಿಪಾರು ಮಾಡಿ

• ಉದಯವಾಹಿನಿ, ಯಾದಗಿರಿ


ಉದಯವಾಹಿನಿ ಚಿತ್ರ

ಕಳ್ಳಭಟ್ಟಿ, ಸಿಎಚ್ ಪೌಡರ್ ಕಲಬೆರಕೆಯ ಸೇಂದಿ ತಯಾರಿಸಿ ಮಾರಾಟ ಮಾಡುವವರನ್ನು ಹಾಗೂ ಅದರಲ್ಲಿ ಭಾಗಿಯಾಗುವವರನ್ನು ಗಡಿಪಾರು ಮಾಡಬೇಕು ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಕಲಬುರಗಿ ವಿಭಾಗದ ಜಿಲ್ಲೆಗಳ ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಶರೀರಕ್ಕೆ ಹಾನಿಕರವಾದ ಕಳ್ಳಭಟ್ಟಿ, ಸಿಎಚ್ ಪೌಡರ್ ಬೆರಕೆಯ ಸೇಂದಿ ತಯಾರಕೆ ತಡೆಗೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಿರ್ಲಕ್ಷ್ಯ ವಹಿಸಿದ್ದು ಕಂಡುಬಂದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ರಾಯಚೂರು ಜಿಲ್ಲೆಯಲ್ಲಿ ಅಕ್ರಮ ಸೇಂದಿ, ಕಳಭಟ್ಟಿಯನ್ನು ವ್ಯಾಪಕವಾಗಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಇಂತಹ ಅಕ್ರಮಕ್ಕೆ ಕಡಿವಾಣ ಹಾಕುವಂತೆ ಈ ಹಿಂದಿನ ಸಭೆಯಲ್ಲಿಯೇ ಸೂಚಿಸಲಾಗಿತ್ತು. ಇದುವರೆಗೂ ನಿರೀಕ್ಷೆಯಂತೆ ಕೆಲಸವಾಗಿಲ್ಲ. ಹಾಗಿದ್ದರೆ ನೀವೆಲ್ಲರೂ ಏಕೆ ಇರಬೇಕು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಕ್ರಮ ಸರಾಯಿ, ಸೇಂದಿ ಮಾರಾಟವಾದರೆ ಜನರ ಸ್ವಾಸ್ಥ್ಯ ಕೆಡುತ್ತದೆ. ಜೊತೆಗೆ ಸರ್ಕಾರಕ್ಕೆ ಅಬಕಾರಿ ಇಲಾಖೆಯಿಂದ ತೆರಿಗೆ ನಷ್ಟವಾಗುತ್ತದೆ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅಧಿಕಾರಿಗಳು ಎಚ್ಚರಿಕೆಯಿಂದ ಇದ್ದು, ಅಕ್ರಮಗಳನ್ನು ತಡೆಯಬೇಕು ಎಂದು ತಾಕೀತು ಮಾಡಿದರು. ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಮಾತನಾಡಿ, ಯಾದಗಿರಿ ನಗರದಲ್ಲಿ ಬ್ಯಾರೆಲ್‌ನಲ್ಲಿ ಕಳ್ಳಭಟ್ಟಿ, ಸೇಂದಿ ತಯಾರಿಸಿ ಮಹಡಿಯ ಮೇಲೆ ಇರಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಸಚಿವರ ಮುಂದೆ ಪ್ರಸ್ತಾಪಿಸಿದರು.

ಈ ಬಗ್ಗೆ ಸಚಿವರಿಗೆ ಸ್ಪಷ್ಟನೆ ನೀಡಿದ ಅಧಿಕಾರಿಗಳು, 'ಅಂತಹುದೆಲ್ಲ ಇಲ್ಲ' ಎನ್ನುತ್ತಿದ್ದಂತೆ, ಶಾಸಕರು ಸಿಟ್ಟಾಗಿ, ನಾನೊಬ್ಬ ಶಾಸಕನಾಗಿ ಹೇಳುತ್ತಿರುವುದು ಸುಳ್ಳೆ ಎಂದು ಪ್ರಶ್ನಿಸಿದರು. ಆಗ ಸಚಿವರು. ಅದನ್ನು ಕೂಡಲೇ ಪತ್ತೆ ಹಚ್ಚಿ ತಡೆಗಟ್ಟಿ ಕ್ರಮವೂ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

## ಕಾಂಗ್ರೆಸ್‌ನಲ್ಲಿರುವ ಗಾಂಧಿಗಳೆಲ್ಲ ನಕಲಿ: ಸಂಸದ ಗೋವಿಂದ ಕಾರಜೋಳ

• ಉದಯವಾಹಿನಿ, ಚಿತ್ರದುರ್ಗ:

ಕಾಂಗ್ರೆಸ್‌ನಲ್ಲಿ ಇರುವಂತಹ ಗಾಂಧಿಗಳು ಎಲ್ಲಾ ನಕಲಿ ಗಾಂಧಿಗಳಿದ್ದಾರೆ. ಇವರು ಮಹಾತ್ಮನ ಹೆಸರು ಉಳಿಸಲು ಅಲ್ಲ ಅಳಿಸಲು ಇದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು. ಮಹಾತ್ಮ ಗಾಂಧೀಜಿಯವರು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಸಮಯದಲ್ಲಿ ದೇಶವು ಸ್ವರಾಜ್ಯ ಮತ್ತು ಗ್ರಾಮ ಅಭಿವೃದ್ಧಿಯಾಗಬೇಕೆಂಬ ಕನಸು ಕಂಡಿದ್ದರು. ಅದನ್ನು ಪ್ರಧಾನಿ ನರೇಂದ್ರ ಮೋದಿ ನನಸು ಮಾಡಲು ಮುಂದಾಗಿದ್ದಾರೆ. ಇದನ್ನು ಕಾಂಗ್ರೆಸ್ ನಾಯಕರಿಗೆ ಸಹಿಸಲು ಆಗುತ್ತಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಕಾಂಗ್ರೆಸ್‌ನಲ್ಲಿ ಇರುವಂತಹ ಗಾಂಧಿಗಳು ಯಾರೂ ಸಹ ಗಾಂಧೀಜಿ ವಂಶಸ್ಥರಲ್ಲ. ಅವರ ಹೆಸರಿನ ಮೇಲೆ ರಾಜಕೀಯ ಮಾಡುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಹೆಸರಿನಲ್ಲಿ ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಇದರಲ್ಲಿ ಮಹಾತ್ಮ ಗಾಂಧೀಜಿಯವರ ನೆನಪು ಸಹ ಇಲ್ಲ' ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ವಿಬಿ ಜಿ ರಾಮ್ ಜೀ (ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ ಯೋಜನೆ) ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ. ಇಷ್ಟು ವರ್ಷಗಳ ಕಾಲ ಉದ್ಯೋಗ ಖಾತ್ರಿ ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ ಯಾವುದೇ ಆಸ್ತಿ ಸೃಷ್ಟಿ ಮಾಡಲು ಸಾಧ್ಯವಾಗಿಲ್ಲ. ಉದ್ಯೋಗ ಚೀಟಿಗಳ ಹೆಸರಿನಲ್ಲಿ ನಡೆಯುತ್ತಿದ್ದ ವ್ಯಾಪಕ ಭ್ರಷ್ಟಾಚಾರಕ್ಕೆ ಇತಿಶ್ರೀ ಹಾಡುವ ಉದ್ದೇಶದಿಂದ ಯೋಜನೆಗೆ ಹೊಸ ರೂಪ ನೀಡಲಾಗಿದೆ' ಎಂದು ತಿಳಿಸಿದರು.



# ಸೋಲು-ಗೆಲುವು ಜನರ ತೀರ್ಮಾನ


### ತಾಕತ್ತಿದ್ದರಿಂದ ಅರಸೀಕೆರೆಯಿಂದ ಸ್ಪರ್ಧಿಸಲಿ: ರೇವಣ್ಣಗೆ ಶಿವಲಿಂಗೇಗೌಡ ಆಹ್ವಾನ

• ಉದಯವಾಹಿನಿ, ಅರಸೀಕೆರೆ

**ರಾಜಕೀಯ ರಣರಂಗ ನೋಡೋಣ**

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ತಾಕತ್ತಿದ್ದರೆ ಅರಸೀಕೆರೆ ಕ್ಷೇತ್ರದಿಂದಲೇ ಸ್ಪರ್ಧೆ ಮಾಡಲಿ. ರಾಜಕೀಯ ರಣರಂಗ ನೋಡೋಣ ಎಂದು ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಸವಾಲು ಹಾಕಿದರು.

ನಗರದ ಪಿ.ಪಿ.ವೃತ್ತದಲ್ಲಿ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಚುನಾವಣೆ ನಡೆಯುತ್ತದೆ. ಇಂದೇ ಸವಾಲು ಹಾಕಿದ್ದೇನೆ. ತಾಕತ್ತದ್ದರೆ ಬನ್ನಿ ಸ್ಪರ್ಧೆ ಮಾಡಿ. ಎಲ್ಲರ ಗೆಲುವು ಸೋಲು ತೀರ್ಮಾನ ಮಾಡುವುದು ಜನತೆ. ಹೈಕಮಾಂಡ್ ಹಾಗೂ ಪಕ್ಷದ ಕಾರ್ಯಕರ್ತರನ್ನು ಕೇಳುವುದೇ ಬೇಡ. ನಾನೇ ಆಹ್ವಾನ ನೀಡುತ್ತಿದ್ದೇನೆ. ತಾಕತ್ತಿದ್ದರೆ ಅರಸೀಕೆರೆಯಲ್ಲಿ ಚುನಾವಣೆಯಲ್ಲಿ ನಿಲ್ಲಲಿ ಎಂದು ರೇವಣ್ಣ ಹೆಸರು ಹೇಳದೇ ವಾಗ್ದಾಳಿ ನಡೆಸಿದರು. ಎಚ್.ಕೆ.ಪಾಟೀಲ ಜೊತೆ ಮಾತುಕತೆ, ಅಲ್ಲಿ ನಾನು ಕಣ್ಣೀರು ಹಾಕಿದ್ದು ಸೇರಿದಂತೆ ವಿಧಾನಸಭೆಯಲ್ಲಿ ಎಲ್ಲಾ ದಾಖಲಾತಿ ಇರುತ್ತದೆ. ಎಲ್ಲರ ಜೊತೆ ಚರ್ಚೆ ಮಾಡಿ, ಹೋರಾಟ ಮಾಡಿ ನೀರು ತಂದಿದ್ದೇನೆ. ಸುಮ್ಮನೇ ಇಲ್ಲಸಲ್ಲದ ಆರೋಪ ಮಾಡುವುದಲ್ಲ. ರಾಜಕೀಯ ಮಾಡಿ, ಬೇಡ ಅನ್ನುವುದಿಲ್ಲ. ಆದರೆ ಅರಸೀಕೆರೆಯ ಶಾಂತಿ, ನೆಮ್ಮದಿ ಕದಡಬೇಡಿ. ಗುಂಪುಗಾರಿಕೆ ಮಾಡಿಕೊಂಡು ಆರೋಪಗಳು ಮಾಡಿದರೆ ಇಲ್ಲಿ ಯಾರೂ ಹೆದರುವವರಲ್ಲ ಎಂದು ಹೇಳಿದರು. ಪಕ್ಷ ಬಿಡಲು ಬಲವಾದ ಕಾರಣಗಳಿವೆ. ಅರಸೀಕೆರೆಗೆ ಇದುವರೆಗೂ ಎಂಎಲ್‌ಸಿ ಸ್ಥಾನ ಸಿಕ್ಕಿಲ್ಲ.



> ಅರಸೀಕೆರೆ ಕ್ಷೇತ್ರಕ್ಕೆ ನಿಮ್ಮ ಕೊಡುಗೆ ಏನು? ನೀವು ಯಾವ ಅಭಿವೃದ್ಧಿ ಮಾಡಿದ್ದೀರಾ? ನನ್ನ ಕೆಲಸಗಳ ಬಗ್ಗೆ ದಾಖಲಾತಿ ಬಿಡುಗಡೆ ಮಾಡುತ್ತೇನೆ
>
> –ಕೆ.ಎಂ. ಶಿವಲಿಂಗೇಗೌಡ, ಶಾಸಕ

ಅದಕ್ಕಾಗಿ ಕೊಡಬೇಕು ಎಂದು ಕೇಳಿದೆ. ಬಿಳಿಚೌಡಯ್ಯ ಅವರಿಗೆ ನೀವೇ ರೆಡಿಯಾಗಿ ಅಂತಲೂ ಹೇಳಿದ್ದೆ. ಆದರೆ ಇವರು ಪುತ್ರರನ್ನು ಎಂಎಲ್‌ಸಿ ಮಾಡಿದರು. ಅಂದೇ ನಾನು ನಿಮ್ಮ ಪಕ್ಷದಲ್ಲಿ ಇರುವುದಿಲ್ಲ ಎಂದು ಬಹಿರಂಗವಾಗಿ ಹೇಳಿ ಬಂದಿದ್ದೇನೆ ಎಂದರು. ಹಾಸನದ ಸಮೀಪ 4 ಎಂಜಿನಿಯರಿಂಗ್ ಕಾಲೇಜುಗಳಿದ್ದರೂ, ಮೊಸಳೆಹೊಸಹಳ್ಳಿಗೆ ಮತ್ತೊಂದು ಎಂಜಿನಿಯರಿಂಗ್ ಕಾಲೇಜು ಕೊಟ್ಟರು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ, ಅರಸೀಕೆರೆ ಕ್ಷೇತ್ರಕ್ಕೆ ಎಂಜಿನಿಯರಿಂಗ್ ಕಾಲೇಜು ನೀಡದಿದ್ದಲ್ಲಿ ನಾನು ಪಕ್ಷ ಬಿಡುವುದಾಗಿ ಹೇಳಿದ್ದೆ. ತೀವ್ರ ಚರ್ಚೆ ಮಾಡಿದಾಗ ಅವರು ಒಪ್ಪಿದರು. ಆದರೆ ಸರ್ಕಾರ ಬಿದ್ದು ಹೋಯಿತು. ನಂತರ ಬಿಜೆಪಿ ಸರ್ಕಾರದಲ್ಲಿ ಮನವಿ ಮಾಡಿ ಮುಂದುವರಿಸಲಾಗಿತ್ತು. ಈಗ ಹಣ ಹಾಕಿಸಿ ಕಟ್ಟಡ ಮಾಡಲಾಗಿದೆ ಎಂದು ವಿವರಿಸಿದರು.

ರಾಜಕಾರಣ ಮಾಡುವುದಕ್ಕೆ ಬರುತ್ತದೆ. ನನಗೆ ಎಲ್ಲಾ ಸಮಾಜದವರೂ ಮತ ಹಾಕುತ್ತಾರೆ. ನನ್ನನ್ನು ಮಂತ್ರಿ ಮಾಡುವುದಾಗಿ ಸಂಸದ ಶ್ರೇಯಸ್ ಪಟೇಲ್ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ನೋಡೋಣ, ಸಿದ್ದರಾಮಯ್ಯ ಅವರಂಥ ಸರಳ, ಸಜ್ಜನ ವ್ಯಕ್ತಿ ಮತ್ತೊಬ್ಬರಿಲ್ಲ. ಅವರು ನೀಡಿದ ಕೊಡುಗೆ ನಾಡಿನ ಜನತೆಗೆ ವರದಾನವಾಗಿದೆ ಎಂದರು.

ಗಂಡಸಿ ಹೋಬಳಿಯ ಜನತೆ ಕೂಡ ನನಗೆ ಲೀಡ್ ಕೊಟ್ಟಿದ್ದಾರೆ. ಅವರ ಬಲದಿಂದಲೂ ನಾನು ಸತತವಾಗಿ 4 ಬಾರಿ ಶಾಸಕನಾಗಿದ್ದೇನೆ. ಯಾರೇ ಏನೇ ಅಂದರೂ ಅಭಿವೃದ್ಧಿ ಕೆಲಸ ಬಿಡುವುದಿಲ್ಲ. ಗೃಹಮಂಡಳಿಯಿಂದ ಸಾವಿರಾರು ಮನೆಗಳ ನಿರ್ಮಾಣಕ್ಕೆ ಕೆಲವರು ಅಡ್ಡಿ ಮಾಡಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಅರಸೀಕೆರೆ ಕ್ಷೇತ್ರಕ್ಕೆ ನೀರು ಬರುವುದಿಲ್ಲ ಎಂದು ತುಂಬು ಸಭೆಯಲ್ಲಿ ಹೇಳಿದ್ದರು. ಆದರೆ ಇಂದು ಕಣಕಟ್ಟೆ ಹೋಬಳಿಗೆ ನೀರು ಬಂದಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಕೆರೆಗಳಿಗೂ ನೀರು ಹರಿಯುತ್ತದೆ. ಇದೀಗ ಹಾರನಹಳ್ಳಿ ಕೆರೆ ತುಂಬಿ ಬಾಗಿನ ಅರ್ಪಿಸುತ್ತೇವೆ ಬನ್ನಿ ಎಂದರು.

### ನನ್ನ ಮಗ ರಾಜಕೀಯಕ್ಕೆ ಬರಲ್ಲ

ಅರಸೀಕೆರೆ ಕ್ಷೇತ್ರ ಬಿಡುವವನಲ್ಲ. ನನಗೆ ರಾಜಕೀಯ ಜನ್ಮ ಪುನಜನ್ಮ ನೀಡಿರುವ ಕ್ಷೇತ್ರ ಬಿಟ್ಟು ಎಲ್ಲಿಯೂ ಹೋಗಲ್ಲ. ಇವರ ರೀತಿ ಕುಟುಂಬ ರಾಜಕಾರಣ ಮಾಡುವವನಲ್ಲ. ನನ್ನ ಪುತ್ರ ರಾಜಕೀಯಕ್ಕೆ ಬರುತ್ತಾರೆ ಎಂದು ಯಾವುದೋ ಪತ್ರಿಕೆಯಲ್ಲಿ ಬರೆದಿದ್ದರು. ಆದರೆ ಅವನು ರಾಜಕೀಯಕ್ಕೆ ಬರುವುದಿಲ್ಲ. ವೈದ್ಯ ವೃತ್ತಿ ಮಾಡುತ್ತಾನೆ. ನಮ್ಮ ಮುಖಂಡರಲ್ಲಿ ಯಾರೋ ಒಬ್ಬರು ಮುಂದುವರಿಯುತ್ತಾರೆ. ಯಾವ ಸಮಾಜದವರಾದರೂ ನಿಂತುಕೊಳ್ಳಲಿ ಅವರಿಗೆ ಸಹಕಾರ ಆಶೀರ್ವಾದ ಮಾಡುತ್ತೇನೆ ಎಂದು ಶಿವಲಿಂಗೇಗೌಡ ಹೇಳಿದರು. ಕ್ಷೇತ್ರ ವಿಂಗಡಣೆ ಆದಾಗ ಯಾರೂ ಟಿಕೆಟ್ ನೀಡಲಿಲ್ಲ. ಈ ಹಿಂದೆ ನಾನು 14 ಮತಗಳಿಂದ ಸೋತಾಗ ನಾನೇ ಖುದ್ದಾಗಿ ಬಿ.ಫಾರ್ಮ್ ತೆಗೆದುಕೊಂಡು ಧೈರ್ಯ ಮಾಡಿ ಪ್ರಯತ್ನ ಮಾಡೋಣ ಎಂದು ನಿಂತಿದ್ದೆ. ಅರಸೀಕೆರೆ ತಾಲ್ಲೂಕಿನ ಜನತೆ 34 ಸಾವಿರ ಮತಗಳ ಅಂತರದಲ್ಲಿ ಗೆಲುವು ಕೊಟ್ಟರು ಎಂದರು. ಒಕ್ಕಲಿಗರು ಇರುವ ದುದ್ದ ಶಾಂತಿಗ್ರಾಮ ತಣ್ಣೀರುಹಳ್ಳ ಸೇರಿಸಿಕೊಂಡು ಹೊಳೆನರಸೀಪುರ ಕ್ಷೇತ್ರ ಮಾಡಿದರು. ಗಂಡಸಿ ಹೋಬಳಿ ಸೇರಿಸಿ ಅರಸೀಕೆರೆ ಕ್ಷೇತ್ರ ಮಾಡಿದರು. ಲಿಂಗಾಯತ ಸಮಾಜದವರು ಇರುವ ಕ್ಷೇತ್ರ ಬಿಟ್ಟು ನನಗೆ ಕ್ಷೇತ್ರ ಇಲ್ಲದಂತೆ ಮಾಡಿದರಲ್ಲ ಅದು ನ್ಯಾಯವೇ ಎಂದು ಪ್ರಶ್ನಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ಯಾರಿಂದಲೂ ಸಲಹೆಯನ್ನು ತೆಗದುಕೊಳ್ಳದೆ ನೀವು ಹಣವನ್ನು ಎಲ್ಲಿಯೂ ಹೂಡಿಕೆ ಮಾಡಬಾರದು. ಪತ್ನಿಯೊಂದಿಗೆ ಶಾಪಿಂಗ್ ಅನ್ನು ಅಪಾರವಾಗಿ ಆನಂದಿಸುತ್ತೀರಿ.

**ವೃಷಭ** ನಿಮ್ಮ ಹಠಾತ್, ಹಠಮಾರಿ ಪ್ರವೃತ್ತಿಯನ್ನು ವಿಶೇಷವಾಗಿ ಪಾರ್ಟಿಗಳಲ್ಲಿ ನಿಯಂತ್ರಿಸಲು ಪ್ರಯತ್ನಿಸಿ ಏಕೆಂದರೆ ಇದು ಪಕ್ಷದ ಮೂಡ್ ಹಾಳು ಮಾಡಬಹುದು. ಇಂವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮಿಥುನ** ಗಾಳಿಗೊಡ್ಡಿದ ಆಹಾರ ನಿಮಗೆ ಅನಾರೋಗ್ಯ ತರಬಹುದಾದ್ದರಿಂದ ಅವುಗಳನ್ನು ತಿನ್ನಬೇಡಿ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ. ಸಂಗಾತಿಯೊಡನೆ ಉತ್ತಮ ತಿಳುವಳಿಕೆ ಮನೆಯಲ್ಲಿ -ಶಾಂತಿ ಸಮೃದ್ಧಿ ತರುತ್ತದೆ.

**ಕರ್ಕಾಟಕ** ನೀವು ಕೆಲವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯಿರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಸಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ.

**ಸಿಂಹ** ಅಶಕ್ತ ದೇಹ ಮನಸ್ಸನ್ನು ದುರ್ಬಲಗೊಳಿಸುವುದರಿಂದ ಶಕ್ತಿಯನ್ನು ಮರಳಿ ಪಡೆಯಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ಸಾಮರ್ಥ್ಯದ ಕೊರತೆಯಿರದೇ ಇಚ್ಛಾಶಕ್ತಿಯ ಕೊರತೆಯಿದೆಯೆಂದು ಅರ್ಥಮಾಡಿಕೊಳ್ಳಬೇಕು. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

**ಕನ್ಯಾ** ಬಲವಾದ ಧೃಢತೆ, ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷ ತರಬಹುದು.

**ತುಲಾ** ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳಿವೆ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣವನ್ನು ಖರ್ಚುಮಾಡಬಹುದು ಕುಟುಂಬದ ಸದಸ್ಯರೊಂದಿಗೆ ಒಂದು ಶಾಂತಿಯುತ ಮತ್ತು ಶಾಂತ ದಿನವನ್ನು ಆನಂದಿಸಿ.

**ವೃಶ್ಚಿಕ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಎಲ್ಲಾದರೂ ಹೂಡಿಕೆ ಮಾಡಿರುವ ಜನರು, ಇಂದಿನ ದಿನ ಅವರಿಗೆ ಆರ್ಥಿಕ ನಷ್ಟ ಸಂಭವಿಸಬಹುದು ಈ ಅವಧಿ ನಿಮ್ಮ ಹೊಸ ಯೋಜನೆಗಳು, ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ. ನಗು ಯಾವುದೇ ಅರ್ಥ ಹೊಂದಿಲ್ಲ.

**ಧನಸ್ಸು** ದೀರ್ಘಕಾಲೀನ ಅನಾರೋಗ್ಯದ ಚೇತರಿಸಿಕೊಳ್ಳುತ್ತೀರಿ. ಆದರೆ ಸ್ವಾರ್ಥಿಗಳಾದ, ಮುಂಗೋಪಿ ವ್ಯಕ್ತಿಯ ಸಹವಾಸವನ್ನು ತಪ್ಪಿಸಿ - ಅವರು ಒತ್ತಡ ಹಾಕಬಹುದು-ಇದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಬಹುದು. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ.

**ಮಕರ** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಇಂದು ನೀವು ಯಾತ್ರೆಯಲ್ಲಿ ಹೋಗುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ. ವಿಶೇಷವಾಗಿ ನಿಮ್ಮ ಹಣದ ಚೀಲವನ್ನು ಎಚ್ಚರಿಕೆಯಿಂದಿಡಿ.

**ಕುಂಭ** ಕೆಲಸದ ಒತ್ತಡ, ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ಇಂವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ.

**ಮೀನ** ಆಕರ್ಷಕವಾದ, ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ಸಮಸ್ಯೆಗಳನ್ನು ದೂರ ತಳ್ಳಿ, ಮನೆಯಲ್ಲಿ ಸ್ನೇಹಿತರ ನಡುವೆಯೆರಡೂ ನಿಮ್ಮ ಸ್ಥಾನವನ್ನು ಸುಧಾರಿಸುವಲ್ಲಿ ಮನಸ್ಸು ನೀಡಿ.

# ವ್ಯರ್ಥವಾಗಿ ಹರಿದ ನೀರು: ನಿರಾಸೆಗೊಂಡ ರೈತರು

• ಉದಯವಾಹಿನಿ, ಚಿಕ್ಕೋಡಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಕಲ್ಲೋಳ- ಯಡೂರ ನಡುವೆ ಕೃಷ್ಣಾ ನದಿಗೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ 29 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಬ್ಯಾರೇಜಿಗೆ ಇದೀಗ ಗೇಟ್ ಅಳವಡಿಸಲು ನೀರಾವರಿ ಇಲಾಖೆ ಮುಂದಾಗಿದೆ. ಆದರೆ, ಈವರೆಗೆ ಸಾಕಷ್ಟು ನೀರು ವ್ಯರ್ಥವಾಗಿ ಹರಿದುಹೋಗಿದೆ. ಅಧಿಕಾರಿ ವರ್ಗದ ಈ ವಿಳಂಬ ನೀತಿಗೆ ರೈತಾಪಿ ಜನ ಕೆಂಡಾಮಂಡಲವಾಗಿದ್ದಾರೆ. ಮಳೆಗಾಲದ ಬಳಿಕ ಗೇಟ್ ಅಳವಡಿಕೆ ಕಾರ್ಯವನ್ನು ನಿರ್ಲಕ್ಷ್ಯ ಮಾಡಿದ್ದರಿಂದ ನೀರಾವರಿ ಇಲಾಖೆಯ ಅಧಿಕಾರಿಗಳು ಈಗ ಬೆಲೆ ತೆತ್ತಬೇಕಿದೆ. ಕಳೆದ ನಾಲ್ಕು ತಿಂಗಳ ಹಿಂದೆಯೇ ಗೇಟ್ ಅಳವಡಿಕೆ ಮಾಡಿದ್ದಲ್ಲಿ ಬ್ಯಾರೇಜಿನ ಹಿನ್ನೀರು ಖಾಲಿಯಾಗುತ್ತಿರಲಿಲ್ಲ. ಇದಕ್ಕೆಲ್ಲ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂಬುವುದು ರೈತರ ಆರೋಪ. ನಾಲ್ಕು ದಿನಗಳ ಹಿಂದೆ ಹಿಪ್ಪರಗಿ ಬ್ಯಾರೇಜಿನ 22ನೇ ಗೇಟ್ ತಾಂತ್ರಿಕ ತೊಂದರೆಯ ಕಾರಣದಿಂದ ಸಾಕಷ್ಟು ಪ್ರಮಾಣದಲ್ಲಿ ನೀರು ಪೋಲಾಗಿದೆ. ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ನಿರ್ಮಾಣವಾಗಿರುವ ಕಲ್ಲೋಳ- ಯಡೂರ ಬ್ಯಾರೇಜಿನಲ್ಲಿ 0.6 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. 2021ರಲ್ಲಿ ಮಹಾ ಮಳೆಯಿಂದ ಉಂಟಾದ ಪ್ರವಾಹದಲ್ಲಿ ಕೊಚ್ಚಿಹೋಗಿದ್ದ ಬ್ಯಾರೇಜ್ ಮರು ನಿರ್ಮಾಣ ಕಾಮಗಾರಿಯು 2025ರ ಮೇ ತಿಂಗಳಲ್ಲಿ ಪೂರ್ಣಗೊಂಡಿದೆ.

ನೂತನ ಬ್ಯಾರೇಜ್ 192 ಮೀಟರ್ ಉದ್ದ, 8.5 ಮೀಟರ್ ಎತ್ತರವಿದ್ದು, 32 ಸ್ಲ್ಯಾಬ್ ಇದೆ. 64 ಗೇಟ್ ಅಳವಡಿಸುವ ಕೆಲಸ ಬಾಕಿ ಇತ್ತು. ಆದರೆ ನಿಗದಿತ ಸಮಯದಲ್ಲಿ ಗೇಟ್ ಅಳವಡಿಸದೆ ಇರುವುದರಿಂದ ಹಿಪ್ಪರಗಿ ಬ್ಯಾರೇಜ್ ಗೇಟ್ ಮುರಿದ ಬಳಿಕ ಕಲ್ಲೋಳ- ಯಡೂರ ಬ್ಯಾರೇಜಿನಿಂದಲೂ ನೀರು ವ್ಯರ್ಥವಾಗಿ ಕೆಳಭಾಗಕ್ಕೆ ಹರಿದು ಹೋಗಿದೆ.

ಬೇಸಿಗೆ ಕಾಲದಲ್ಲಿ ಜನ ಜಾನುವಾರುಗಳಿಗೆ ಕುಡಿಯಲು, ಕೃಷಿಗೆ ಬಳಕೆಯಾಗಬೇಕಿದ್ದ ನೀರು ಇದೀಗ ವ್ಯರ್ಥವಾಗಿ ಹರಿದು ಹೋಗಿದ್ದರಿಂದ ಕಲ್ಲೋಳ- ಯಡೂರ ಬ್ಯಾರೇಜಿನ ಸುತ್ತಮುತ್ತಲಿನ ಗ್ರಾಮಗಳ ಜನರು ಆತಂಕಕ್ಕೊಳಗಾಗಿದ್ದಾರೆ. ಅಷ್ಟೇ ಅಲ್ಲದೇ, ಬ್ಯಾರೇಜಿನ ಹಿನ್ನೀರನ್ನು ಬಳಕೆ ಮಾಡಿಕೊಂಡು ಚಿಕ್ಕೋಡಿ ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿತ್ತು. ಬೇಸಿಗೆಯಲ್ಲಿ ನೀರು ಬೇಕಾದಲ್ಲಿ ಮಹಾರಾಷ್ಟ್ರದತ್ತ ಮುಖ ಮಾಡಬೇಕಿರುವುದು ಅನಿವಾರ್ಯವಾಗಿದೆ. ಇದೀಗ ಗೇಟ್ ಅಳವಡಿಸಲು ನೀರಾವರಿ ಇಲಾಖೆ ಮುಂದಾಗಿದ್ದರೂ ಗೇಟ್‌ಗಳು ಗುಣಮಟ್ಟದಿಂದ ಕೂಡಿಲ್ಲ. ಬಳಸುವ ರಬ್ಬರ್ ಕೂಡ ಗಟ್ಟಿ ಮುಟ್ಟಾಗಿಲ್ಲ. ಗೇಟ್ ಗಾತ್ರ ಕೂಡ ತುಂಬಾ ಚಿಕ್ಕದಾಗಿದ್ದು, ನೀರು ಸೋರಿಕೆಯಾಗುವ ಸಾಧ್ಯತೆ ಇದೆ ಎಂಬ ಆತಂಕವನ್ನು ಸ್ಥಳೀಯರು ವ್ಯಕ್ತಪಡಿಸಿದ್ದಾರೆ.

6 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಹಿಪ್ಪರಗಿ ಬ್ಯಾರೇಜಿನಿಂದಲೂ 2 ಟಿಎಂಸಿ ಅಡಿಗೂ ಹೆಚ್ಚು ನೀರು ಖಾಲಿಯಾಗಿದ್ದು, ಹಾಗೇನೇ ಕಲ್ಲೋಳ- ಯಡೂರ ಬ್ಯಾರೇಜಿನ ಹಿನ್ನೀರು ಹರಿದು ಹೋಗಿದ್ದರಿಂದ ಮೀನುಗಾರರು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಕೂಡಲೇ ಗೇಟ್ ಅಳವಡಿಸುವ ಕಾರ್ಯವನ್ನು ನೀರಾವರಿ ಇಲಾಖೆ ಪೂರ್ಣಗೊಳಿಸಿದ್ದಲ್ಲಿ ಮಹಾರಾಷ್ಟ್ರ ರಾಜ್ಯದ ರಾಜಾಪೂರೆ ಬ್ಯಾರೇಜಿನಿಂದ ಹರಿದು ಬರುವ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯವಿದೆ.

# ಗ್ಯಾರಂಟಿಗಳಿಂದ ಜನತೆಗೆ ಆರ್ಥಿಕ ಭದ್ರತೆ

## ಗ್ಯಾರಂಟಿ ಯೋಜನೆಗಳಿಗಾಗಿ 1 ಲಕ್ಷದ 10 ಸಾವಿರ ಕೋಟಿ ರೂ. ಹಣ ವ್ಯಯ: ದಿನೇಶ್ ಗೂಳಿಗೌಡ

• ಉದಯವಾಹಿನಿ, ಚಿತ್ರದುರ್ಗ



ಉದಯವಾಹಿನಿ ಚಿತ್ರ

ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಇದುವರೆಗೂ 1 ಲಕ್ಷದ 10 ಸಾವಿರ ಕೋಟಿ ರೂ.ಹಣವನ್ನು ರಾಜ್ಯ ಸರ್ಕಾರ ವ್ಯಯಿಸಿದೆ. ಹೊಳಲ್ಕೆರೆ ತಾಲ್ಲೂಕಿಗೆ 293 ಕೋಟಿ ರೂ.ಗೂ ಅಧಿಕ ಹಣವನ್ನು ವೆಚ್ಚ ಮಾಡುವ ಮೂಲಕ ಜನತೆಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಕಲ್ಪಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಕೈಗೊಂಡಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ಅವರು ಹೇಳಿದರು.

ಹೊಳಲ್ಕೆರೆ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ಯಾರಂಟಿ ಯೋಜನೆಳಿಗೆ ಹಣ ನೀಡುವುದರ ಜೊತೆಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಜೆಟ್ ನಲ್ಲಿ 1.36 ಲಕ್ಷ ಕೋಟಿ ರೂ.ಹಣವನ್ನು ಮೀಸಲಿಡುವ ಮುಲಕ ಅಭಿವೃದ್ಧಿ ಗ್ಯಾರಂಟಿಯನ್ನು ಸಹ ನೀಡುತ್ತಿದೆ ಎಂದರು.

ಕರ್ನಾಟಕದಲ್ಲಿ ಜಾರಿಗೆ ಬಂದ ಐದು ಗ್ಯಾರಂಟಿ ಯೋಜನೆಗಳು ರಾಜ್ಯಮಟ್ಟಕ್ಕೆ ಸೀಮಿತವಾಗದೆ, ಇಡೀ ದೇಶದ ರಾಜಕೀಯ ಆಡಳಿತ ಚರ್ಚೆಯ ದಿಕ್ಕನ್ನೇ ಬದಲಿಸಿವೆ. ಬಡತನ ನಿವಾರಣೆ, ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಭದ್ರತೆ ಕುರಿತಂತೆ ''ಗ್ಯಾರಂಟಿ ಮಾದರಿ'' ರಾಷ್ಟ್ರಮಟ್ಟದಲ್ಲಿ ಹೊಸ ಇತಿಹಾಸ ಬರೆದಿದೆ ಎಂದು ಹೇಳಿದರು. ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾ ಮಾಡುವ ಮೂಲಕ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಗ್ಯಾರಂಟಿ ಯೋಜನೆಗಳು ಜನಕಲ್ಯಾಣದ ಕಲ್ಪನೆಯನ್ನು ಪುನರ್‌ವ್ಯಾಖ್ಯಾನ ಮಾಡಿವೆ. ಬಡವರು, ಮಹಿಳೆಯರು ಮತ್ತು ಯುವಕರನ್ನು ನೇರವಾಗಿ ಕೇಂದ್ರವಾಗಿಟ್ಟುಕೊಂಡ ಈ ಯೋಜನೆಗಳು, ಇತರ ರಾಜ್ಯಗಳು ಮತ್ತು ರಾಷ್ಟ್ರಮಟ್ಟದ ನೀತಿ ರೂಪಿಸುವವರ ಮೇಲೆ ಪ್ರಭಾವ ಬೀರಿದೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳು ಜನರ ಬದುಕಿಗೆ ಆಸರೆಯಾಗಿವೆ. ವಿರೋಧಿಸುವವರು ಕೂಡ ಈ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಸರ್ಕಾರದ ಈ ಯೋಜನೆಗಳ ಬಗ್ಗೆ ಗ್ರಾಪಂ ಮಟ್ಟದಲ್ಲಿ ಸಾಕಷ್ಟು ಪ್ರಚಾರ ಮಾಡಬೇಕಿದೆ ಎಂದು ಚಿತ್ರದುರ್ಗ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಶಿವಣ್ಣ ಹೇಳಿದರು. ಸಮಿತಿ ಸದಸ್ಯರು ಕೂಡ ಇದಕ್ಕೆ ದನಿಗೂಡಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಶಿವಪ್ರಕಾಶ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಮೈಲಾರಪ್ಪ, ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ ಹಾಗೂ ಜಿಲ್ಲಾ, ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

**ಗ್ರಾಪಂಗಳಲ್ಲಿ ಪ್ರಚಾರ:** ಹೊಳಲ್ಕೆರೆ ತಾಲ್ಲೂಕಿನ 29 ಗ್ರಾಮ ಪಂಚಾಯತಿಗಳಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ವ್ಯಾಪಕ ಪ್ರಚಾರ ಕಾರ್ಯಕೈಗೊಳ್ಳಬೇಕು ಎಂದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ದಿನೇಶ್ ಗೂಳಿಗೌಡ ಅವರು ಸೂಚನೆ ನೀಡಿದರು. ಫಲಾನುಭವಿಗಳ ಸಂಖ್ಯೆ, ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಸಂಪೂರ್ಣ ಅಂಕಿಸಂಖ್ಯೆಗಳನ್ನು ಒಳಗೊಂಡ ಫ್ಲೆಕ್ಸ್‌ಗಳನ್ನು ಅಳವಡಿಸಬೇಕೆಂದು ಸೂಚಿಸಿದರು.


### ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ನೆನೆಯಬೇಕು

**ಗೃಹಲಕ್ಷ್ಮಿ ಹಣದಿಂದ ಕುಟುಂಬದ ಆರ್ಥಿಕ ಪರಿಸ್ಥಿತಿ ಸರಿದೂಗಿಸಲು ಸಹಕಾರಿಯಾಗಿದೆ. ಇದುವರೆಗೆ ಬಂದಂತಹ ಹಣದಿಂದ ಹೊಲಿಗೆ ಯಂತ್ರ ಖರೀದಿಸಿ ಬಟ್ಟೆ ಹೊಲೆದು ಜೀವನ ನಿರ್ವಹಿಸಲು ಅನುಕೂಲವಾಗಿದೆ. ಇದರ ಜೊತೆಗೆ ಮಕ್ಕಳ ಶಾಲಾ ಶುಲ್ಕ ಕಟ್ಟಲು, ಪಠ್ಯ ಸಾಮಾಗ್ರಿ ಖರೀದಿಗೆ ಉಪಯುಕ್ತವಾಗಿದೆ ಎಂದು ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿ ಗ್ರಾಮದ ಅನಿತಾ ತಮ್ಮ ಅನಿಸಿಕೆ ಹಂಚಿಕೊಂಡರು. ಗುಂಡೇರಿ ಗ್ರಾಮದ ಮಾಲಾ ಎಂಬ ಫಲಾನುಭವಿ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.**

### ಗ್ಯಾರಂಟಿ ಅಂಕಿಸಂಖ್ಯೆ

**ಗೃಹಲಕ್ಷ್ಮಿ ಯೋಜನೆಯಡಿ ತಾಲ್ಲೂಕಿನಲ್ಲಿ 51,393 ಫಲಾನುಭವಿಗಳು ನೋಂದಣಿಯಾಗಿದ್ದು 24 ಕಂತುಗಳ ಹಣ ಬಿಡುಗಡೆ ಆಗಿದೆ. ಇದುವರೆಗೂ 211.22 ಕೋಟಿ ರೂ. ಗೃಹಲಕ್ಷ್ಮಿ ಹಣ ಪಾವತಿಯಾಗಿದ್ದು, 98.14% ಪ್ರಗತಿ ಸಾಧಿಸಲಾಗಿದೆ. ಈ ಯೋಜನೆಯಲ್ಲಿ ನೋಂದಣಿಯಾದವರಲ್ಲಿ 373 ಮಂದಿ ಮೃತಪಟ್ಟಿದ್ದಾರೆ. ಗೃಹಜ್ಯೋತಿ ಯೋಜನೆಯಡಿ, 45,897 ಕುಟುಂಬಗಳು ಉಚಿತ ವಿದ್ಯುತ್ ಬಳಕೆ ಮಾಡಿದ್ದು ಇದಕ್ಕೆ ತಗುಲಿರುವ 19 ಕೋಟಿ ರೂ. ವೆಚ್ಚದ ಹಣವನ್ನು ಬೆಸ್ಕಾಂಗೆ ಸರ್ಕಾರ ಪಾವತಿಸಿದೆ. ಗೃಹಜ್ಯೋತಿ ಯೋಜನೆಯಡಿ 94.403% ಪ್ರಗತಿ ಸಾಧಿಸಲಾಗಿದೆ. ತಾಲ್ಲೂಕಿನಲ್ಲಿ 33 ಸಾವಿರ ಕೃಷಿ ಪಂಪ್ ಸೆಟ್‌ಗಳಿದ್ದು ಇವುಗಳಿಗೂ ಉಚಿತ ವಿದ್ಯುತ್ ನೀಡುವ ಮೂಲಕ ರೈತರಿಗೂ ನೆರವಾಗಿದೆ.**

# ಮಾಜಿ ಸೈನಿಕರಿಂದ ಕೃಷಿ ಸೇವಾ ಕೇಂದ್ರ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಹಾವೇರಿ

ಮಹಾರಾಷ್ಟ್ರದಲ್ಲಿ 528 ಎಕರೆ ಜಮೀನಿನಲ್ಲಿ ಕೃಷಿ ಮಾಡಿ ಯಶಸ್ವಿಯಾಗಿರುವ ಮಾಜಿ ಸೈನಿಕರು, ಇದೀಗ ಹಾವೇರಿಯಲ್ಲಿ ರೈತರಿಗೆ ಕೃಷಿ ಸಲಹೆಗಳನ್ನು ನೀಡಲು ಹೊಸ ಕೃಷಿ ಸೇವಾ ಕೇಂದ್ರ ಆರಂಭಿಸುತ್ತಿದ್ದಾರೆ. ಸೇವಾ ಕೇಂದ್ರವನ್ನು ರೈತರ ಬಳಕೆಗೆ ಮುಕ್ತಗೊಳಿಸಲಾಯಿತು. ಸೇನೆಯಿಂದ ನಿವೃತ್ತರಾದ ಮಾಜಿ ಸೈನಿಕರೇ ಸೇರಿಕೊಂಡು ವೆಂಕಟೇಶ್ವರ ಕೋ ಆಪರೇಟಿವ್ ಪವರ್ ಆ್ಯಂಡ್‌ಅಗ್ರಿ ಪ್ರೊಸೆಸಿಂಗ್ ಕಂಪನಿ ಸ್ಥಾಪಿಸಿದ್ದಾರೆ. ಇದರಡಿ ಕೃಷಿ ಕೆಲಸ, ರೈತರ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದಾರೆ. ಹಾವೇರಿಯ ಬಸವೇಶ್ವರನಗರದಲ್ಲಿ ಕಚೇರಿ ತೆರೆಯಲಾಗಿದ್ದು, 9 ಸಾವಿರ ರೈತರು ಈಗಾಗಲೇ ಸದಸ್ಯತ್ವ ನೋಂದಣಿ ಮಾಡಿಸಿದ್ದಾರೆ. ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಬಸವರಾಜ ಬೊಮ್ಮಾಯಿ, ಪ್ರಧಾನಿ ನರೇಂದ್ರ ಮೋದಿ ಅವರು ನೈಸರ್ಗಿಕ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದಾರೆ. ರೈತರು ತಮ್ಮ ಪೂರ್ವಜರ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಹೆಚ್ಚಿನ ಉತ್ಪಾದನೆ ಮಾಡಬೇಕು. ಮಾಜಿ ಸೈನಿಕರು ಕಟ್ಟಿರುವ ಈ ಕಂಪನಿ, ರೈತರನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಸೈನಿಕರ ಮೇಲೆ ವಿಶ್ವಾಸ ಹೆಚ್ಚಿರುತ್ತದೆ. ಅದನ್ನು ಕಂಪನಿ ಉಳಿಸಿಕೊಳ್ಳಬೇಕು ಎಂದರು.

2 ಲಕ್ಷ ಸದಸ್ಯರು ಮಹಾರಾಷ್ಟ್ರದ ನಾಸಿಕ್‌ನಲ್ಲಿ ಆರಂಭವಾದ ಕಂಪನಿ, ಇಂದು ದೇಶದಾದ್ಯಂತ ಕಚೇರಿಗಳನ್ನು ಹೊಂದಿದೆ. ಕಂಪನಿಯಲ್ಲಿ 2 ಲಕ್ಷ ರೈತರು ಸದಸ್ಯತ್ವ ಪಡೆದಿದ್ದಾರೆ. ಸಬ್ಸಿಡಿ ದರದಲ್ಲಿ ಬೀಜ, ಔಷಧಿ, ಗೊಬ್ಬರ ಪಡೆಯುತ್ತಿದ್ದಾರೆ ಜೊತೆಗೆ, ಕೀಟನಾಶಕ ಖರೀದಿ ಮೇಲೆಯೇ ವಿಮೆ ಸೌಲಭ್ಯ ನೀಡಲಾಗುತ್ತಿದೆ.

ನಮ್ಮ ಕಂಪನಿಯು ಸರ್ಕಾರ ಹಾಗೂ ಖಾಸಗಿಯವರ ಸಹಕಾರವಿಲ್ಲದೇ, ಸದಸ್ಯರ ಮೂಲಕ ಸ್ವಾವಲಂಬಿಯಾಗಿ ಬೆಳೆಯುತ್ತಿದೆ. ರೈತರ ಪ್ರತಿಯೊಂದು ಸಮಸ್ಯೆಗೂ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಮೆಕ್ಕೆಜೋಳವನ್ನು ಎಂಎಸ್‌ಪಿ ದರದಲ್ಲಿ ಖರೀದಿಸಿ, ಇಥೆನಾಲ್ ಮಾಡುವ ಕಾರ್ಖಾನೆಯನ್ನು ಸೊಲ್ಲಾಪುರದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಮಾಜಿ ಸೈನಿಕರು ತಿಳಿಸಿದರು.

# ಮಹಿಳೆ ಮೇಲೆ ಅತ್ಯಾಚಾರ; ಆರೋಪ

• ಉದಯವಾಹಿನಿ, ಬಾಗಲಕೋಟೆ

ಜಿಲ್ಲೆಯ ಕೂಡಲಸಂಗಮ ಕ್ರಾಸ್ ಬಳಿಯ ಕಬ್ಬಿನ ಹೊಲದಲ್ಲಿ ಮಹಿಳೆ ಮೇಲೆ ಅತ್ಯಾಚಾರ ಮಾಡಲಾಗಿದೆ ಎಂದು ಹುನಗುಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಖಜಗಲ್ ಸಮೀಪದ ಬಳಿ ಕಬ್ಬಿನ ಗದ್ದೆಯಲ್ಲಿ ಅತ್ಯಾಚಾರ ನಡೆದಿದೆ ಎನ್ನಲಾಗಿದ್ದು, ಸಾರ್ವಜನಿಕರು ಮಹಿಳೆಯನ್ನು ನೋಡಿ ಆಂಬ್ಯುಲೆನ್ಸ್‌ಗೆ ಕರೆ ಮಾಡಿದ್ದಾರೆ. ಹುನಗುಂದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರು ಘಟನೆಯ ನಡೆದ ರಸ್ತೆ, ಗ್ರಾಮಗಳಲ್ಲಿ ಬರುವ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ಮಾಡಿದ್ದಾರೆ. ಅವರಲ್ಲಿ ಅನುಮಾನ ಬಂದ ಕೆಲವರನ್ನು ಕರೆದು ವಿಚಾರಣೆ ಮಾಡಿದ್ದಾರೆ.

# ಗ್ಯಾರಂಟಿ ಯೋಜನೆಯಿಂದ ಸರ್ಕಾರದ ಖಜಾನೆ ಖಾಲಿ: ಶಾಸಕ ಸಿ.ಸಿ. ಪಾಟೀಲ

• ಉದಯವಾಹಿನಿ, ರೋಣ

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ನೀಡಿದ ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಖಜಾನ ಖಾಲಿಯಾಗಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ತರುವುದು ದುಸ್ತರವಾಗಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು. ತಾಲ್ಲೂಕಿನ ಕೌಜಗೇರಿ ಗ್ರಾಮದಲ್ಲಿ ನಿರ್ಮಿಸಲಾದ ನೂತನ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟನೆ, ವಿವಿಧ ಕಾಮಗಾರಿ ಭೂಲಿಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಿಜೆಪಿ ಗದಗ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ ಮಾತನಾಡಿ, ಕೇಂದ್ರ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿದ್ದು, ವೈದ್ಯಕೀಯ ಕಾಲೇಜುಗಳನ್ನು ಹೆಚ್ಚು ಅಭಿವೃದ್ಧಿಗೊಳಿಸಿದೆ ಎಂದರು.

# ಕರ್ನಾಟಕ ವಿಶ್ವವಿದ್ಯಾಲಯ: ಸ್ನಾತಕ ಪದವಿ ಪರೀಕ್ಷೆ ಮುಂದೂಡಿಕೆ

• ಉದಯವಾಹಿನಿ, ಧಾರವಾಡ

ಜ.15ರಂದು ನಡೆಯಬೇಕಿದ್ದ ಸ್ನಾತಕ ಪದವಿ ಪರೀಕ್ಷೆಗಳನ್ನು (1, 3, 5 ಮತ್ತು 7ನೇ ಸೆಮಿಸ್ಟರ್) ಕರ್ನಾಟಕ ವಿಶ್ವವಿದ್ಯಾಲಯ ಮುಂದೂಡಿದೆ. 15ರಂದು ಮಕರ ಸಂಕ್ರಾಂತಿ ಇರುವುದರಿಂದ ಪರೀಕ್ಷೆ ಮುಂದೂಡಲಾಗಿದೆ. ವಿ.ವಿ ವ್ಯಾಪ್ತಿಯ ಧಾರವಾಡ, ಗದಗ, ಉತ್ತರ ಕನ್ನಡ, ಹಾವೇರಿ ಜಿಲ್ಲೆಗಳಿಗೆ ಇದು ಅನ್ವಯವಾಗಲಿದೆ. ತಿದ್ದುಪಡಿ ವೇಳಾಪಟ್ಟಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ವೈ.ಮಟ್ಟಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ಸೌಲಭ್ಯ ಕೇಳಿ ಪಡೆಯಿರಿ

• ಉದಯವಾಹಿನಿ, ಹುಬ್ಬಳ್ಳಿ

ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಜನಪ್ರತಿನಿಧಿಗಳಿಂದ ಕೇಳಿಪಡೆಯಬೇಕು. ಕೇವಲ ಜೈಕಾರ ಹಾಕಿದರೆ ಸಮಾಜದ ಉದ್ಧಾರ ಸಾಧ್ಯವಿಲ್ಲ ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು. ನಗರದ 63ನೇ ವಾರ್ಡ್‌ನ ಬಾನಿ ಓಣಿಯಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಂದಾಜು 3 ಕೋಟಿ ಅನುದಾನದ ವಿವಿಧ ಕಾಮಗಾರಿಗಳಿಗೆ ಈಚೆಗೆ ಚಾಲನೆ ನೀಡಿ ಮಾತನಾಡಿದರು. ಸಮಾಜದ ಏಳ್ಗೆಗೆ ಎಲ್ಲರೂ ಒಗ್ಗಟ್ಟಾಗಿ ಚಿಂತನೆ ಮಾಡಬೇಕು. ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯವಿದ್ದು, ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು. ಸಮುದಾಯ ಭವನ, ಸಾರ್ವಜನಿಕ ಶೌಚಾಲಯ, ಒಳಚರಂಡಿ, ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಅವರು, ಹೆಚ್ಚಿನ ಅನುದಾನ ಅಗತ್ಯವಿದ್ದರೆ ಮಂಡಳಿಯಿಂದ ನೀಡಲಾಗುವುದು ಎಂದು ಭರವಸೆ ನೀಡಿದರು.

# ಸಿಕ್ಕಿದ್ದು ನಿಧಿಯಲ್ಲ, ಮುತ್ತಜ್ಜರಿಟ್ಟಿದ್ದ ಚಿನ್ನ

• ಉದಯವಾಹಿನಿ, ಗದಗ



ಉದಯವಾಹಿನಿ ಚಿತ್ರ


ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ಗಂಗವ್ವ ಬಸವರಾಜ ರಿತ್ತಿ ಅವರು ಮನೆ ಕಟ್ಟಿಸಲು ಅಡಿಪಾಯ ತೆಗೆಯುವಾಗ ಸಿಕ್ಕಿದ್ದು ನಿಧಿಯಲ್ಲ. ಅವು ಹಿಂದಿನ ಕಾಲದಲ್ಲಿ ಜನರು ಸುರಕ್ಷತೆ ದೃಷ್ಟಿಯಿಂದ ಅಡುಗೆ ಮನೆಯಲ್ಲಿ ಹುಗಿದು ಇಟ್ಟಿದ್ದ ಆಭರಣಗಳಾಗಿವೆ ಎಂದು ಪುರಾತತ್ವ ಇಲಾಖೆ ಅಧಿಕಾರಿಗಳು ತಿಳಿಸಿದರು. ಇಲಾಖೆಯ ಧಾರವಾಡ ವಲಯದ ಅಧೀಕ್ಷಕ ರಮೇಶ್ ಮೂಲಿಮನಿ ಮಾಧ್ಯಮ ಗಳಿಗೆ ಪ್ರತಿಕ್ರಿಯಿಸಿ, ಚಿನ್ನದ ನಾಣ್ಯಗಳು ಸಿಕ್ಕಿದ್ದರೆ ಇತಿಹಾಸ ತಿಳಿಯಲು ಆಧಾರ ವಾಗುತ್ತಿತ್ತು. ಆದರೆ, ಸಿಕ್ಕ ತಾಮ್ರದ ತಂಬಿಗೆಯಲ್ಲಿದ್ದ ಚಿನ್ನಾಭರಣಗಳು ಮುರಿದಿವೆ. ಹಿಂದೆ ಅಜ್ಜ, ಮುತ್ತಜ್ಜರು ಸುರಕ್ಷತೆ ದೃಷ್ಟಿಯಿಂದ ಒಲೆ ಬಳಿ ಅಭರಣಗಳನ್ನು ಹುಗಿದು ಇಡುತ್ತಿದ್ದರು. ಇವು ಅಂತಹದ್ದೇ ಆಭರಣಗಳೇ ಹೊರತು ನಿಧಿ ಅಲ್ಲ ಎಂದರು.

**ಆಭರಣ ಸಿಕ್ಕ ಜಾಗ ನಿರ್ಬಂಧಿತ ಪ್ರದೇಶ:** ಅಡಿಪಾಯ ತೆಗೆಯುವ ವೇಳೆ ಸಿಕ್ಕ ಚಿನ್ನಾಭರಣಗಳು ಈಗ ಜಿಲ್ಲಾಡಳಿತದ ಸುಪರ್ದಿಯಲ್ಲಿದೆ. ಆ ಜಾಗದಲ್ಲಿ ಇನ್ನೂ ಹೆಚ್ಚಿನದ್ದು ಏನಾದರೂ ಸಿಗಬಹುದು ಎಂದು ಜಿಲ್ಲಾಡಳಿತ ಜನರ ಪ್ರವೇಶಕ್ಕೆ ನಿರ್ಬಂಧ ಹೇರಿದೆ.

ಪ್ರಾಮಾಣಿಕವಾಗಿ ಆಭರಣ ಹಿಂದಿರುಗಿಸಿದ್ದಕ್ಕೆ ಜಿಲ್ಲಾಡಳಿತ ಶಾಲು ಹೊದಿಸಿ, ಹಾರ ಹಾಕಿ ಸನ್ಮಾನ ಮಾಡಿದೆ. ನಮಗೆ ಚಿನ್ನ ಬೇಡ. ಸರ್ಕಾರ ಮನೆ ಕಟ್ಟಿಸಿಕೊಡತಗ. ಅದು ಆಗದಿದ್ದರೆ ನಿಧಿ ಅಲ್ಲ ಎಂದು ಹೇಳುತ್ತಿರುವ ಅಧಿಕಾರಿಗಳ ಮಾತಿನಂತೆ ಅಜ್ಜ, ಮುತ್ತಜ್ಜರ ಆಭರಣವನ್ನು ಕೊಡಲಿ ಎಂದು ಕುಟುಂಬದವರು ಕೋರಿದ್ದಾರೆ. ಲಕ್ಕುಂಡಿಯಲ್ಲಿ ಸಿಕ್ಕ ಚಿನ್ನಾಭರಣಗಳ ಮಾಹಿತಿಯನ್ನು ಜಿಲ್ಲಾಡಳಿತ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರಿಗೆ ನೀಡಿತ್ತು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗದಗ ಜಿಲ್ಲಾ ಎಸ್‌ಪಿ ರೋಹನ್ ಜಗದೀಶ್ ಅವರಿಂದ ಮಾಹಿತಿ ಪಡೆದುಕೊಂಡು, ಸಿಕ್ಕಿರುವ ಆಭರಣಗಳನ್ನು ತೆಗೆದಿರಿಸಿ, ಜಿಲ್ಲಾ ಉಸ್ತುವಾರಿ ಸಚಿವರು ಬಂದ ಮೇಲೆ ತೋರಿಸಿ' ಎಂದು ಸೂಚನೆ ನೀಡಿದ್ದರು.

# ಹಿಂದೂ ಸಮಾವೇಶಗಳಿಗೆ ಭಾರಿ ಜನಸ್ತೋಮ

• ಉದಯವಾಹಿನಿ, ಹೊಸಪೇಟೆ



ಉದಯವಾಹಿನಿ ಚಿತ್ರ

ನಗರದಲ್ಲಿ ಹಿಂದೂ ಸಮಾಜದ ಏಕತೆ ಮತ್ತು ಸಂಘಟಣೆಗಾಗಿ ಉಪನಗರಗಳ ನಾಲ್ಕೈದು ವಾರ್ಡ್‌ಗಳನ್ನು ಸೇರಿಸಿಕೊಂಡು ಹಿಂದೂ ಸಮ್ಮೇಳನ ನಡೆಯುತ್ತಿದ್ದು, ಬಸವೇಶ್ವರ ಬಡಾವಣೆ ಹಾಗೂ ಕೊಟ್ಟೂರು ಸ್ವಾಮಿ ಮಠದ ಆವರಣದಲ್ಲಿ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರು. ಕೊಟ್ಟೂರು ಸ್ವಾಮಿ ಮಠದ ಆವರಣದಲ್ಲಿ ಗೋವಿಗೆ ಆಹಾರ ನೀಡಿ, ಪೂಜೆ ಸಲ್ಲಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

ಮುಖ್ಯ ವಕ್ತಾರ ಸೋಮಶೇಖರ್ ಮಾತನಾಡಿ, ಹಿಂದೂ ಧರ್ಮವಲ್ಲ, ಅದು ನಮ್ಮ ಜೀವನ ಪದ್ಧತಿ. ಹಿಂದೂ ಎಂದೊಡನೆ ಇತ್ತೀಚಿಗ ಕೋಮು ಸಂಘಟನೆ ಎಂದು ಬಿಂಬಿಸಲಾಗುತ್ತಿದೆ, ಇದು ಆತಂಕಕಾರಿ ಬೆಳವಣಿಗೆ. ಹಿಂದೂ ರಾಷ್ಟ್ರಕ್ಕೆ, ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗುತ್ತದೆ, ಈ ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಲ್ಲಲು ಹಿಂದೂಗಳ ಸಂಘಟನೆ ಒಂದೇ ದಾರಿಯಾಗಿದೆ ಎಂದರು. ಹಿಂದೂ ಹೆಸರಿನಿಂದಲೇ ಗುರುತಿಸಿಕೊಳ್ಳಿ: ಬಸವೇಶ್ವರ ಬಡಾವಣೆಯಲ್ಲಿ ನಡೆದ ಹಿಂದೂ ಸಮ್ಮೇಳನದಲ್ಲಿ ಮಾತನಾಡಿದ ಹಗರಿಬೊಮ್ಮನಹಳ್ಳಿ ರಾಷ್ಟ್ರೋತ್ಥಾನ ಕೇಂದ್ರದ ಕಾರ್ಯದರ್ಶಿ ಬಸವನಗೌಡ್ರು, ಹಿಮಾಲಯದ ತಪ್ಪಲು ಮತ್ತು ದಕ್ಷಿಣಕ್ಕೆ ಜನಿಸಿದ ಎಲ್ಲರೂ ಹಿಂದೂಗಳೇ. ಹಿಂದುತ್ವ ಎಂಬುದೇ ನಮ್ಮ ಗುರುತು. ಹೆಸರು, ಜಾತಿ, ಕುಲ, ಗೋತ್ರದ ಮೂಲಕ ಪರಿಚಯಿಸಿಕೊಳ್ಳುವ ಬದಲಿಗೆ ಹಿಂದೂ ಹೆಸರಿನಿಂದ ಗುರುತಿಸುವ ಪರಿ ಆರಂಭವಾಗಬೇಕು ಎಂದರು. ಮತಾಂತರದ ಹಿಂದೆ ರಾಷ್ಟ್ರಾಂತರದ ಹುನ್ನಾರ ಇರುವುದನ್ನು ನಾವೆಲ್ಲ ತಿಳಿಯಬೇಕು. ಕೇರಳ, ಅಸ್ಸಾಂ, ಕಾಶ್ಮೀರದಲ್ಲಿ ನಡೆಯುತ್ತಿರುವ ದೇಶ ವಿರೋಧಿ ಬೆಳವಣಿಗೆಗಳು ಅಪಾಯಕಾರಿ. ಈಗಲಾದರೂ ನಾವು ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ಪೀಳಿಗೆ ಭಾರತವನ್ನು ನೋಡಲೂ ಅಸಾಧ್ಯ. ನಾವು 21ನೇ ಶತಮಾನದಲ್ಲಿದ್ದರೂ ಇಂದಿಗೂ ನಮ್ಮವರಿಗೆ ಕೆಲವೆಡೆ ದೇವಸ್ಥಾನಗಳಿಗೆ ಪ್ರವೇಶ ಅವಕಾಶ ಇಲ್ಲ. ಅಸ್ಪೃಶ್ಯತೆಯಿಂದ ನಮ್ಮವರೇ ದೂರವಾಗುತ್ತಿದ್ದಾರೆ. ಜಾತಿ, ಮತ, ಪಂತಗಳನ್ನು ಮೀರಿ ಎಲ್ಲರನ್ನೂ ಒಪ್ಪಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

**ಹಿಂದೂ ರಾಷ್ಟ್ರ ಆಗಲಿ:** ಮಾತಂಗ ಪರ್ವತದ ಪೂರ್ಣಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಭಾರತ ಹಿಂದೂ ರಾಷ್ಟ್ರ ಆಗಬೇಕು ಎಂಬುದು ಎಲ್ಲಾ ಸಂತರ ಕನಸು. ಆ ನಿಟ್ಟಿನಲ್ಲಿ ನಾವು ಬದುಕು ರೂಪಿಸಿಕೊಳ್ಳಬೇಕು ಎಂದರು.

## ಅಗತ್ಯ ಸಿದ್ಧತೆ ಕಾರ್ಯಕೈಗೊಳ್ಳಲು ಡಿಸಿ ಟಿ.ವೆಂಕಟೇಶ್ ಸೂಚನೆ, ರಾಷ್ಟ್ರೀಯ ಹಬ್ಬಗಳ ಬಗ್ಗೆ ಅಧಿಕಾರಿಗಳು ತಾತ್ಸಾರ ತೋರುವುದು ಸರಿಯಲ್ಲ

# ಸಂಭ್ರಮ, ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆ

• ಉದಯವಾಹಿನಿ, ಚಿತ್ರದುರ್ಗ



ಉದಯವಾಹಿನಿ ಚಿತ್ರ

**ಭಾರತ ಸಂವಿಧಾನ ಆಚರಣೆಯ ಪ್ರತೀಕ**

ಬರುವ ಜನವರಿ 26 ರಂದು ಗಣರಾಜ್ಯೋತ್ಸವವನ್ನು ಜಿಲ್ಲಾ ಕೇಂದ್ರದಲ್ಲಿ ಸಂಭ್ರಮ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಈ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತದ ಗಣರಾಜ್ಯೋತ್ಸವ ದಿನಾಚರಣೆಯು ದೇಶಪ್ರೇಮ, ದೇಶಭಕ್ತಿ, ಭಾರತ ಸಂವಿಧಾನ ಆಚರಣೆಯ ಪ್ರತೀಕವಾಗಿದ್ದು, ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ವಿವಿಧ ಇಲಾಖೆಗಳು ಸಮನ್ವಯತೆಯಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು.

ಭಾರತ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಜನವರಿ 26ರಂದು ಬೆಳಿಗ್ಗೆ 9ಕ್ಕೆ ಚಿತ್ರದುರ್ಗ ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ಆಚರಿಸಲಾಗುವುದು ಜಿಲ್ಲಾ ಉಸ್ತುವಾರಿ ಸಚಿವರು ಗಣರಾಜ್ಯೋತ್ಸವ ದಿನದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಈ ಹಿನ್ನಲೆಯಲ್ಲಿ ಶಿಷ್ಟಾಚಾರದ ಪ್ರಕಾರ ಸಚಿವರು, ಸಂಸದರು, ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರು ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳ ಹೆಸರನ್ನು ಗಣರಾಜೋತ್ಸವದ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು. ಅಧಿಕಾರಿಗಳು ಖುದ್ದಾಗಿ ತೆರಳಿ ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.

ನಗರಸಭೆ ವತಿಯಿಂದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದ ಆವರಣ ಸ್ವಚ್ಛಗೊಳಿಸಿ, ಸಿಂಗರಿಸಬೇಕು.

ಕುಡಿಯುವ ನೀರಿನ ಟ್ಯಾಂಕರ್ ಬದಲು ಕಾರ್ಯಕ್ರಮ ಸ್ಥಳದಲ್ಲಿ ಹತ್ತಾರು ಕಡೆ ಶುದ್ಧ ಕುಡಿಯುವ ನೀರಿನ ಕ್ಯಾನ್‌ಗಳನ್ನು, ಲೋಟಗಳನ್ನು ಇರಿಸಬೇಕು. ಗಣರಾಜ್ಯೋತ್ಸವದ ಮುನ್ನಾ ದಿನದಂದೇ ನಗರದ ಪ್ರಮುಖ ವೃತ್ತಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಬೇಕು.

ಲೋಕೋಪಯೋಗಿ, ನಿರ್ಮಿತಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು ವೇದಿಕೆ ಕಾರ್ಯಕ್ರಮದ ಶಾಮಿಯಾನ, ಉತ್ತಮ ಧ್ವನಿವರ್ಧಕ , ಗಣ್ಯರು ಕುಳಿತುಕೊಳ್ಳುವುದಕ್ಕೆ ಬ್ಯಾರಿಕೇಡ್ ವ್ಯವಸ್ಥೆ ಮಾಡಬೇಕು. ತೋಟಗಾರಿಕೆ ಇಲಾಖೆಯಿಂದ ಹೆಚ್ಚಿನ ಆಕರ್ಷಣೆ ಉಳ್ಳ ಹೂವಿನ ಕುಂಡಗಳನ್ನು ಪಡೆದು ಸಿಂಗರಿಸಬೇಕು.

ಸ್ವಾತಂತ್ರ್ಯ ಹೋರಾಟಗಾರರು, ಗಣ್ಯರು, ಅಧಿಕಾರಿಗಳು, ಮಾಧ್ಯಮದವರು ಆಸೀನರಾಗಲು ಪ್ರತ್ಯೇಕವಾಗಿ ಆಸನದ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು. ಪೊಲೀಸ್, ಅಬಕಾರಿ, ಅರಣ್ಯ, ಗೃಹ ರಕ್ಷಕ ದಳ, ಎನ್.ಸಿ.ಸಿ., ಎನ್.ಎಸ್.ಎಸ್, ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ದಳಗಳು 3 ದಿನಗಳ ಪರೇಡ್ ತಾಲೀಮು ನಡೆಸಬೇಕು. ತಾಲೀಮು ನಡೆಸುವ ದಿನಗಳಂದು ವಿದ್ಯಾರ್ಥಿಗಳು ಹಾಗೂ ಪೊಲೀಸ್ ಸಿಬ್ಬಂದಿಗೆ ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳಿಂದ ಉಪಹಾರದ ವ್ಯವಸ್ಥೆಯನ್ನು ಮಾಡಬೇಕು. ಅತ್ಯುತ್ತಮ ಪ್ರದರ್ಶನ ನೀಡಿದ ಮೂರು ಪರೇಡ್ ತಂಡಗಳನ್ನು ಆಯ್ಕೆ ಮಾಡಲು ಸಮಿತಿ ರಚಿಸಬೇಕು. ಆಯ್ಕೆಯಾದ ಮೂರು ಪರೇಡ್ ತಂಡಗಳಿಗೆ ಗಣರಾಜ್ಯೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು ಎಂದರು.

### ಗೈರಾದ ಅಧಿಕಾರಿಗಳಿಗೆ ನೋಟೀಸ್

**ಗಣರಾಜ್ಯೋತ್ಸವದ ಪೂರ್ವಭಾವಿ ಸಭೆಗೆ ಗೈರಾದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನಿರ್ದೇಶನ ನೀಡಿದರು. ರಾಷ್ಟ್ರೀಯ ಹಬ್ಬಗಳ ಬಗ್ಗೆ ಅಧಿಕಾರಿಗಳು ತಾತ್ಸಾರ ತೋರುವುದು ಸರಿಯಲ್ಲ. ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಎಲ್ಲಾ ಅಧಿಕಾರಿ, ಸಿಬ್ಬಂದಿಗಳು ಕಡ್ಡಾಯವಾಗಿ ಮತ್ತು ಸ್ವಯಂಪ್ರೇರಿತವಾಗಿ ಭಾಗವಹಿಸಬೇಕು ಎಂದರು.**

### ಮಹೋನ್ನತ ಸೇವೆ ಸಲ್ಲಿಸಿದ ಸರ್ಕಾರಿ ಅಧಿಕಾರಿಗಳಿಗೆ ಸನ್ಮಾನ

**ನಿತ್ಯದ ಕಚೇರಿ ಕೆಲಸದ ಹೊರತಾಗಿ ಮಹೋನ್ನತ ಹಾಗೂ ವಿಶೇಷ ಸೇವೆ ಸಲ್ಲಿಸಿದ ಸರ್ಕಾರಿ ಅಧಿಕಾರಿ, ಸಿಬ್ಬಂದಿಗಳನ್ನು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಇದಕ್ಕಾಗಿ ಸಂಬಂಧಪಟ್ಟ ಇಲಾಖೆಗಳು ಸಮರ್ಥನೀಯ ಅಂಶಗಳೊಂದಿಗೆ ಮಾಹಿತಿ ನೀಡಬೇಕು. ಉಪವಿಭಾಗಾಧಿಕಾರಿ ಹಾಗೂ ಡಿವೈಎಸ್‌ಪಿ ನೇತೃತ್ವದ ಆಯ್ಕೆ ಸಮಿತಿ ಸಾಧಕರನ್ನು ಗುರುತಿಸಲಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದರು.**

# ಭಾರತಕ್ಕಿಂತ ಅತ್ಯಗತ್ಯ ದೇಶ ಭೂಮಿ ಮೇಲೆ ಮತ್ತೊಂದಿಲ್ಲ

## ಅಮೆರಿಕಕ್ಕೆ ಭಾರತಕ್ಕಿಂತ ಪ್ರಮುಖ ರಾಷ್ಟ್ರ ಬೇರೊಂದಿಲ್ಲ ಎಂದ ರಾಯಭಾರಿ ಸೆರ್ಗಿಯೊ ಗೋರ್

**ವಾಷಿಂಗ್ಟನ್:** ಭಾರತ-ಅಮೆರಿಕ ಸಂಬಂಧದ ಮಹತ್ವ ಅರಿತಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ, ಭಾರತದೊಂದಿಗೆ ಸಂಬಂಧ ಸುಧಾರಣೆಗೆ ಮುಂದಡಿ ಇಟ್ಟಿದೆ. ಸುಂಕ ಸಮರ, ವ್ಯಾಪಾರ ಒಪ್ಪಂದ ವಿಳಂಬ ಮತ್ತು ವೀಸಾ ಸಮರಗಳಿಂದಾಗಿ ಭಾರತವನ್ನು ದೂರ ಮಾಡಿ ಕೊಂಡಿರುವ ಟ್ರಂಪ್ ಆಡಳಿತ, ಅದಕ್ಕಾಗಿ ಪಶ್ಚಾತ್ತಾಪವನ್ನೂ ಪಡುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತದೊಂದಿಗೆ ಸಂಬಂಧ ಸುಧಾರಣೆಯ ಪ್ರಯತ್ನದ ಭಾಗವಾಗಿ, ಮುಂದಿನ ವರ್ಷ ಅಂದರೆ 2027ರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತಕ್ಕೆ ಭೇಟಿ ನೀಡಲಿರುವುದು ಬಹುತೇಕ ಖಚಿತವಾಗಿದೆ. ಈ ಕುರಿತು ಮಾತನಾಡಿರುವ ಭಾರತಕ್ಕೆ ಅಮೆರಿಕದ ನಿಯೋಜಿತ ರಾಯಭಾರಿ ಸೆರ್ಗಿಯೊ ಗೋರ್, ಅಮೆರಿಕ ಅಧ್ಯಕ್ಷರ ಭಾರತ ಭೇಟಿಯ ಬಗ್ಗೆ ಮಹತ್ವದ ಅಪ್ಡೇಟ್ ನೀಡಿದ್ದಾರೆ.

ಅಮೆರಿಕಕ್ಕೆ ಭಾರತದಷ್ಟು ಅತ್ಯಗತ್ಯವಾದ ಬೇರೆ ಯಾವುದೇ ರಾಷ್ಟ್ರವಿಲ್ಲ. ಹೀಗಾಗಿ ವಾಷಿಂಗ್ಟನ್ ಮತ್ತು ನವದೆಹಲಿ ನಡುವೆ ಮಂಗಳವಾರ ಮುಂದಿನ ಸುತ್ತಿನ ವ್ಯಾಪಾರ ಒಪ್ಪಂದ ಮಾತು ಕತೆಗಳು ಪುನರಾರಂಭವಾಗಲಿವೆ. ಅದೇ ರೀತಿ 2027ರಲ್ಲಿ ಅಧ್ಯಕ್ಷ ಟ್ರಂಪ್ ಭಾರತ ಪ್ರವಾಸ ಕೈಗೊಳ್ಳುವ ಸಾಧ್ಯತೆ ದಟ್ಟವಾಗಿದೆ ಎಂದು ಸೆರ್ಗಿಯೊ ಗೋರ್ ಹೇಳಿದ್ದಾರೆ.

**ಟ್ರಂಪ್-ಮೋದಿ ಗೆಳೆಯರು:** ದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಯಲ್ಲಿ ಮಾತನಾಡಿದ ಸೆರ್ಗಿಯೊ ಗೋರ್, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗಿನ ಟ್ರಂಪ್ ನಡುವಿನ ಸ್ನೇಹ ಸಂಬಂಧ ನಿಜವಾದದ್ದು ಎಂದು ಪ್ರತಿಪಾದಿಸಿದರು. ನಿಜವಾದ ಸ್ನೇಹಿತರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುತ್ತಾರೆ ಎಂದೂ ಗೋರ್ ಸೂಚ್ಯವಾಗಿ ಹೇಳಿದರು. ಯುನೈಟೆಡ್ ಸ್ಟೇಟ್ಸ್, ಭಾರತವು ಕೇವಲ ಹಂಚಿಕೆಯ ಹಿತಾಸಕ್ತಿಗಳಿಂದಲ್ಲ, ಬದಲಾಗಿ ಉನ್ನತ ಮಟ್ಟದಲ್ಲಿ ಆಧಾರವಾಗಿರುವ ಸಂಬಂಧದಿಂದ ಬದ್ಧವಾಗಿದೆ. ನಿಜವಾದ ಸ್ನೇಹಿತರು ಭಿನ್ನಾಭಿಪ್ರಾಯ ಹೊಂದಬಹುದು ಆದರೆ ಅಂತಿಮವಾಗಿ ತಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುತ್ತಾರೆ ಎಂದು ಭಾರತಕೆ ಅಮೆರಿಕ ರಾಯಭಾರಿ ಸೆರ್ಗಿಯೊ ಗೋರ್ ತಮ್ಮ ಆಗಮನ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.



> ಮುಂದಿನ ವರ್ಷ, ಎರಡು ವರ್ಷಗಳಲ್ಲಿ ನಮ್ಮ ಅಧ್ಯಕ್ಷರು ಭಾರತ ಪ್ರವಾಸ ಕೈಗೊಳ್ಳುವುದು ನಿಶ್ಚಿತ. ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಬೇಕು ಎಂಬ ನಮ್ಮ ಅಭಿಲಾಷೆಗೆ ತಕ್ಕಂತೆ., ಭಾರತ ಕೂಡ ಅಮೆರಿಕದೊಂದಿಗೆ ಉತ್ತಮ ರಾಜತಾಂತ್ರಿಕ ಮತ್ತು ವಾಣಿಜ್ಯ ಸಂಬಂಧಕ್ಕೆ ಪೂರಕ ವಾತಾವರಣವನ್ನು ರೂಪಿಸಲಿದೆ ಎಂಬ ಭರವಸೆ ಇದೆ. ಟ್ರಂಪ್-ಮೋದಿ ಗೆಳೆತನ ಈ ಗುರಿಯನ್ನು ಸಾಧಿಸಲಿದೆ.
>
> -ಸೆರ್ಗಿಯೊ ಗೋರ್

**ಪ್ಯಾಕ್ಸ್ ಸಿಲಿಕಾ ಅಲೈಯನ್ಸ್**

ಇನ್ನು ಭಾರತದೊಂದಿಗಿನ ಕಾರ್ಯತಂತ್ರದ ಸಂಬಂಧದ ಮಹತ್ವವನ್ನು ಒತ್ತಿ ಹೇಳಿದ ಸೆರ್ಗಿಯೊ ಗೋರ್, ಮುಂದಿನ ತಿಂಗಳು ಭಾರತವು ಪ್ಯಾಕ್ಸ್ ಸಿಲಿಕಾ ಅಲೈಯನ್ಸ್‌ನ ಪೂರ್ಣ ಸದಸ್ಯ ರಾಷ್ಟ್ರವಾಗಲಿದೆ ಎಂದು ಘೋಷಿಸಿದ್ದಾರೆ. ಪ್ಯಾಕ್ಸ್ ಸಿಲಿಕಾ ಅಲೈಯನ್ಸ್ ಸುರಕ್ಷಿತ, ಸ್ಥಿತಿಸ್ಥಾಪಕ ಮತ್ತು ನಾವೀನ್ಯತೆ ಚಾಲಿತ ಸಿಲಿಕಾನ್ ಪೂರೈಕೆ ಸರಪಳಿಯನ್ನು ನಿರ್ಮಿಸಲು, ಅಮೆರಿಕವು ತನ್ನ ನೇತೃತ್ವದಲ್ಲಿ ಆರಂಭಿಸಿರುವ ಜಾಗತಿಕ ಕಾರ್ಯತಂತ್ರದ ಉಪಕ್ರಮವಾಗಿದೆ. ಅಮೆರಿಕ ರಾಯಭಾರ ಕಚೇರಿಯಲ್ಲಿ ದಕ್ಷಿಣ ಮತ್ತು ಮಧ್ಯ ಏಷ್ಯಾದ ವಿಶೇಷ ರಾಯಭಾರಿಯೂ ಆಗಿರುವ ಸೆರ್ಗಿಯೊ ಗೋರ್, ಭಾರತಕ್ಕೆ ಅಮೆರಿಕದ ನೂತನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಅವರು ಭಾರತಕ್ಕೆ ನೇಮಕಗೊಂಡ ಅತ್ಯಂತ ಕಿರಿಯ ವಯಸ್ಸಿನ ಅಮೆರಿಕ ರಾಯಭಾರಿ ಎಂಬ ಹೆಗ್ಗಳಿಕೆಯನ್ನೂ ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

**ವ್ಯಾಪಾರ ಬಹಳ ಮುಖ್ಯ**

ನವದೆಹಲಿ ಮತ್ತು ವಾಷಿಂಗ್ಟನ್ ಸಂಬಂಧಕ್ಕೆ ವ್ಯಾಪಾರ ಬಹಳ ಮುಖ್ಯವಾದರೂ, ಎರಡೂ ರಾಷ್ಟ್ರಗಳು ಭದ್ರತೆ, ಭಯೋತ್ಪಾದನೆ ನಿಗ್ರಹ, ಇಂಧನ, ತಂತ್ರಜ್ಞಾನ, ಶಿಕ್ಷಣ ಮತ್ತು ಆರೋಗ್ಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ನಿಕಟವಾಗಿ ಕೆಲಸ ಮಾಡುತ್ತಿವೆ. ನಾನು ಅಧ್ಯಕ್ಷ ಟ್ರಂಪ್ ಅವರೊಂದಿಗೆ ಪ್ರಪಂಚದಾದ್ಯಂತ ಪ್ರಯಾಣಿಸಿದ್ದೇನೆ. ಪ್ರಧಾನಿ ಮೋದಿ ಅವರೊಂದಿಗಿನ ಅವರ ಸ್ನೇಹ ನಿಜವಾಗಿದೆ ಎಂದು ನಾನು ದೃಢೀಕರಿಸಬಲ್ಲೆ ಎಂದು ಸೆರ್ಗಿಯೊ ಗೋರ್ ಒತ್ತಿ ಹೇಳಿದರು.

**ಟ್ರಂಪ್ ಅವರ ಭಾರತ ಭೇಟಿ:** ನಮ್ಮ ಎರಡು ರಾಷ್ಟ್ರಗಳ ನಡುವಿನ ಪಾಲುದಾರಿಕೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವುದೇ, ಭಾರತಕ್ಕೆ ಅಮೆರಿಕದ ನೂತನ ರಾಯಭಾರಿಯಾಗಿ ನನ್ನನ್ನು ನೇಮಕ ಮಾಡಿರುವ ಅಸಲಿ ಉದ್ದೇಶ. ನಾನು ಆ ಕಾರ್ಯವನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡಲಿದ್ದೇನೆ. ಭಾರತದಲ್ಲಿ ಟ್ರಂಪ್ ಮತ್ತು ಪ್ರಧಾನಿ ಮೋದಿ ಅವರನ್ನು ಒಟ್ಟಿಗೆ ವೇದಿಕೆ ಮೇಲೆ ನೋಡಲು ನಾನೂ ಉತ್ಸುಕನಾಗಿದ್ದೇನೆ ಎಂದು ಸೆರ್ಗಿಯೊ ಗೋರ್ ನುಡಿದರು. ವಿಶ್ವದ ಅತ್ಯಂತ ಹಳೆಯ ಪ್ರಜಾಪ್ರಭುತ್ವ ದೇಶ ಮತ್ತು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶದ ನಡುವಿನ ಸಂಬಂಧ, ಈ ಭೂಮಿಯ ಮೇಲಿನ ಅತ್ಯಂತ ಪವಿತ್ರ, ಅಷ್ಟೇ ಪ್ರಮುಖ ರಾಜತಾಂತ್ರಿಕ ಅಗತ್ಯವಾಗಿದೆ. ನಾನು ಕೊನೆಯ ಬಾರಿ ಅಮೆರಿಕ ಅಧ್ಯಕ್ಷರೊಂದಿಗೆ ಭೋಜನ ಮಾಡಿದಾಗ, ಟ್ರಂಪ್ ಅವರು ತಮ್ಮ ಕೊನೆಯ ಭಾರತ ಭೇಟಿ, ಭಾರತದ ಮಹಾನ್ ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ತಮ್ಮ ಸ್ನೇಹ ಸಂಬಂಧದ ಮೆಲುಕು ಹಾಕಿದರು ಎಂದು ಭಾರತಕ್ಕೆ ಅಮೆರಿಕದ ನೂತನ ರಾಯಭಾರಿ ತಿಳಿಸಿದರು.

## ಮೊಟ್ಟೆಕರಿ ಮಾಡಿಕೊಡದ ಪತ್ನಿ, ಆತ್ಮಹತ್ಯೆಗೆ ಶರಣಾದ ಪತಿ

**ಲಖ್ನೋ:** ಮೊಟ್ಟೆ ಕರಿ ಮಾಡಿಕೊಡದ ಹೆಂಡ್ತಿ ವರ್ತನೆಗೆ ಬೇಸತ್ತು ತಾನೇ ಮೊಟ್ಟ ಫ್ರೈ ತಯಾರಿಸಿದ್ದಕ್ಕೆ ಕುಪಿತಗೊಂಡ ಪತ್ನಿ ಬೀದಿಗಿಳಿದು ಜಗಳವಾಡಿದ್ದು, ನೊಂದ ಪತಿ ಮನೆಯಲ್ಲೇ ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡಿರುವ ಘಟನೆ ಉತ್ತರಪ್ರದೇಶದ ಬಾಂದಾ ಜಿಲ್ಲೆಯಲ್ಲಿ ನಡೆದಿದೆ.

ಶಾಂತಿನಗರ ಪ್ರದೇಶದ ನಿವಾಸಿ ಶುಭಂ(28) ಆತಹತ್ಯೆ ಮಾಡಿಕೊಂಡಿರುವ ಪತಿ. ಪೇಂಟಿಂಗ್ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಎಂದಿನಂತೆ ಕೆಲಸದಿಂದ ಹಿಂದಿರುಗಿದ ಶುಭಂ ಮನೆಗೆ ಚೌಮೈನ್ ತಂದಿದ್ದು, ಹೆಂಡತಿಗೆ ತಿನ್ನಲು ಹೇಳಿದ್ದ. ಜೊತೆಗೆ ಮೊಟ್ಟೆ ಪಲ್ಯ ಮಾಡಿಕೊಡುವಂತೆ ಕೇಳಿದ್ದು, ಪತ್ನಿ ಮುನ್ನಾದೇವಿ ಇದಕ್ಕೆ ನಿರಾಕರಿಸಿದ್ದರಿಂದ ತಾನೇ ಮೊಟ್ಟೆ ಕರಿ ತಯಾರಿಸಿದ್ದ. ಬಳಿಕ ಇಬ್ಬರು ನಡುವೆ ಜಗಳ ನಡೆದಿದೆ. ಇಬ್ಬರಲ್ಲಿ ಭಿನ್ನಾಭಿಪ್ರಾಯ ಉಲ್ಬಣಗೊಂಡು ತೀವ್ರ ವಾಗ್ವಾದಕ್ಕಿಳಿದ ಹೆಂಡತಿ ಬೀದಿಗಿಳಿದು ಏರುಧ್ವನಿಯಲ್ಲಿ ಜಗಳವಾಡಿದ್ದರಿಂದ ತನ್ನ ಮಗ ಶುಭಂ ನೊಂದು ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾನೆ ಎಂದು ಮೃತನ ತಾಯಿ ಮುನ್ನಾದೇವಿ ಪೊಲೀಸರಿಗೆ ತಿಳಿಸಿದ್ದಾರೆ. ತನ್ನ ಸೊಸೆ ಆಗಾಗ್ಗೆ ಜಗಳಗಳಕ್ಕೆ ಪ್ರಚೋದಿಸುತ್ತಿದ್ದಾಳೆ. ನನ್ನ ಮಗನಿಗೆ ಕಳೆದ ವರ್ಷ ಏಪ್ರಿಲ್‌ನಲ್ಲಷ್ಟೇ ಮದುವೆಯಾಗಿತ್ತು. ಇನ್ನೂ ಒಂದು ವರ್ಷ ಕಳೆದಿಲ್ಲ ಎಂದು ತಾಯಿ



ನೊಂದು ನುಡಿದಿದ್ದಾರೆ. ಶುಭಂ ಕೆಲವೊಮ್ಮೆ ಮದ್ಯ ಸೇವಿಸುತ್ತಿದ್ದರು, ಇದನ್ನು ಅವರ ಪತ್ನಿ ಬಲವಾಗಿ ವಿರೋಧಿಸುತ್ತಿದ್ದರು, ಇದು ಪದೇ ಪದೇ ಘರ್ಷಣೆಗೆ ಕಾರಣವಾಯಿತು ಎಂದು ತಿಳಿಸಿದ್ದಾರೆ.

ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಕೊತ್ವಾಲಿ ಪೊಲೀಸರು ಪರಿಶೀಲನೆ ನಡೆಸಿ ಶವವನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಆತಹತ್ಯೆಗೆ ಮೊದಲು ಕೌಟುಂಬಿಕ ಕಲಹ ನಡೆದಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ನಾವು ಕುಟುಂಬ ಸದಸ್ಯರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇವೆ. ಪ್ರಕರಣದ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಮಾವಿಸ್ ಟೌಕ್ ತಿಳಿಸಿದ್ದಾರೆ.

## ಯುದ್ಧಕ್ಕೂ ಸಿದ್ಧ, ಮಾತುಕತೆಗೂ ಬದ್ಧ: ಅಮೆರಿಕಕ್ಕೆ ಇರಾನ್ ಸ್ಪಷ್ಟ ಸಂದೇಶ

**ಟೆಹರಾನ್:** ನಾವು ಯುದ್ಧಕ್ಕೆ ತಯಾರಿದ್ದೇವೆ ಹಾಗೆಯೇ, ಮಾತುಕತೆ ನಡೆಸಲೂ ಸಿದ್ಧರಿದ್ದೇವೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರ್ಗಾಚಿ ಹೇಳಿದ್ದಾರೆ. ಪ್ರತಿಭಟನಾಕಾರರ ಮೇಲೆ ದಾಳಿ ಮಾಡಿದರೆ ಸೇನಾ ಕಾರ್ಯಾಚರಣೆ ಮೂಲಕ ಮಧ್ಯಪ್ರವೇಶಿಸುವುದಾಗಿ ಬೆದರಿಕೆ ಒಡ್ಡಿದ ಬೆನ್ನಲ್ಲೇ, ಇರಾನ್ ನಾಯಕತ್ವವು ಮಾತುಕತೆಗೆ ಮನವಿ ಮಾಡಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದರು. ಇದಕ್ಕೆ ಅಬ್ಬಾಸ್ ಪ್ರತಿಕ್ರಿಯಿಸಿದ್ದಾರೆ. ಇರಾನ್‌ನಲ್ಲಿ ಹಣದುಬ್ಬರ, ಏರುತ್ತಿರುವ ಜೀವನ ವೆಚ್ಚದ ವಿರುದ್ಧ ಎರಡು ವಾರಗಳಿಂದ ನಡೆಯುತ್ತಿರುವ ಪ್ರತಿಭಟನೆಯು ಹಿಂಸಾ ಸ್ವರೂಪ ಪಡೆದುಕೊಂಡಿದೆ.




ಇದುವರೆಗೆ 200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇದರಲ್ಲಿ, 40 ಮಂದಿ ಭದ್ರತಾ ಸಿಬ್ಬಂದಿ ಎನ್ನಲಾಗಿದೆ. ಅಂತರರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳು ಇರಾನ್‌ನಲ್ಲಿ ಹತ್ಯಾಕಾಂಡ ನಡೆಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದವು. ಈ ಕುರಿತು ಏರ್ ಫೋರ್ಸ್ ಒನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಟ್ರಂಪ್, ಇರಾನ್ ನಾಯಕರು ಕರೆ ಮಾಡಿದ್ದರು. ಸಭೆಗೆ ಸಿದ್ಧತೆ ನಡೆಯುತ್ತಿದೆ ಎಂದು ತಿಳಿಸಿದ್ದರು. ಇದೀಗ ಅಬ್ಬಾಸ್ ನೀಡಿರುವ ಹೇಳಿಕೆ ಜಾಗತಿಕ ಶಾಂತಿಯ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿದೆ.

ದೇಶದಾದ್ಯಂತ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಆದರೆ, ಪ್ರತಿಭಟನೆಗಳು ಹಿಂಸಾಚಾರ ಹಾಗೂ ರಕ್ತಪಾತಕ್ಕೆ ತಿರುಗಿರುವುದು ಸಂಘರ್ಷದಲ್ಲಿ ಟ್ರಂಪ್ ಮಧ್ಯಪ್ರವೇಶಿಸಲು ನೆಪವಾಗಿದೆ ಎಂದಿದ್ದಾರೆ. ಹಾಗೆಯೇ, ಹಿಂಸಾಚಾರದ ವೇಳೆ ಎಷ್ಟು ಮಂದಿ ಮೃತಪಟ್ಟಿದ್ದಾರೆ ಎಂಬುದರ ಕುರಿತು ಅಬ್ಬಾಸ್ ಅವರು ಯಾವುದೇ ಸಾಕ್ಷ್ಯಗಳನ್ನು ಒದಗಿಸಿಲ್ಲ.

## ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಏಮ್ಸ್‌ಗೆ ದಾಖಲು

**ನವದೆಹಲಿ:** ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಇಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್)ಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 74 ವರ್ಷದ ಧನಕರ್ ಅವರನ್ನು ಎಂಆರ್‌ಐ ಸ್ಕ್ಯಾನ್‌ಗೆ ಒಳಪಡಿಸಲಾಗುವುದು ಎಂದು ವೈದ್ಯರು ತಿಳಿಸಿದ್ದಾರೆ.

ಜನವರಿ 10ರಂದು ಶೌಚಾಲಯಕ್ಕೆ ಹೋದಾಗ ಧನಕರ್ ಎರಡು ಸಲ ಪ್ರಜ್ಞಾಹೀನರಾಗಿದ್ದರು ಎಂದು ತಿಳಿದು ಬಂದಿದೆ. ತಪಾಸಣೆಗೆಂದು ಧನಕರ್ ಏಮ್ಸ್ ಆಸ್ಪತ್ರೆಗೆ ಹೋಗಿದ್ದರು. ಈ ವೇಳೆ ಆಸ್ಪತ್ರೆಗೆ ದಾಖಲಾಗುವಂತೆ ವೈದ್ಯರು ಸಲಹೆ ನೀಡಿದ್ದಾರೆ.



ಕಳೆದ ವರ್ಷ ಜುಲೈ 21ರಂದು ಆರೋಗ್ಯ ಕಾರಣ ನೀಡಿ ಧನಕರ್ ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದು ರಾಜಕೀಯ ವಲಯದಲ್ಲಿ ವಿವಾದ ಹಾಗೂ ಚರ್ಚೆಗೆ ಗ್ರಾಸವಾಗಿತ್ತು.

## ಕರೂರ್ ಕಾಲ್ತುಳಿತ ಪ್ರಕರಣ : ಸಿಬಿಐ ವಿಚಾರಣೆಗೆ ಹಾಜರಾದ ವಿಜಯ್

**ಚೆನ್ನೈ:** ತಮಿಳುನಾಡಿನ ಖ್ಯಾತ ನಟ ಕಮ್ ರಾಜಕಾರಣಿ ವಿಜಯ್ ಅವರು ಕರೂರ್‌ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ವಿಚಾರಣೆ ಎದುರಿಸಿದರು. ಸಿಬಿಐ ವಿಚಾರಣೆಗಾಗಿ ಟಿವಿಕೆ ಮುಖ್ಯಸ್ಥ ವಿಜಯ್ ಸೋಮವಾರ ದೆಹಲಿಗೆ ತೆರಳಿದ್ದಾರೆ, ಅವರ ಪಕ್ಷವು ತನ್ನ ಸ್ಥಾಪಕ ನಾಯಕನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ರಾಷ್ಟ್ರ ರಾಜಧಾನಿಯ ಪೊಲೀಸ್ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದೆ. ಅವರಿಗೆ ನೀಡಲಾದ ಸಮನ್ಸ್ ಅನುಸರಿಸಿ, ವಿಜಯ್ ಸಿಬಿಐ ಪ್ರಧಾನ ಕಚೇರಿಯಲ್ಲಿ ಅಧಿಕಾರಿಗಳ ಮುಂದೆ ವಿಚಾರಣೆ ಹಾಜರಾದರು. ಟಿವಿಕೆ ನಾಯಕ ಆಧವ್ ಅರ್ಜುನ ವಿಜಯ್‌ಜೊತೆ ಇದ್ದರು. ಜ. 6 ರಂದು, ಕರೂರ್ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ದೆಹಲಿಯ ಏಜೆನ್ಸಿ ಪ್ರಧಾನ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಿಬಿಐ ವಿಜಯ್ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ಈ ಪ್ರಕರಣದಲ್ಲಿ ಕೇಂದ್ರ ತನಿಖಾ ಸಂಸ್ಥೆ ತಮಿಳಗ ವೆಟ್ರಿ ಕಳಗಂನ ಹಲವಾರು ಪದಾಧಿಕಾರಿಗಳನ್ನು ಪ್ರಶ್ನಿಸಿದೆ.ಸುಪ್ರೀಂ ಕೋರ್ಟ್ ಆದೇಶದ ನಂತರ ಸಿಬಿಐ ಈ ಪ್ರಕರಣವನ್ನು ಎಸ್‌ಐಟಿಯಿಂದ ವಹಿಸಿಕೊಂಡಿದೆ, ಸೆಪ್ಟೆಂಬರ್ 27, 2025 ರಂದು ತಮಿಳುನಾಡಿನ ಕರೂರಿನಲ್ಲಿ ವಿಜಯ್ ಅವರು ಉದ್ದೇಶಿಸಿ ಮಾತನಾಡಿದ ರಾಜಕೀಯ ಸಭೆಯ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಂಬಂಧಿಸಿದ ಪುರಾವೆಗಳನ್ನು ತನಿಖಾ ಸಂಸ್ಥೆ ಸಂಗ್ರಹಿಸುತ್ತಿದೆ. ಈ ಘಟನೆಯಲ್ಲಿ 41 ಜನರು ಸಾವನ್ನಪ್ಪಿದರು ಮತ್ತು 60 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.



## ಭಾರತ-ಪಾಕ್ ಸೇರಿದಂತೆ 8 ಯುದ್ಧ ನಿಲ್ಲಿಸಿಯೂ ನೊಬೆಲ್ ಸಿಕ್ಕಿಲ್ಲ

**ವಾಷಿಂಗ್ಟನ್:** ಭಾರತ-ಪಾಕಿಸ್ತಾನ ಸೇರಿದಂತೆ ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಆದರೂ ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆ ಎಲ್ಲಾ ಯುದ್ಧಗಳನ್ನು ಇತ್ಯರ್ಥ ಗೊಳಿಸುವುದು ಅತ್ಯಂತ ಕಷ್ಟಕರವಾಗಿತ್ತು. ಭಾರತ-ಪಾಕಿಸ್ತಾನ ಯುದ್ಧ ಮುಂದುವರಿಸುವ ಇರಾದೆ ಯಲ್ಲಿದ್ದವು. ಅತ್ಯಂತ ಕಠಿಣ ಎಂಟು ಸಂಘರ್ಷಗಳನ್ನು ನಿಲ್ಲಿಸಿದ್ದೇನೆ. ಈ ಪೈಕಿ ಕೆಲವು ಯುದ್ಧ 30 ವರ್ಷಕ್ಕೂ ಅಧಿಕ ಕಾಲ ನಡೆಯುತ್ತಿತ್ತು ಎಂದಿದ್ದಾರೆ.


ಇದೇ ಸಂದರ್ಭದಲ್ಲಿ 2009ರಲ್ಲಿ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಿರುವುದನ್ನು ಟ್ರಂಪ್ ಟೀಕಿಸಿದ್ದಾರೆ. ಇದನ್ನು ನೆನಪಿಡಿ, ಬೇರೆ ಯಾರಿಂದಲೂ ಸಾಧ್ಯವಾಗದ್ದನ್ನು ನಾನು ಮಾಡಿದ್ದೇನೆ. ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಅದು ಬೇರೆ ಯಾರಿಂದಲೂ ಸಾಧ್ಯವಾಗಲಿಲ್ಲ. ಆದರೂ ನೊಬೆಲ್ ಶಾಂತಿ ಪ್ರಶಸ್ತಿ ದೊರಕಿಲ್ಲ. ಆದರೆ ಏನೂ ಮಾಡದೆಯೇ ಒಬಾಮ ಅವರಿಗೆ ಪ್ರಶಸ್ತಿ ದೊರಕಿತ್ತು. ಅದನ್ನೇಕೆ ಪಡೆದರು ಎಂದು ಸ್ವತಃ ಒಬಾಮ ಅವರಿಗೂ ಗೊತ್ತಿಲ್ಲ. ಆ ಪ್ರಶ್ನೆಗೆ ಉತ್ತರಿಸಲು ಅವರಿಂದ ಸಾಧ್ಯವಾಗಲಿಲ್ಲ ಎಂದಿದ್ದಾರೆ.

ಕಳೆದೊಂದು ವಾರದಲ್ಲಿ ಮೂರನೇ ಸಲ ಭಾರತ ಹಾಗೂ ಪಾಕಿಸ್ತಾನದ ನಡುವಣ ಯುದ್ಧ ಕೊನೆಗೊಳಿಸಿದ್ದೇನೆ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ಒಟ್ಟಾರೆಯಾಗಿ ಸುಮಾರು 80 ಸಲ ಈ ಹೇಳಿಕೆಯನ್ನು ನೀಡಿದ್ದಾರೆ. ಆದರೆ ಮೂರನೇ ದೇಶದ ಮಧ್ಯಸ್ಥಿಕೆಯನ್ನು ಭಾರತ ನಿರಾಕರಿಸುತ್ತಲೇ ಬಂದಿದೆ.

## ಪಿಎಸ್‌ಎಲ್‌ವಿ-ಸಿ62 ಮಿಷನ್ 3ನೇ ಹಂತದಲ್ಲಿ ವಿಫಲ

**ನವದೆಹಲಿ:** ಭಾರತದ ವಿಶ್ವಾಸಾರ್ಹ ಕಾರ್ಯನಿರತ ರಾಕೆಟ್ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಉಡಾವಣೆಯಲ್ಲಿ ಇಸ್ರೋ ಮತ್ತೆ ಎಡವಿದೆ. ಪಿಎಸ್ ಎಲ್‌ವಿ ಸಿ -62 / ಇಒಎಸ್ ಎನ್1, ಬೆಳಿಗ್ಗೆ 10.18 ಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಯಾಯಿತು. ಆದರೆ, ಮೂರನೇ ಹಂತದಲ್ಲಿ ತಾಂತ್ರಿಕ ದೋಷ ಕಾರಣಿಸಿಕೊಂಡ ಹಿನ್ನೆಯಲ್ಲಿ ಉಡಾವಣೆ ಯಶಸ್ವಿಯಾಗಲಿಲ್ಲ ಎಂದು ಇಸ್ರೋ ತಿಳಿಸಿದೆ.

ಈ ಕಾರ್ಯಾಚರಣೆಯಲ್ಲಿ ಡಿಆರ್‌ಡಿಒ ಅಭಿವೃದ್ಧಿಪಡಿಸಿದ್ದ ಅನ್ವೇಷಾ ಸೇರಿದಂತೆ ಒಟ್ಟು 16 ಉಪಗ್ರಹಗಳನ್ನು ಉಡಾವಣೆ ಮಾಡಲಾಯಿತು.ಶ್ರೀಹರಿಕೋಟಾದಿಂದ ಅದ್ಭುತ ಉಡಾವಣೆಯ ಹೊರತಾಗಿಯೂ ಎಲ್ಲಾ 16 ಉಪಗ್ರಹಗಳು ಕಳೆದುಹೋದ ಕಾರಣ, ಇಸ್ರೋದ ಪಿಎಸ್‌ಎಲ್‌ವಿ ಸಿ-62 ಮಿಷನ್ ವಿಫಲವಾಗಿ ಭಾರತದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳು ದೊಡ್ಡ ಹಿನ್ನಡೆಯನ್ನು ಅನುಭವಿಸಿದೆ. 260 ಟನ್ ತೂಕದ ಪಿಎಸ್‌ಎಲ್‌ವಿ -ಡಿಎಲ್‌ರೂಪಾಂತರವು ಬೆಳಿಗ್ಗೆ 10:17 ಕ್ಕೆ ಆಕಾಶದೆತ್ತರಕ್ಕೆ ಹಾರಿತು, ಮೊದಲ ಎರಡು ಹಂತಗಳು ಮತ್ತು ಪ್ರತ್ಯೇಕತೆಯ ಮೂಲಕ ನಾಮಮಾತ್ರವಾಗಿ ಕಾರ್ಯನಿರ್ವಹಿಸಿತು, ದೇಶಾದ್ಯಂತ ವೀಕ್ಷಕರನ್ನು ಆಕರ್ಷಿಸಿತು. ಆದಾಗ್ಯೂ, ಮೂರನೇ ಹಂತದ ದಹನದ ನಂತರ ಕಾರ್ಯಾಚರಣೆ ನಿಯಂತ್ರಣವು ಮೌನವನ್ನು ಆವರಿಸಿತು, ಕಳೆದ ವರ್ಷದ ಪಿಎಸ್ ಎಲ್‌ವಿ ಸಿ-61 ಸೋಲಿನಂತೆಯೇ ಕಕ್ಷೆಯ ಅಳವಡಿಕೆ ವೈಫಲ್ಯವನ್ನು ದೃಢಪಡಿಸಿತು.



ಮೂರನೇ ಹಂತದ ಕೊನೆಯಲ್ಲಿ ವಾಹನದ ಕಾರ್ಯಕ್ಷಮತೆ ನಾಮಮಾತ್ರವಾಗಿತ್ತು, ನಂತರ ರೋಲ್ ದರಗಳಲ್ಲಿ ಅಡಚಣೆ ಮತ್ತು ಹಾರಾಟದ ಮಾರ್ಗದಲ್ಲಿ ವಿಚಲನ ಕಂಡುಬಂದಿದೆ. ನಾವು ಡೇಟಾವನ್ನು ವಿಶ್ಲೇಷಿಸುತ್ತಿದ್ದೇವೆ ಮತ್ತು ನಾವು ಹೆಚ್ಚಿನ ನವೀಕರಣಗಳೊಂದಿಗೆ ಹಿಂತಿರುಗುತ್ತೇವೆ ಎಂದು ಇಸ್ರೋ ಮುಖ್ಯಸ್ಥ ವಿ ನಾರಾಯಣನ್ ದೃಢಪಡಿಸಿದರು.

## ಮಗನಿಗೆ ಭಾರತೀಯ ಮೂಲದ ವಿಜ್ಞಾನಿಯ ಹೆಸರಿಟ್ಟ ಮಸ್ಕ್

**ವಾಷಿಂಗ್ಟನ್:** ಅಮೆರಿಕದ ವಿದ್ಯುತ್ ಚಾಲಿತ ಕಾರು ತಯಾರಕ ಕಂಪನಿ ಟೆಸ್ಲಾ ಮಾಲೀಕ, ಬಿಲಿಯನೆರ್ ಇಲಾನ್ ಮಸ್ಕ್ ತಮ್ಮ ಮಗನಿಗೆ ಭಾರತೀಯ ಮೂಲದ ವಿಜ್ಞಾನಿಯ ಹೆಸರನ್ನಿಟ್ಟಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಮಗನಿಗೆ ಸ್ಟ್ರೈಡರ್ ಶೇಖರ್ ಎಂದೂ ಮಗಳಿಗೆ ಕಾಮೆಟ್ ಅಜುರೆ ಎಂದು ನಾಮಕರಣ ಮಾಡಿದ್ದಾರೆ.

ಹೆಸರಿನ ಹಿಂದಿರುವ ಉದ್ದೇಶವನ್ನು ವಿವರಿಸಿರುವ ಮಸ್ಕ್, ಸ್ಟ್ರೈಡರ್ ಎನ್ನುವುದು ಜೆಆರ್‌ಆರ್ ಟೋಲ್ಕಿನ್ ಅವರ ದಿ ಲಾರ್ಡ್ ಆಫ್ ದಿ ರಿಂಗ್ಸ್ ಕಾದಂಬರಿಯ ಕಾಲ್ಪನಿಕ ಪಾತ್ರ ಅರಾಗೋರ್ನಿಂದ ಪ್ರೇರಿತವಾಗಿದೆ. ಶೇಖರ್ ಎನ್ನುವುದು, 1983ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಗೆದ್ದ ಭಾರತೀಯ-ಅಮೆರಿಕನ್ ಭೌತಶಾಸ್ತ್ರಜ್ಞ ಸುಬ್ರಹ್ಮಣ್ಯನ್ ಚಂದ್ರಶೇಖರ್ ಅವರಿಂದ ಪ್ರೇರಿತವಾಗಿದೆ ಎಂದಿದ್ದಾರೆ. ಮಗಳ ಹೆಸರಿನಲ್ಲಿರುವ ಕಾಮೆಟ್ ಅಜುರೆ ಎನ್ನುವುದು ಎಲ್ಡನ್ ರಿಂಗ್ ವಿಡಿಯೋ ಗೇಮ್‌ನಲ್ಲಿ ಅತ್ಯಂತ ಶಕ್ತಿಶಾಲಿ ಸಾಲುಗಳಾಗಿವೆ ಎಂದು ವಿವರಿಸಿದ್ದಾರೆ ಮಸ್ಕ್ ಪತ್ನಿ ಶಿವೋನಿ ಜಿಲಿಸ್ ಅವರ ತಾಯಿ ಭಾರತದ ಪಂಜಾಬ್‌ನ ಮೂಲದವರಾಗಿದ್ದು, ಅವರ ಹೆಸರು ಶಾರದಾ ಜೆಲಿಸ್ ಎಂದಾಗಿದೆ.

## ಡೀಪ್ ಫೇಕ್ ಚಿತ್ರ ರಚಿಸಿದ ಆರೋಪ: ಗ್ರೋಕ್ ಎಐ ನಿಷೇಧಿಸಿದ ಮಲೇಷ್ಯಾ, ಇಂಡೊನೇಷ್ಯಾ

**ಬ್ಯಾಂಕಾಕ್:** ಮಹಿಳೆಯರ ಅಸಭ್ಯ ಭಂಗಿಯ ಡೀಪ್‌ಫೇಕ್ ಚಿತ್ರಗಳನ್ನು ಸಿದ್ಧಪಡಿಸಿದ್ದಕ್ಕೆ ಜಾಗತಿಕ ಮಟ್ಟದಲ್ಲಿ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಇಲಾನ್ ಮಸ್ಕ್ ಒಡೆತನದ ಕೃತಕ ಬುದ್ಧಿಮತ್ತೆಯ ಚಾಟ್‌ಬಾಟ್ ಗ್ರೋಕ್‌ಗೆ ಇಂಡೊನೇಷ್ಯಾ, ಮಲೇಷ್ಯಾ ತಾತ್ಕಾಲಿಕ ನಿಷೇಧ ಹೇರಿದೆ ಮಹಿಳೆಯರ ಚಿತ್ರಗಳನ್ನು ಅವರ ಅನುಮತಿ ಇಲ್ಲದೆ ಅಸಭ್ಯವಾಗಿ ಸಿದ್ಧಪಡಿಸುವ ಗ್ರೋಕ್ ವಿರುದ್ಧ ಐರೋಪ್ಯ ರಾಷ್ಟ್ರಗಳು, ಭಾರತ, ಇಂಡೊನೇಷ್ಯಾ, ಮಲೇಷ್ಯಾದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಜತೆಗೆ ಕೃತಕ ಬುದ್ಧಿಮತ್ತೆ ಹಾಗೂ ಸಾಮಾಜಿಕ ಮಾಧ್ಯಮದ ಕುರಿತೇ ಪ್ರಶ್ನೆಗಳು ಮೂಡಿವೆ. ವೇರಿಫೈಡ್ ಬಳಕೆದಾರರಿಗೆ ಮಾತ್ರ ಈ ಸೌಲಭ್ಯವನ್ನು ಇತ್ತೀಚೆಗೆ ನೀಡಲಾಗಿತ್ತು.



ಆದರೆ ಈ ರೀತಿ ಡೀಪ್‌ಫೇಕ್ ಚಿತ್ರಗಳನ್ನು ಸಿದ್ಧಪಡಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದಕ್ಕೆ ಕಂಪನಿ ಯಾವುದೇ ಉತ್ತರವನ್ನು ನೀಡಿಲ್ಲ. ಇಂಥ ಡೀಪ್‌ಫೇಕ್ ಚಿತ್ರಗಳ ರಚನೆಗೆ ಯಾವುದೇ ನಿರ್ದಿಷ್ಟ ಸುರಕ್ಷತಾ ಮಾನದಂಡಗಳನ್ನು ಅಳವಡಿಸಲು ವಿಫಲ ಆದ್ದರಿಂದ ಇಲಾನ್ ಮಸ್ಕ್ ಒಡೆತನದ ಗ್ರೋಕ್‌ಗೆ ತಾತ್ಕಾಲಿಕ ನಿಷೇಧ ಹೇರಿರುವುದಾಗಿ ಮಲೇಷ್ಯಾದ ಸಂವಹನ, ಮಲ್ಟಿಮೀಡಿಯಾ ಆಯೋಗವು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹೇಳಿದೆ. ಇಂಥ ಸೌಲಭ್ಯಗಳನ್ನು ಗ್ರೋಕ್‌ನಲ್ಲಿ ನೀಡಿರುವುದರಿಂದ ಅಶ್ಲೀಲ ಚಿತ್ರಗಳ ತಯಾರಿಕೆಗೆ, ಲೈಂಗಿಕವಾಗಿ ದೌರ್ಜನ್ಯ ಎಸಗಲು, ಒಪ್ಪಿಗೆ ಇಲ್ಲದೆ ಒಬ್ಬರ ಚಿತ್ರಗಳನ್ನು ರಚಿಸುವುದು, ಮಹಿಳೆ, ಮಕ್ಕಳಿರುವ ಚಿತ್ರಗಳನ್ನು ರಚಿಸುವುದು ಸೇರಿದಂತೆ ಹಲವು ಕಾನೂನು ಉಲ್ಲಂಘಿಸಿದ ಪ್ರಕರಣಗಳು ಗ್ರೋಕ್‌ನಿಂದ ಆಗ ಬಹುದಾಗಿರುವುದರಿಂದ ತಾತ್ಕಾಲಿಕ ನಿಷೇಧ ಹೇರಲಾಗುತ್ತಿದೆ ಎಂದು ತಿಳಿಸಿದೆ. ಈ ಕುರಿತು ಜ. 3 ಹಾಗೂ ಜ. 8ರಂದು ಕಂಪನಿಗೆ ಮಲೇಷ್ಯಾ ಸರ್ಕಾರ ನೋಟಿಸ್ ಜಾರಿ ಮಾಡಿತ್ತು. ಇಂಡೊನೇಷ್ಯಾದಲ್ಲೂ ಗ್ರೋಕ್‌ಗೆ ತಾತ್ಕಾಲಿಕ ನಿಷೇಧ ಹೇರಲಾಗಿದೆ.

ಈ ಕುರಿತು ಇಂಡೊನೇಷ್ಯಾ ಸಂವಹನ, ಡಿಜಿಟಲ್ ಸಚಿವ ಮಾಹಿತಿನೀಡಿದ್ದು, ಡೀಪ್‌ಫೇಕ್ ಮೂಲಕ ಮಹಿಳೆಯರು, ಮಕ್ಕಳ ಅಶ್ಲೀಲ ಚಿತ್ರಗಳು ಇಂಥ ಎಡಿಟಿಂಗ್ ಟೂಲ್ ಮೂಲಕ ಸಿದ್ಧವಾಗುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ.

## ಮಿನಿ ನ್ಯೂಸ್

### ಸಬರಮತಿ ಆಶ್ರಮಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ, ಚಾನ್ಸೆಲರ್ ಮೆರ್ಜ್

**ಅಹಮದಾಬಾದ್:** ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಜರ್ಮನ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರೊಂದಿಗೆ ಅಹಮದಾಬಾದ್‌ನಲ್ಲಿರುವ ಸಬರಮತಿ ಆಶ್ರಮಕ್ಕೆ ಭೇಟಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಆಶೀರ್ವಾದ ಪಡೆದರು. ನಂತರ ಇಬ್ಬರು ನಾಯಕರು ಗಾಳಿಪಟ ಉತ್ಸವದಲ್ಲಿ ಪಾಲ್ಗೊಂಡು ಗಾಳಿಪಟ ಹಾರಿಸಿದರು. ಆಶ್ರಮಕ್ಕೆ ಆಗಮಿಸಿದ ನಂತರ, ಇಬ್ಬರೂ ನಾಯಕರು ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೆ ಪುಷ್ಪ ನಮನ ಸಲ್ಲಿಸಿದರು. ಮೆರ್ಜ್ ಅಲ್ಲಿನ ಸಂದರ್ಶಕರ ಪುಸ್ತಕದಲ್ಲಿ ಸಹಿ ಹಾಕಿದರು. ನಂತರ ಇಬ್ಬರೂ ನಾಯಕರು ಸಬರಮತಿ ನದಿ ದಂಡೆಯಲ್ಲಿ ನಡೆದ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವ 2026 ರಲ್ಲಿ ಭಾಗವಹಿಸಿದ್ದರು. ಗುಜರಾತ್‌ನ ಗೌರವಾನ್ವಿತ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ಇಬ್ಬರು ನಾಯಕರನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿ ಕೊಂಡರು. ಭಾರತ ಮತ್ತು ಜರ್ಮನಿ ಭಾರತ-ಜರ್ಮನಿ ರಾಜತಾಂತ್ರಿಕ ಸಂಬಂಧಗಳ 75 ವರ್ಷಗಳನ್ನು ಮತ್ತು ಭಾರತ-ಜರ್ಮನಿ ಕಾರ್ಯತಂತ್ರದ ಪಾಲುದಾರಿಕೆಯ 25 ವರ್ಷಗಳನ್ನು ಆಚರಿಸುತ್ತಿವೆ. ಈ ನಿಟ್ಟಿನಲ್ಲಿ ಮೆರ್ಜ್ ಭಾರತಕ್ಕೆ ಭೇಟಿ ನೀಡಿದ್ದಾರೆ.

### ಮದುವೆಯ ದಿನವೇ ರಸ್ತೆ ಅಪಘಾತದಲ್ಲಿ ವರ ಸಾವು

**ತಿರುವನಂತಪುರಂ:** ರಾಜ್ಯ ಸಾರಿಗೆ ಎಲೆಕ್ಟ್ರಿಕ್ ಬಸೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸೋಮವಾರ ಹಸೆಮಣೆ ಏರಬೇಕಿದ್ದ ವರ ಸಾವನ್ನಪ್ಪಿರುವ ಘಟನೆ ಸೋಮವಾರ ಮುಂಜಾನೆ ಶ್ರೀಕಾರ್ಯಂನಲ್ಲಿ ನಡೆದಿದೆ. ಮೃತನನ್ನು ಚೆಂಪಝುಂತಿ ಚೆಲ್ಲಮಂಗಲಂ ಮೂಲದ ರಾಗೇಶ್(28) ಎಂದು ಗುರುತಿಸಲಾಗಿದೆ. ಬೆಳಿಗ್ಗೆ ದೇವಸ್ಥಾನದಲ್ಲಿ ಮದುವೆ ನಡೆಯಬೇಕಿತ್ತು.ಪಂಗಪ್ಪರ ಮಂಗುಝಿನಿಂದ ಮುಂಜಾನೆ 1 ಗಂಟೆ ಸುಮಾರಿಗೆ ಕಣಿಯಾಪುರಂ ಡಿಪೋದಲ್ಲಿ ಚಾರ್ಜ್ ಮಾಡಿದ ನಂತರ ವಿಕಾಸ್ ಭವನ ಕಡೆಗೆ ಹೋಗುತ್ತಿದ್ದ ಸ್ವಿಫ್ಟ್ ಎಲೆಕ್ಟ್ರಿಕ್ ಬಸ್‌ಗೆ ಬೈಕ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದ ಕಾರಣವನ್ನು ಕಂಡುಹಿಡಿಯಲು ತನಿಖೆ ಪ್ರಾರಂಭಿಸಲಾಗಿದೆ, ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಶ್ರೀಕಾರ್ಯಂ ಪೊಲೀಸರು ತಿಳಿಸಿದ್ದಾರೆ.

ಕುಟುಂಬಗಳು ಈ ಸಂಬಂಧವನ್ನು ವಿರೋಧಿಸುತ್ತಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ. ನಂತರ ರಾಗೇಶ್ ಯುವತಿ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡು ನಂತರ ಉಪನೊಂದಾಣಿಕಾರಿ ಕಚೇರಿಯಲ್ಲಿ ವಿವಾಹ ನೋಂದಾಯಿಸಲು ನಿರ್ಧರಿಸಿದ್ದರು. ಈ ಉದ್ದೇಶಕ್ಕಾಗಿ ಅವರು ಚಾಂತವಿಲಾದಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆದಿದ್ದರು. ರಾಗೇಶ್ ಸಂಬಂಧಿಕರ ಮನೆಗೆ ಭೇಟಿ ನೀಡಿ ಮನೆಗೆ ಹಿಂತಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಅವರ ತಲೆಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಸಾವನ್ನಪ್ಪಿದರು ಎಂದು ಪೊಲೀಸರು ತಿಳಿಸಿದ್ದಾರೆ, ಡಿಕ್ಕಿಯಲ್ಲಿ ಬೈಕ್ ಸಂಪೂರ್ಣವಾಗಿ ಹಾನಿಗೊಳಗಾಗಿದೆ.ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

### ತನ್ನ ಸಮಾಧಿಯನ್ನು ತಾನೇ ನಿರ್ಮಿಸಿಕೊಂಡು ಪ್ರಾಣ ಬಿಟ್ಟ ವೃದ್ಧ

**ಹೈದರಾಬಾದ್:** ವೃದ್ಧರೊಬ್ಬರು ಸಾವಿಗೆ ಮುನ್ನವೇ ಸ್ವಂತ ಸಮಾಧಿ ನಿರ್ಮಿಸಿಕೊಂಡು ಈಗ ಪ್ರಣಬಿಟ್ಟಿರುವ ಘಟನೆ ತೆಲಂಗಾಣದಲ್ಲಿ ನಡೆದಿದೆ. ಲಕ್ಷ್ಮಿಪುರಂ ಗ್ರಾಮದ ನಿವಾಸಿ ನಕ್ಕ ಇಂದ್ರಯ್ಯಂಬುವವರು ಈ ಘಟನೆಯಿಂದ ಗಮನ ಸೆಳೆದಿದ್ದಾರೆ. ತಮ್ಮ ಮಕ್ಕಳು ದುಃಖದ ಸಮಯದಲ್ಲಿ ಯಾವುದೇ ಹೊರೆಯನ್ನು ಎದುರಿಸಬಾರದು ಎಂದು ಕಳೆದ 1 ವರ್ಷಗಳ ಮೊದಲೇ ತಮದೇ ಆದ ಸಮಾದಿ ನಿರ್ಮಿಸುವ ಕಾರ್ಯ ಆರಂಭಿಸಿ ಮುಗಿಸಿದ್ದರುನಿನ್ನು ಅಲ್ಲೇ ಪ್ರಾಣ ಬಿಟ್ಟಿದ್ದಾರೆ.



ತಮ್ಮ ಪತ್ನಿಯ ಸಮಾಧಿಯ ಪಕ್ಕದಲ್ಲಿ ತಮ್ಮದೇ ಆದ ಸಮಾಧಿಯನ್ನು ನಿರ್ಮಿಸಿಕೊಂಡ ಇಂದ್ರಯ್ಯ, ಜೀವನ, ಸಾವಿನ ಶಾಶ್ವತ ಸತ್ಯಗಳ ಕುರಿತು ಸಂದೇಶವನ್ನು ಕೆತ್ತಿದ ಫಲಕವನ್ನು ಸ್ಥಳದಲ್ಲಿ ಇರಿಸಿದ್ದಾರೆ. ಬದುಕಿದ್ದಾಗ ಪ್ರತಿ ದಿನ ಸ್ಥಳಕ್ಕೆ ಭೇಟಿ ನೀಡುವುದು, ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛಗೊಳಿಸುವುದು, ಸಸ್ಯಗಳಿಗೆ ನೀರು ಹಾಕುವುದು ಮತ್ತು ಧ್ಯಾನ ಮಾಡುವುದು ದಿನಚರಿಯಾಗಿತ್ತು. ಇಂದ್ರಯ್ಯ ಗ್ರಾಮದಲ್ಲಿ ಚರ್ಚ್ ಅನ್ನು ಸಹ ನಿರ್ಮಿಸಿದರು.ತಮ್ಮ ಸಂಪತ್ತನ್ನು ತಮ್ಮ ನಾಲ್ಕು ಮಕ್ಕಳಿಗೆ ಹಂಚಿದರು. ಅವರಿಗಾಗಿ ಮನೆಗಳನ್ನು ನಿರ್ಮಿಸಿದರು.

ಭಾನುವಾರ ಅವರ ನಿಧನದ ನಂತರ, ಇಂದ್ರಯ್ಯ ಅವರ ಅಂತಿಮ ಆಸೆ ಈಡೇರಿತು, ಅವರು ತಮ್ಮ ಕೈಗಳಿಂದ ಸಿದ್ಧಪಡಿಸಿದ ಸಮಾಧಿಯಲ್ಲಿ ಅವರನ್ನು ಸಮಾಧಿ ಮಾಡಲಾಯಿತು. ನಾನು ನಾಲ್ಕೈದು ಮನೆಗಳು, ಒಂದು ಶಾಲೆ. ಒಂದು ಚರ್ಚ್ ಅನ್ನು ನಿರ್ಮಿಸಿದ್ದೇನೆ ಮತ್ತು ಈಗ ನನ್ನ ಸ್ವಂತ ಸಮಾಧಿಯನ್ನು ನಿರ್ಮಿಸಿದ್ದೇನೆ. ನಾನು ತುಂಬಾ ಸಂತೋಷವಾಗಿದ್ದೇನೆ ಸಮಾಧಿಯನ್ನು ನಿರ್ಮಿಸುವ ಪ್ರಸ್ತಾಪವೇ ಅನೇಕರಿಗೆ ದುಃಖವನ್ನುಂಟುಮಾಡುತ್ತದೆ ಆದರೆ ನಾನು ಸಂತೋಷವಾಗಿದ್ದೇನೆ ಎಂದು ಇಂದ್ರಯ್ಯಹೇಳುತ್ತಿದ್ದರು ಎಂದು ಗ್ರಾಮಸ್ಥರು ಹೇಳಿದ್ದಾರೆ.

# ಗಿಗ್ ಕಾರ್ಮಿಕರ ನೋವು ಅರಿಯಲು ಅಖಾಡಕ್ಕೆ ಎಂಟ್ರಿ

## ಬ್ಲಿಂಕಿಟ್ ಟೀ ಶರ್ಟ್ ಮತ್ತು ಜಾಕೆಟ್ ಧರಿಸಿ ಡೆಲಿವರಿ ಬ್ಯಾಗ್ ತೊಟ್ಟು ಸೇವೆಗಿಳಿದ ಸಂಸದ ರಾಘವ್ ಚಡ್ಡಾ

**ಹೊಸದಿಲ್ಲಿ:** ಇತ್ತೀಚೆಗೆ ಗಿಗ್ ಕಾರ್ಮಿಕರು ಉತ್ತಮ ವೇತನ ದರ ಹಾಗೂ ಹತ್ತು ನಿಮಿಷದಲ್ಲಿ ಡೆಲಿವರಿ ಆಯ್ಕೆಯಂತಹ ಆಫರ್‌ಗಳನ್ನು ತೆಗೆದು ಹಾಕುವಂತೆ ಪ್ರತಿಭಟನೆ ನಡೆಸಿದ್ದರು. ಈ ಹೋರಾಟದಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗದ್ದರು. ಈ ಘಟನಾವಳಿಗಳ ಮಧ್ಯೆ, ಎಎಪಿಯ ಯುವ ನಾಯಕ ಮತ್ತು ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಅವರು ಅಖಾಡಕ್ಕೆ ಇಳಿದು ಜನಸಾಮಾನ್ಯರ ಬದುಕು ಗಿಗ್ ಕಾರ್ಮಿಕರ ಸಮಸ್ಯೆ ಅರಿಯಲು ಮುಂದಾಗಿದ್ದಾರೆ.

**ಬ್ಲಿಂಕಿಟ್ ಬಾಯ್ ಆದ ರಾಘವ್ ಚಡ್ಡಾ:** ರಾಘವ್ ಚೆಡ್ಡಾ ಅವರು, ಎಕ್ಸ್‌ನಲ್ಲಿ ಹಂಚಿಕೊಂಡಿರುವ ವಿಡಿಯೋದಲ್ಲಿ ಹೀಗಿದೆ, ಮೊದಲಿಗೆ ಬ್ಲಿಂಕಿಟ್ ಜಾಕೆಟ್ ಧರಿಸುವ ಅವರು, ಡೆಲಿವರಿ ರೈಡರ್ ಒಬ್ಬರಿಂದ ಬ್ಯಾಗ್ ಪಡೆದು, ಅವರ ಸ್ಕೂಟರ್‌ನ ಹಿಂಬದಿ ಕುಳಿತು ನಗರದಾದ್ಯಂತ ಸಂಚರಿಸಿದ್ದಾರೆ. ಸ್ಟೋರ್ ಒಂದಕ್ಕೆ ತೆರಳಿ ಆರ್ಡರ್ ಸಂಗ್ರಹಿಸಿ, ಬಳಿಕ ಗ್ರಾಹಕರ ಮನೆ ಇರುವ ಸ್ಥಳಕ್ಕೆ ತಲುಪುವುದು ಇದೆ. ಕೊನೆಗೆ ವಿಡಿಯೋದ ಅಂತ್ಯದಲ್ಲಿ, ಲಿಫ್ಟ್‌ನಿಂದ ಹೊರಬರುವ ಡೆಲಿವರಿ ರೈಡರ್ ಗ್ರಾಹಕರ ಮನೆಯ ಬೆಲ್ ಒತ್ತುತ್ತಾರೆ, ರಾಘವ್ ಚಡ್ಡಾ ಅವರನ್ನು ಅನುಸರಿಸುತ್ತಾರೆ. ಇಲ್ಲಿಗೆ ವಿಡಿಯೋ ನಿಲ್ಲಲಿದ್ದು, ಸ್ಟೇ ಟ್ಯೂನ್ಡ್ ಎಂಬ ಬರಹದೊಂದಿಗೆ ಕುತೂಹಲ ಮೂಡಿಸಲಾಗಿದೆ.ಗ್ರಾಹಕರ ಮನೆ ಬಾಗಿಲಿಗೆ ಹೋದಾಗ ಚಡ್ಡಾ ಅವರಿಗೆ ಎದುರಾದ ಪ್ರತಿಕ್ರಿಯೆಏನು ಎಂಬುದು ಮುಂದಿನ ವಿಡಿಯೋದಲ್ಲಿ ಬಹಿರಂಗವಾಗಲಿದೆ. ಬೋರ್ಡ್‌ರೂಮ್‌ಗಳಿಂದ ದೂರ ಉಳಿದು, ಗಿಗ್ ಕಾರ್ಮಿಕರು ನಿತ್ಯ ಅನುಭವಿಸುವ ನೋವು ಮತ್ತು ಅವರ ದಿನವನ್ನು ಬದುಕಿದ್ದೇನೆ ಎಂದು ಎಕ್ಸ್‌ನಲ್ಲಿ ಹಂಚಿಕೊಂಡಿರುವ ವಿಡಿಯೋಗೆ ಶೀರ್ಷಿಕೆ ಕೊಟ್ಟಿದ್ದಾರೆ. ಈ ಕ್ರಮವು ಕೇವಲ ಪ್ರಚಾರಕ್ಕಾಗಿ ಮಾತ್ರವಲ್ಲದೆ, ಗಿಗ್ ಕಾರ್ಮಿಕರ ಪರವಾಗಿ ಅವರು ನಡೆಸುತ್ತಿರುವ ಹೋರಾಟದ ಮುಂದುವರಿದ ಭಾಗವಾಗಿದೆ.

**ಗ್ರಾಹಕರ ಮನೆ ಬಾಗಿಲಿಗೆ ಆರ್ಡರ್**

ರಾಜ್ಯಸಭಾ ಸಂಸದ ರಾಘವ್ ಚಡ್ಡಾ ತಮ್ಮ ಎಕ್ಸ್ ಖಾತೆಯಲ್ಲಿ ವಿಡಿಯೋ ಹಂಚಿಕೊಂಡಿದ್ದು, ಬ್ಲಿಂಕಿಟ್ ಟೀ ಶರ್ಟ್ ಮತ್ತು ಜಾಕೆಟ್ ಧರಿಸಿ ವಸತಿ ಸಮುಚ್ಚಯಗಳು, ಲಿಫ್ಟ್‌ಗಳು ಮತ್ತು ಕಾರಿಡಾರ್‌ಗಳ ಮೂಲಕ ಸಾಗಿ ಗ್ರಾಹಕರ ಮನೆ ಬಾಗಿಲಿಗೆ ಆರ್ಡರ್‌ಗಳನ್ನು ತಲುಪಿಸಿದರು. ಟೀಸರ್‌ನಂತೆ ಬಿಡುಗಡೆ ಮಾಡಿರುವ ವಿಡಿಯೋದಲ್ಲಿ ಮುಂದುವರೆಯುವುದು ಎಂದು ಬರೆದುಕೊಳ್ಳಲಾಗಿದೆ. ಇದರ ಮುಂದಿನ ಭಾಗವು ಸಸ್ಪೆನ್ಸ್ ಏನೋ ಇದೆ ಎನ್ನುವುದು ತಿಳಿದು ಬರುತ್ತಿದೆ.




**ಸಂಪಾದನೆ ಹೆಚ್ಚು ಸಿಗೋದು ಕಡಿಮೆ**

ಕಳೆದ ತಿಂಗಳು ರಾಘವ್ ಚಡ್ಡಾ ಅವರು ಸ್ಕ್ರೀನ್‌ಶಾಟ್ ಒಂದನ್ನು ಹಂಚಿಕೊಂಡಿದ್ದರು. ಅದರಲ್ಲಿ ಹಿಮಾಂಶು ಎಂಬ ಬ್ಲಿಂಕಿಟ್ ಡೆಲಿವರಿ ಪಾರ್ಟ್‌ನರ್ ಸುಮಾರು 15 ಗಂಟೆಗಳ ಕಾಲ ದುಡಿದು 28 ಡೆಲಿವರಿಗಳನ್ನು ಪೂರೈಸಿದ ನಂತರ ಕೇವಲ 762.57 ರೂಪಾಯಿ ಗಳಿಸಿರುವುದು ಕಂಡುಬಂದಿತ್ತು. ಅಂದರೆ ಗಂಟೆಗೆ ಕೇವಲ 52 ರಷ್ಟು ಮಾತ್ರ ಆದಾಯ ಬಂದಿತ್ತು. ಇದರಲ್ಲಿ ಬಹುಪಾಲು ಆರ್ಡರ್ ಪೇಮೆಂಟ್ ಆಗಿದ್ದು, ಇನ್ಸೆಂಟಿವ್ ಮೊತ್ತ ತೀರಾ ಕಡಿಮೆಯಿತ್ತು ಎಂದು ಬರೆದುಕೊಂಡಿದ್ದರು. ಆ ಪೋಸ್ಟ್ ಭಾರಿ ವೈರಲ್ ಆಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ರಾಘವ್ ಚಡ್ಡಾ, ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಗಿಗ್ ಕಾರ್ಮಿಕರ ಕಡಿಮೆ ವೇತನ, ದೀರ್ಘ ಕೆಲಸದ ಅವಧಿ ಮತ್ತು ಸಾಮಾಜಿಕ ಭದ್ರತೆಯ ಕೊರತೆಯ ಬಗ್ಗೆ ಧ್ವನಿ ಎತ್ತಿದ್ದರು. ಅಷ್ಟೇ ಅಲ್ಲದೆ, ಥಪ್ಲಿಯಾಲ್ ಜಿ ಅವರನ್ನು ತಮ್ಮ ನಿವಾಸಕ್ಕೆ ಊಟಕ್ಕೆ ಆಹ್ವಾನಿಸಿ ಮಾತುಕತೆ ನಡೆಸಿದ್ದರು. ಈಗ ಸ್ವತಃ ಅವರ ಕೆಲಸವನ್ನು ಮಾಡುವ ಮೂಲಕ ಕಾರ್ಮಿಕರ ಸಂಕಷ್ಟಗಳನ್ನು ಸಂಸದರು ಅರ್ಥಮಾಡಿಕೊಳ್ಳಲು ಮುಂದಾಗಿದ್ದಾರೆ.



# ದಶಕದ ಹಿಂದಿನ ದಾಖಲೆ ಉಡೀಸ್; ನಾಲ್ಕು ಸಿನಿಮಾ ಹಿಂದಿಕ್ಕಿದ 'ಧುರಂಧರ್'

ಸಿನಿಮಾಗಳು ರಿಲೀಸ್ ಆದ ಮೊದಲ ವಾರ ಅಬ್ಬರಿಸಿ ನಂತರದ ವಾರಗಳಲ್ಲಿ ಮುಗ್ಗರಿಸುತ್ತವೆ. ಆದರೆ, 'ಧುರಂಧರ್' ಹಾಗಲ್ಲ. ರಿಲೀಸ್ ಆಗಿ ಆರು ವಾರ ಕಳೆದರೂ ಸಿನಿಮಾ ಮುನ್ನುಗ್ಗುತ್ತಿದೆ. ಈಗ ಈ ಚಿತ್ರ 10 ವರ್ಷಗಳ ಹಿಂದೆ ಬರೆದಿದ್ದ ದಾಖಲೆಯನ್ನು ಉಡೀಸ್ ಮಾಡಿದೆ. 'ಬಾಹುಬಲಿ 2' ಸಿನಿಮಾ 2016ರಲ್ಲಿ ರಿಲೀಸ್ ಆಗಿ ಸೂಪರ್ ಹಿಟ್ ಆಯಿತು. ಈ ಚಿತ್ರ ಬರೆದ ದಾಖಲೆ ಒಂದೆರಡಲ್ಲ. ಇದನ್ನು ಅಳಿಸಲು ಅನೇಕ ಸಿನಿಮಾಗಳ ಬಳಿ ಸಾಧ್ಯವೇ ಆಗಿಲ್ಲ. ಆದರೆ, ದಶಕಗಳ ಬಳಿಕ ಬಂದ 'ಧುರಂದರ್' ಸಿನಿಮಾ ಈ ದಾಖಲೆಗಳನ್ನು ಉಡೀಸ್ ಮಾಡುತ್ತಿದೆ.ಉತ್ತರ ಅಮೇರಿಕದಲ್ಲಿ 'ಬಾಹುಬಲಿ 2' ಚಿತ್ರವನ್ನು 20 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ ಮಾಡಿದ್ದರು. ಇದಾದ ಬಳಿಕ ಯಾವ ಭಾರತೀಯ ಸಿನಿಮಾಗೂ 20 ಲಕ್ಷಕ್ಕೂ ಹೆಚ್ಚು ಜನರು ಬಂದಿರಲಿಲ್ಲ. ಆದರೆ, 'ಧರುಂಧರ್ ಚಿತ್ರಕ್ಕೆ ಉತ್ತರ ಅಮೆರಿಕದಲ್ಲಿ 2 ಲಕ್ಷಕ್ಕೂ ಹೆಚ್ಚಿನ ಪ್ರೇಕ್ಷಕರ ಆಗಮನ ಆಗಿದೆ. ಈ ಮೂಲಕ ದಶಕದ ಹಿಂದಿನ ದಾಖಲೆ ಮುರಿದು ಬಿದ್ದಿದೆ.



# ಮಾದಕ ಸಾಂಗ್‌ಗೆ ಸೊಂಟ ಬಳುಕಿಸಿದ ಕೃತಿ ವರ್ಮಾ

**ಯುವ ಪ್ರತಿಭೆಗಳ ಕರಿಕಾಡ ಸಿನಿಮಾ**

ಕರಿಕಾಡ ಸಿನಿಮಾ ಟೈಟಲ್‌ನಿಂದಲೇ ಗಮನ ಸೆಳೆಯುತ್ತಿದೆ. ವಿಭಿನ್ನಾವಾದ ಕಥಾಹಂದರ. ಇದೊಂದು ಮ್ಯೂಸಿಕಲ್ ಜರ್ನಿಯ ಜೊತೆಗೆ ಅಡ್ವೆಂಚರಸ್ ಎಲಿಮೆಂಟ್ಸ್ ಇಟ್ಟುಕೊಂಡು ಮಾಡಿರುವ ಸಿನಿಮಾ. 3 ತಿಂಗಳ ಹಿಂದೆ ಟೈಟಲ್ ಟೀಸರ್ ರಿಲೀಸ್ ಮಾಡಿ ಕರಿಕಾಡ ಚಿತ್ರತಂಡ ಸದ್ದು ಮಾಡಿತ್ತು. ಇದೀಗ ರತುನಿ ರತುನಿ ಹಾಡಿನ ಮೂಲಕ ಗಮನ ಸೆಳೆದಿದೆ.

ಯುವ ಪ್ರತಿಭೆಗಳ ಕರಿಕಾಡ ಸಿನಿಮಾದ ಟೀಸರ್ ಹೊಸ ಭರವಸೆ ಹುಟ್ಟಿಸಿದೆ. ಸಾಹಸಮಯ ದೃಶ್ಯಕಾವ್ಯವಾಗಿ, ಪ್ರೇಮಕಥೆಯ ರೂಪಕವಾಗಿ, ನಮ್ಮ ಮಣ್ಣಿನ ಸೊಗಡನ್ನ ಸೂಸುವಂತಹ ಕಥಾಹಂದರ ಹೊಂದಿದೆ. ಇಷ್ಟೇ ಅಲ್ಲದೆ ಇದೊಂದು ರಿವೇಂಜ್ ಸ್ಟೋರಿಯಂತೆ ಎದ್ದು ಕಾಣುತ್ತಿದೆ. ಇಷ್ಟೇ ಅಲ್ಲದೇ ಸಿನಿಮಾ ಕಥೆಯ ಜೊತೆಗೆ ತಾಂತ್ರಿಕತೆಯಲ್ಲಿಯೂ ಗಮನ ಸೆಳೆದಿದೆ. ಈ ಸಿನಿಮಾದಲ್ಲಿ ಕಾಡ ನಟರಾಜ್ ನಾಯಕ ನಟನಾಗಿ ನಟಿಸಿದ್ದಾರೆ. ಇವರೊಂದಿಗೆ ಪ್ರಮುಖ ಪಾತ್ರದಲ್ಲಿ ಬಲರಾಜವಾಡಿ, ಯಶ್ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ತುಳು ಚಿತ್ರರಂಗದ ಚೆಲುವೆ ನಿರೀಕ್ಷಾ ಶೆಟ್ಟಿ ನಾಯಕಿಯಾಗಿದ್ದಾರೆ. ಉಳಿದಂತೆ ಈ ಸಿನಿಮಾದಲ್ಲಿ ಮಂಜು ಸ್ವಾಮಿ, ಗೋವಿಂದ ಗೌಡ , ದೀವಾಕರ್, ಕಾಮಿಡಿ ಕಿಲಾಡಿ ಸೂರ್ಯ, ದಿ.ರಾಕೇಶ್ ಪೂಜಾರಿ, ವಿಜಯ್ ಚಂಡೂರು, ಚಂದ್ರಪ್ರಭ, ಕರಿಸುಬ್ಬು, ಗಿರಿ, ಮಾಸ್ಟರ್ ಆರ್ಯನ್, ಬಾಲನಟಿ ರಿದ್ಧಿ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. ಇನ್ನು ಈ ಸಿನಿಮಾವನ್ನು ರಿದ್ಧಿ ಎಂಟರ್ಟೈನ್ಮೆಂಟ್ಸ್ ಬ್ಯಾನರ್‌ನಲ್ಲಿ ಕಾಡ ನಟರಾಜ್ ಅವರ ಪತ್ನಿ ದೀಪ್ತಿ ದಾಮೋದರ್ ನಿರ್ಮಾಣ ಮಾಡಿದ್ದಾರೆ. ಪತಿಯ ಕನಸಿನ ಈ ಸಿನಿಮಾ ಮೂಲಕ ಈಡೇರಿಸಿದ್ದಾರೆ. ಇನ್ನು ಇವರ ಕನಸಿಗೆ ಸ್ನೇಹಿತ ರವಿಕುಮಾರ್ ಎಸ್.ಆರ್ ಸಹ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. ಕರಿಕಾಡ ಸಿನಿಮಾವನ್ನು ಗಿಲ್ಲಿ ವೆಂಕಟೇಶ್ ನಿರ್ದೇಶನ ಮಾಡಿದ್ದಾರೆ. ಸಿನಿಮಾದ ಹೀರೋ ಕಾಡ ನಟರಾಜ ಅವರೇ ಸಿನಿಮಾಗೆ ಕಥೆ ಬರೆದಿದ್ದಾರೆ. ಅತೀಶಯ್ ಜೈನ್ ಹಾಗೂ ಶಶಾಂಕ್ ಶೇಷಾಗಿರಿ ಕಂಪೋಸ್ ಮಾಡಿದ್ದಾರೆ. ಶಶಾಂಕ್ ಶೇಷಾಗರಿ ಅವರು ರಾಗ ಸಂಯೋಜನೆ ಜೊತೆಗೆ ಜಬರ್ದಸ್ತ್ ಹಿನ್ನಲೆ ಸಂಗೀತವನ್ನ ನೀಡಿದ್ದಾರೆ. ಜೀವನ್ ಗೌಡ ಕೆಲಸ ಕ್ಯಾಮರಾವರ್ಕ್ ಇದ್ದರೆ, ದೀಪಕ್ ಸಿ.ಎಸ್ ಸಂಕಲನವಿದೆ.

# ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ 'ಜನ ನಾಯಗನ್' ಸಿನಿಮಾ ವಿವಾದ



ನಟ ದಳಪತಿ ಜಯ್ ಅವರ ಕೊನೇ ಸಿನಿಮಾ ಎಂಬ ಕಾರಣಕ್ಕೆ 'ಜನ ನಾಯಗನ್' ಮೇಲೆ ಅಭಿಮಾನಿಗಳು ನಿರೀಕ್ಷೆ ಇಟ್ಟುಕೊಂಡಿದ್ದರು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಜನವರಿ 9ರಂದು ಈ ಸಿನಿಮಾ ಬಿಡುಗಡೆ ಆಗಬೇಕಿತ್ತು. ಚಿತ್ರದ ಬಿಡುಗಡೆಗೆ ಸಕಲ ಸಿದ್ಧತೆ ನಡೆದಿತ್ತು. ಅಡ್ವಾನ್ಸ್ ಬುಕಿಂಗ್ ಕೂಡ ಶುರುವಾಗಿತ್ತು. ಆದರೆ ಅಂತಿಮ ಹಂತದಲ್ಲಿ 'ಜನ ನಾಯಗನ್' ಚಿತ್ರಕ್ಕೆ ಸೆನ್ಸಾರ್ ಸಮಸ್ಯೆ ಎದುರಾಯಿತು. ಸೆನ್ಸಾರ್ ಪ್ರಮಾಣಪತ್ರ ಸಿಗದ ಕಾರಣ ಚಿತ್ರದ ಬಿಡುಗಡೆಯನ್ನು ಮುಂದೂಡುವುದು ಅನಿವಾರ್ಯ ಆಯಿತು. ಈಗ ಈ ವಾದ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಜನ ನಾಯಗನ್ ಸಿನಿಮಾಗೆ ಸೆನ್ಸಾರ್ ಪ್ರಮಾಣಪತ್ರ ಸಿಗದೇ ಇರುವುದನ್ನು ಪ್ರಶ್ನಿಸಿ ನಿರ್ಮಾಪಕರು ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಚಾರಣೆ ನಡೆಸಿದ ಏಕ ಸದಸ್ಯ ಪೀಠವು ಪ್ರಮಾಣಪತ್ರ ನೀಡುವಂತೆ ಸೆನ್ಸಾರ್ ಮಂಡಳಿಗೆ ಆದೇಶ ನೀಡಿತ್ತು. ಆದರೆ ಕೆಲವೇ ಗಂಟೆಗಳ ಬಳಿಕ ಈ ಆದೇಶಕ್ಕೆ ಸ್ವತಃ ಮದ್ರಾಸ್ ಹೈಕೋರ್ಟ್ ತಡೆ ನೀಡಿತು.

ಈ ಅರ್ಜಿಯ ಸೂಕ್ತ ಚಾರಣೆ ನಡೆಯದೆಯೇ ಆದೇಶ ನೀಡಲಾಗಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತು. ಹಾಗಾಗಿ ಚಾರಣೆಯನ್ನು ಜನವರಿ 21ಕ್ಕೆ ಮುಂದೂಡಲಾಯಿತು. ಅಂದರೆ, ಅಲ್ಲಿಯ ತನಕ 'ಜನ ನಾಯಗನ್' ಸಿನಿಮಾದ ಬಿಡುಗಡೆಗೆ ಅವಕಾಶ ಇಲ್ಲದಂತಾಯಿತು. ಈಗ ನಿರ್ಮಾಪಕರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಮದ್ರಾಸ್ ಹೈಕೋರ್ಟ್ ತಡೆ ನೀಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.




# ನಿದ್ದೆಯಿಲ್ಲದ ಹಲವು ರಾತ್ರಿಗಳನ್ನು ಕಳೆದಿದ್ದೇನೆ: ದೇವರಕೊಂಡ

ಸಿನಿಮಾ ರಂಗಕ್ಕೆ ಕಾಡುತ್ತಿರುವ ದೊಡ್ಡ ಸಮಸ್ಯೆ ಎಂದರೆ ನಕಲಿ ವಿಮರ್ಶೆಗಳು. ಕಥೆ, ನಿರ್ದೇಶನ, ನಟನೆ ಮುಂತಾದ ಪ್ರತಿಯೊಂದು ಅಂಶವು ಸರಿಯಾಗಿದ್ದರೂ, ಕೆಲವರು ನಕಲಿ ವಿಮರ್ಶೆಗಳನ್ನು ನೀಡುತ್ತಾರೆ. ಇದು ಚಿತ್ರದ ಯಶಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.ಈ ಬಗ್ಗೆ ವಿಜಯ್ ದೇವರಕೊಂಡ ಮಾತನಾಡಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ವಿಮರ್ಶೆಗಳನ್ನು ಹಂಚಿಕೊಳ್ಳುವ ಮೂಲಕ ಚಿತ್ರಕ್ಕೆ ಹಿನ್ನಡೆ ಮಾಡಲಾಗುತ್ತದೆ. ಹಲವು ಸಿನಿಮಾಗಳು ಈ ರೀತಿ ಮಾಡದಂತೆ ಆದೇಶ ತಂದಿದೆ. ತೆಲುಗು ಸ್ಟಾರ್ ನಾಯಕ ವಿಜಯ್ ದೇವರಕೊಂಡ ಸಾಮಾಜಿಕ ಮಾಧ್ಯಮದಲ್ಲಿ ಇದಕ್ಕೆ ಪ್ರತಿಕ್ರಿಯಿಸಿದ್ದಾರೆ. ಈ ವಿಷಯವು ಅವರಿಗೆ ಸಂತೋಷವನ್ನು ನೀಡುತ್ತದೆಯಾದರೂ, ಇದು ಅವರಿಗೆ ಸ್ವಲ್ಪ ನೋವನ್ನು ನೀಡುತ್ತದೆ ಎಂದು ಅವರು ಹೇಳಿದರು. ಈ ವಿಷಯದ ಬಗ್ಗೆ ಅವರು ದೀರ್ಘವಾಗಿ ಬರೆದಿದ್ದಾರೆ. ಬುಕ್ ಮೈ ಶೋನಲ್ಲಿ ಇದನ್ನು ನೋಡುವುದು ಒಂದು ರೀತಿಯಲ್ಲಿ ಸಂತೋಷ ಮತ್ತು ಒಂದು ರೀತಿಯಲ್ಲಿ ದುಃಖಕರ ವಿಷಯ. ಈ ಕ್ರಿಯೆಯಿಂದ, ಅನೇಕ ಜನರು ತಮ್ಮ ಕಷ್ಟಗಳು, ಕನಸುಗಳು ಮತ್ತು ಹಣವನ್ನು ಉಳಿಸಲು ಒಂದು ಮಾರ್ಗವನ್ನು ಕಂಡುಕೊಂಡಿದ್ದಾರೆ. ದುಃಖಕರವೆಂದರೆ ನಮ್ಮದೇ ಜನರೇ ಇಂತಹ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ' ಎಂದಿದ್ದಾರೆ ಅವರು.



**ಟೀಸರ್‌ಗೆ ಎದುರಾಗಿದೆ ಟೀಕೆ**

# ಟೀಸರ್ ತಂದ ತಲ್ಲಣ ಶುರುವಾದ ಹೊಸ ಭೀತಿ



ರಾಕಿಂಗ್ ಸ್ಟಾರ್ ಯಶ್ ಅಭಿನಯದ ಟಾಕ್ಸಿಕ್ ಚಿತ್ರದ ಟೀಸರ್ ಬಿಡುಗಡೆಗೊಂಡಿತ್ತು. ಯಶ್ ಅವರ ಜನ್ಮದಿನದಂದು ಅಪ್ಲೋಡ್ ಆದ ಟೀಸರ್ ಇದುವರೆಗೆ 83 ಮಿಲಿಯನ್ ವೀವ್ಸ್ ಅನ್ನು ಪಡೆದುಕೊಂಡಿದೆ. ಟೀಸರ್ ವಿಡಿಯೋಗೆ ಕಾಮೆಂಟುಗಳೇ ಸುಮಾರು 86 ಸಾವಿರ ಬಂದಿದೆ. ಟೀಸರ್ ಬಿಡುಗಡೆಯ ನಂತರ, ಚಿತ್ರತಂಡಕ್ಕೆ ಹೊಸಹೊಸ ಸಮಸ್ಯೆಗಳು ಎದುರಾಗುತ್ತಿವೆ. ಟೀಸರ್ ಬಗ್ಗೆ ವಕೀಲರೊಬ್ಬರು ಆಕ್ಷೇಪವನ್ನು ವ್ಯಕ್ತ ಪಡಿಸಿದ್ದಾರೆ. ಟೀಸರ್'ನಲ್ಲಿ ಅತಿಯಾದ ವಯಸ್ಕರ ವಿಷಯಗಳಿವೆ ಎಂದು ಆರೋಪಿಸಲಾಗಿದೆ. ಟೀಸರ್‌ಗೆ ಎದುರಾಗುತ್ತಿರುವ ಟೀಕೆಯು, ಚಿತ್ರ ನಿರ್ಮಾಣ ಸಂಸ್ಥೆಗಳು ಇನ್ಮುಂದೆ ಹೊಸ ಪದ್ಧತಿಯನ್ನು ಫಾಲೋ ಮಾಡಬೇಕಾದ ಅನಿವಾರ್ಯತೆಗೆ ಬೀಳುತ್ತಾ ಎನ್ನುವ ಪ್ರಶ್ನೆ ಎದುರಾಗಿದೆ.

ಟಾಕ್ಸಿಕ್ ಟೀಸರ್'ನಲ್ಲಿರುವ ಹಸಿಬಿಸಿ ದೃಶ್ಯಗಳು ಸಾರ್ವಜನಿಕ ವಲಯದಲ್ಲಿ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಈ ಟೀಸರ್, ಡಿಜಿಟಲ್ ಪ್ಲಾಟ್'ಫಾರ್ಮ್ ನಲ್ಲಿ ಯಾವುದೇ ವಯಸ್ಸಿನ ನಿರ್ಬಂಧವಿಲ್ಲದೇ, ಸೆನ್ಸಾರ್ ಪ್ರಮಾಣಪತ್ರವಿಲ್ಲದೇ ಮುಕ್ತವಾಗಿ ಲಭ್ಯವಿದೆ. ಇದು ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತದೆ ಎಂದು ಲೋಹಿತ್ ಹನುಮಪುರ ಎನ್ನುವ ವಕೀಲರು, ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆದೂರು ನೀಡಿದ್ದಾರೆ.



# ಟೀಮ್ ಇಂಡಿಯಾಗೆ ಯುವ ಆಟಗಾರ ಎಂಟ್ರಿ

ನ್ಯೂಝಿಲೆಂಡ್ ವಿರುದ್ಧದ ಏಕದಿನ ಸರಣಿಯಿಂದ ಟೀಮ್ ಇಂಡಿಯಾ ಆಲ್ ರೌಂಡರ್ ವಾಷಿಂಗ್ಟನ್ ಸುಂದರ್ ಹೊರಬಿದ್ದಿದ್ದಾರೆ. ಅವರ ಬದಲಿಗೆ ಇದೀಗ ಯುವ ಆಲ್‌ರೌಂಡರ್ ಆಯುಷ್ ಬದೋನಿ ಅವರನ್ನು ಆಯ್ಕೆ ಮಾಡಲಾಗಿದೆ. ವಡೋದರಾದಲ್ಲಿ ನಡೆದ ಮೊದಲ ಏಕದಿನ ಪಂದ್ಯದ ವೇಳೆ ವಾಷಿಂಗ್ಟನ್ ಸುಂದರ್ ಅವರ ಪಕ್ಕೆಲುಬಿಗೆ ಗಾಯವಾಗಿತ್ತು. ಈ ಕಾರಣದ ಅವರಿಗೆ ವೈದ್ಯರು ವಿಶ್ರಾಂತಿ ಸೂಚಿಸಿದ್ದಾರೆ. ಹೀಗಾಗಿ ನ್ಯೂಝಿಲೆಂಡ್ ವಿರುದ್ಧದ ಮುಂದಿನ ಎರಡು ಪಂದ್ಯಗಳಲ್ಲಿ ಸುಂದರ್ ಕಾಣಿಸಿಕೊಳ್ಳುವುದಿಲ್ಲ,

ಅವರ ಸ್ಥಾನಕ್ಕೆ ಬಲಗೈ ಆಲ್ ರೌಂಡರ್ ಆಯುಷ್ ಬದೋನಿ ಆಯ್ಕೆಯಾಗಿದ್ದಾರೆ. ದೆಹಲಿ ಮೂಲದ ಬದೋನಿ ಇದೇ ಮೊದಲ ಬಾರಿಗೆ ಭಾರತ ತಂಡದಲ್ಲಿ ಸ್ಥಾನ ಪಡದಿದ್ದಾರೆ. ಅದರಂತೆ ರಾಜ್‌ಕೋಟ್ ಹಾಗೂ ಇಂದೋರ್‌ನಲ್ಲಿ ನಡೆಯಲಿರುವ ನ್ಯೂಝಿಲೆಂಡ್ ವಿರುದ್ಧ 2 ಪಂದ್ಯಗಳ ವೇಳೆ ಆಯುಷ್ ಬದೋನಿ ಟೀಮ್ ಇಂಡಿಯಾ ಜೊತೆ ಕಾಣಿಸಿಕೊಳ್ಳಲಿದ್ದಾರೆ. ಆಯುಷ್ ಬದೋನಿ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಈವರೆಗೆ 27 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 22 ಇನಿಂಗ್ಸ್ ಆಡಿರುವ ಅವರು 1 ಶತಕ ಹಾಗೂ 5 ಅರ್ಧಶತಕಗಳೊಂದಿಗೆ 693 ರನ್ ಕಲೆಹಾಕಿದ್ದಾರೆ. ಹಾಗೆಯೇ 18 ವಿಕೆಟ್‌ಗಳನ್ನು ಸಹ ಕಬಳಿಸಿದ್ದಾರೆ. ಇನ್ನು ಐಪಿಎಲ್‌ನಲ್ಲಿ ಲಕ್ನೋ ಸೂಪರ್ ಜೈಂಟ್ಸ್ ಪರ 56 ಪಂದ್ಯಗಳನ್ನಾಡಿರುವ ಅವರು ಒಟ್ಟು 6 ಅರ್ಧಶತಕಗಳೊಂದಿಗೆ 963 ರನ್‌ಗಳಿಸಿದ್ದಾರೆ. ಇದೀಗ ಚೊಚ್ಚಲ ಬಾರಿಗೆ ಟೀಮ್ ಇಂಡಿಯಾಗೆ ಎಂಟ್ರಿ ಕೊಟ್ಟಿದ್ದಾರೆ.

**ಭಾರತ ಏಕದಿನ ತಂಡ :** ಶುಭ್‌ಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆಎಲ್ ರಾಹುಲ್ (ವಿಕೆಟ್ ಕೀಪರ್), ಶ್ರೇಯಸ್ ಅಯ್ಯರ್, ರವೀಂದ್ರ ಜಡೇಜಾ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ, ಅರ್ಷದೀಪ್ ಸಿಂಗ್, ಕುಲ್ದೀಪ್ ಯಾದವ್, ನಿತೀಶ್ ಕುಮಾರ್ ರೆಡ್ಡಿ, ಯಶಸ್ವಿ ಜೈಸ್ವಾಲ್, ಧ್ರುವ್ ಜುರೆಲ್ (ವಿಕೆಟ್ ಕೀಪರ್), ಆಯುಷ್ ಬದೋನಿ.

# ಮುಂಬೈ ಮಣಿಸಿ ಸೆಮಿಫೈನಲ್‌ಗೆ ಎಂಟ್ರಿಕೊಟ್ಟ ಕರ್ನಾಟಕ



ಬೆಂಗಳೂರಿನಲ್ಲಿರುವ ಬಿಸಿಸಿಐ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ನಡೆದ ಮುಂಬೈ ಹಾಗೂ ಕರ್ನಾಟಕ ನಡುವಿನ ವಿಜಯ್ ಹಜಾರೆ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ವಿಜೆಡಿ ನಿಯಮದಡಿಯಲ್ಲಿ 55 ರನ್?ಗಳಿಂದ ಗೆದ್ದು ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡ 8 ವಿಕೆಟ್ ನಷ್ಟಕ್ಕೆ 254 ರನ್ ಕಲೆಹಾಕಿತು.

ಈ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ 1 ವಿಕೆಟ್ ನಷ್ಟಕ್ಕೆ 187 ರನ್ ಕಲೆಹಾಕಿತ್ತು. ಈ ವೇಳೆ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ ಕಾರಣ ವಿಜೆಡಿ ನಿಯಮದ ಪ್ರಕಾರ ಕರ್ನಾಟಕ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು.

**ಮುಂಬೈನ ಕಾಡಿದ ಸರ್ಫರಾಜ್, ಶ್ರೇಯಸ್ ಅಲಭ್ಯತೆ:** ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡಕ್ಕೆ ಸಾಧಾರಣ ಆರಂಭ ಸಿಕ್ಕಿತು. ಮೊದಲ ವಿಕೆಟ್‌ಗೆ ಆರಂಭಿಕರಾದ ಅಂಗ್‌ಕ್ರಿಶ್ ರಘುವಂಶಿ ಮತ್ತು ಇಶಾನ್ 36 ರನ್‌ಗಳ ಜೊತೆಯಾಟ ನೀಡಿದರು. ಇಶಾನ್ ವಿಕೆಟ್ ಪತನದೊಂದಿಗೆ ಈ ಜೊತೆಯಾಟ ಮುರಿದುಬಿತ್ತು. ಆ ನಂತರ ಬಂದ ಮುಶೀರ್ ಖಾನ್ ಕೂಡ 9 ರನ್‌ಗಳಿಗೆ ಇನ್ನಿಂಗ್ಸ್ ಮುಗಿಸಿದರು. ನಾಯಕ ಸಿದ್ದೇಶ್ 38 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಕ್ವಾರ್ಟರ್ ಫೈನಲ್‌ಗೂ ಮುನ್ನ ಅದ್ಭುತ ಫಾರ್ಮ್‌ನಲ್ಲಿದ್ದ ಸರ್ಫರಾಜ್ ಖಾನ್ ಇಂಜುರಿಗೊಳಗಾಗಿದ್ದು ತಂಡಕ್ಕೆ ದೊಡ್ಡ ಹೊಡೆತು ನೀಡಿತು. ಇದರ ಜೊತೆಗೆ ನಾಯಕ ಶ್ರೇಯಸ್ ಇಲ್ಲದಿರುವುದು ಕೂಡ ಮುಂಬೈ ತಂಡವನ್ನು ಹಿನ್ನಡೆಗೆ ತಳ್ಳಿತು. ಕೊನೆಯಲ್ಲಿ ತಂಡದ ಪರ ಏಕಾಂಗಿ ಹೋರಾಟ ನೀಡಿದ ಶಮ್ಸ್ ಮುಲಾನಿ ಅತ್ಯಧಿಕ 86 ರನ್‌ಗಳ ಇನ್ನಿಂಗ್ಸ್ ಆಡಿದರೆ, ಸಾಯಿರಾಜ್ ಪಾಟೀಲ್ ಕೂಡ 33 ರನ್‌ಗಳ ಕಾಣಿಕೆ ನೀಡಿದರು. ಇತ್ತ ಕರ್ನಾಟಕ ಪರ ಬೌಲಿಂಗ್‌ನಲ್ಲಿ ಮಿಂಚಿದ ವಿದ್ಯಾದರ್ ಪಾಟೀಲ್ 3 ವಿಕೆಟ್ ಪಡೆದರೆ, ವಿದ್ವತ್ ಹಾಗೂ ಅಭಿಲಾಶ್ ತಲಾ 2 ವಿಕೆಟ್ ಪಡೆದರು.

**ಕರ್ನಾಟಕಕ್ಕೆ ಪಡಿಕ್ಕಲ್, ಕರುಣ್ ಆಸರೆ:** ಈ ಗುರಿ ಬೆನ್ನಟ್ಟಿದ ಕರ್ನಾಟಕಕ್ಕೂ ಸಾಧಾರಣ ಆರಂಭ ಸಿಕ್ಕಿತು. ನಾಯಕ ಮಯಾಂಕ್ ಅಗರ್ವಾಲ್ 12 ರನ್ ಗಳಿಸಿ ಔಟಾಗುವುದರೊಂದಿಗೆ ಮೊದಲ ವಿಕೆಟ್ ಪತನವಾಯಿತು. ಇದಾದ ಬಳಿಕ ಜೊತೆಯಾದ ದೇವದತ್ ಪಡಿಕ್ಕಲ್ ಹಾಗೂ ಕರುಣ್ ನಾಯರ್ ಅಜೇಯ ಶತಕದ ಜೊತೆಯಾಟವನ್ನಾಡಿದರು. ಈ ಟೂರ್ನಿಯಲ್ಲಿ ಇದುವರೆಗೆ ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದ ಅನುಭವಿ ಕರುಣ್ ಅವಶ್ಯಕ ಸಮಯದಲ್ಲಿ ತಮ್ಮ ಹಳೆಯ ಲಯಕ್ಕೆ ಮರಳಿದರು. ಉಳಿದಂತೆ ದೇವದತ್ ತನ್ನ ಉತ್ತಮ ಫಾರ್ಮ್ ಮುಂದುವರೆಸಿ ಈ ಆವೃತ್ತಿಯಲ್ಲಿ 6ನೇ 50 ಪ್ಲಸ್ ಸ್ಕೋರ್ ಕಲೆಹಾಕಿದರು.

ಅನುಭವಿ ಕರುಣ್ ನಾಯರ್ ಕೂಡ ಪಡಿಕ್ಕಲ್ ಜೊತೆಗೆ ಅವಶ್ಯಕ ಇನ್ನಿಂಗ್ಸ್ ಕಟ್ಟಿದರು. ಈ ಜೋಡಿ ತಲಾ ಅರ್ಧಶತಕ ಬಾರಿಸಿದರು. ಮಳೆ ಬಂದು ಪಂದ್ಯ ನಿಲ್ಲುವುದಕ್ಕೂ ಮುನ್ನ ದೇವದತ್ ಪಡಿಕ್ಕಲ್ 95 ಎಸೆತಗಳಲ್ಲಿ 11 ಬೌಂಡರಿ ಸಹಿತ ಅಜೇಯ 81 ರನ್ ಬಾರಿಸಿದರೆ, ಇತ್ತ ಕರುಣ್ ನಾಯರ್ 80 ಎಸೆತಗಳಲ್ಲಿ 11 ಬೌಂಡರಿ ಸಹಿತ ಅಜೇಯ 75 ರನ್ ಬಾರಿಸಿದ್ದರು. ಇವರಿಬ್ಬರ ಜೊತೆಯಾಟದಿಂದಾಗಿ 254 ರನ್‌ಗಳ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ 33 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 187 ರನ್ ಕಲೆಹಾಕಿತ್ತು. ಆದರೆ ಈ ಹಂತದಲ್ಲಿ ಮಳೆ ಬಂದ ಕಾರಣ ಪಂದ್ಯವನ್ನು ನಿಲ್ಲಿಸಲಾಯಿತು. ಆ ಬಳಿಕ ವಿಜೆಡಿ ನಿಯಮದಡಿಯಲ್ಲಿ ಕರ್ನಾಟಕ ತಂಡವನ್ನು 55 ರನ್‌ಗಳಿಂದ ವಿಜಯಿ ಎಂದು ಘೋಷಿಸಲಾಯಿತು.

# ಕಿಂಗ್ ಕೊಹ್ಲಿಯ ದಾಖಲೆ ಮೇಲೆ ಕಣ್ಣಿಟ್ಟ ವೈಭವ್



ಟೀಮ್ ಇಂಡಿಯಾ ಅಂಡರ್-19 ವಿಶ್ವಕಪ್‌ಗಾಗಿ ಸಜ್ಜಾಗಿದೆ. ಜನವರಿ 15 ರಿಂದ ಶುರುವಾಗಲಿರುವ ಈ ಟೂರ್ನಿಗೂ ಮುನ್ನವೇ ವೈಭವ್ ಸೂರ್ಯವಂಶಿಯ ಅಬ್ಬರ ಆರಂಭವಾಗಲಿದೆ. ಸ್ಕಾಟ್ಲೆಂಡ್ ವಿರುದ್ಧ ನಡೆದ ಅಭ್ಯಾಸ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿರುವ ವೈಭವ್ ಕೇವಲ 50 ಎಸೆತಗಳಲ್ಲಿ 7 ಸಿಕ್ಸರ್‌ಗಳೊಂದಿಗೆ 96 ರನ್‌ಗಳಿಸಿದ್ದಾರೆ. ಇದೇ ಫಾರ್ಮ್ ಅನ್ನು ವಿಶ್ವಕಪ್‌ನ ಮೊದಲ ಪಂದ್ಯದಲ್ಲೂ ವೈಭವ್ ಸೂರ್ಯವಂಶಿ ಮುಂದುವರೆಸುವ ನಿರೀಕ್ಷೆಯಿದೆ. ಈ ನಿರೀಕ್ಷೆ ನಿಜವಾದರೆ ಹೊಸ ಇತಿಹಾಸ ನಿರ್ಮಾಣವಾಗುವುದು ಖಚಿತ. ಏಕೆಂದರೆ ಈ ಬಾರಿ ಅಂಡರ್-19 ವಿಶ್ವಕಪ್ ಮೂಲಕ ಹೊಸ ಇತಿಹಾಸ ನಿರ್ಮಿಸುವ ಅವಕಾಶ ವೈಭವ್ ಸೂರ್ಯವಂಶಿ ಮುಂದಿದೆ. ಅಂದರೆ ಅಂಡರ್-19 ಏಕದಿನ ಪಂದ್ಯಗಳಲ್ಲಿ ಟೀಮ್ ಇಂಡಿಯಾ ಪರ 1000+ ರನ್ ಕಲೆಹಾಕಿರುವುದು ಕೇವಲ ಇಬ್ಬರು ಮಾತ್ರ. ಇದೀಗ ಈ ಪಟ್ಟಿಗೆ ಎಂಟ್ರಿ ಕೊಡುವ ಹೊಸ್ತಿಲಲ್ಲಿದ್ದಾರೆ ವೈಭವ್ ಸೂರ್ಯವಂಶಿ. ಅದು ಕೂಡ ಕೇವಲ 27 ರನ್ ಕಲೆಹಾಕುವ ಮೂಲಕ ಎಂಬುದು ವಿಶೇಷ. ವೈಭವ್ ಸೂರ್ಯವಂಶಿ ಯುಎಸ್‌ಎ ವಿರುದ್ಧದ ಮೊದಲ ಪಂದ್ಯದಲ್ಲಿ 27 ರನ್?ಗಳಿಸಿದರೆ ಅಂಡರ್-19 ಏಕದಿನ ಪಂದ್ಯಗಳಲ್ಲಿ 1000 ರನ್ ಕಲೆಹಾಕಿದ ಮೂರನೇ ಬ್ಯಾಟರ್ ಎನಿಸಿಕೊಳ್ಳಲಿದ್ದಾರೆ. ಅಲ್ಲದೆ ಯೂತ್ ಒಡಿಐ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿಯ ದಾಖಲೆಯನ್ನು ಸಹ ಮುರಿಯಲಿದ್ದಾರೆ. ಅಂಡರ್-19 ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಕಲೆಹಾಕಿದ ಒಟ್ಟು ಸ್ಕೋರ್ 978 ರನ್‌ಗಳು. ಈ ದಾಖಲೆಯನ್ನು ಮುರಿಯಲು ವೈಭವ್‌ಗೆ ಬೇಕಿರುವುದು ಕೇವಲ 6 ರನ್ ಮಾತ್ರ. ಅಂದರೆ ಈ ಬಾರಿಯ ಅಂಡರ್-19 ಏಕದಿನ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ವೈಭವ್ ಸೂರ್ಯವಂಶಿ ಕಿಂಗ್ ಕೊಹ್ಲಿಯ ದಾಖಲೆ ಮುರಿಯುವುದನ್ನು ಎದುರು ನೋಡಬಹುದು.

ಹಾಗೆಯೇ ಅಂಡರ್-19 ಏಕದಿನ ಪಂದ್ಯಗಳಲ್ಲಿ 1149 ರನ್ ಕಲೆಹಾಕಿರುವ ಶುಭ್‌ಮನ್ ಗಿಲ್ ಅವರ ದಾಖಲೆಯನ್ನು ಸಹ ಮುರಿಯುವ ಅವಕಾಶ ವೈಭವ್ ಸೂರ್ಯವಂಶಿ ಮುಂದಿದೆ. ಇದಕ್ಕಾಗಿ ಅವರು ಒಟ್ಟು 177 ರನ್‌ಗಳಿಸಿದರೆ ಸಾಕು. ಈ ಮೂಲಕ ಅಂಡರ್-19 ಏಕದಿನ ಪಂದ್ಯಗಳಲ್ಲಿ ಅತ್ಯಧಿಕ ರನ್ ಗಳಿಸಿದ 2ನೇ ಭಾರತೀಯ ಎನಿಸಿಕೊಳ್ಳಬಹುದು.

ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವುದು ವಿಜಯ್ ಝೋಲ್. ಅಂಡರ್ -19 ಏಕದಿನ ಪಂದ್ಯಗಳಲ್ಲಿ ಬರೋಬ್ಬರಿ 1404 ರನ್ ಗಳಿಸುವ ಮೂಲಕ ಝೋಲ್ ಟೀಮ್ ಇಂಡಿಯಾ ಪರ ಯೂತ್ ಓಡಿಐ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್‌ಗಳಿಸಿದ ಭಾರತೀಯ ಬ್ಯಾಟರ್ ಎನಿಸಿಕೊಂಡಿದ್ದಾರೆ. ಈ ದಾಖಲೆ ಮುರಿಯಲು ವೈಭವ್ ಸೂರ್ಯವಂಶಿ ಈ ಬಾರಿಯ ಟೂರ್ನಿಯ ಮೂಲಕ ಬರೋಬ್ಬರಿ 432 ರನ್‌ಗಳನ್ನು ಕಲೆಹಾಕಬೇಕಿದೆ.

# ಬಾಂಗ್ಲಾ ಪಂದ್ಯಗಳ ಸ್ಥಳ ಬದಲಾವಣೆ; ಬಿಸಿಸಿಐ ಮಹತ್ವದ ನಿರ್ಧಾರ



**2026ರ ಟಿ20 ವಿಶ್ವಕಪ್**

2026 ರ ಟಿ20 ವಿಶ್ವಕಪ್ ವೇಳಾಪಟ್ಟಿ ಬದಲಾಗುವ ಸೂಚನೆಗಳು ಸಿಕ್ಕಿವೆ. ಬಾಂಗ್ಲಾದೇಶ ವೇಗಿ ಮುಸ್ತಾಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಕೈಬಿಟ್ಟ ಬಳಿಕ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಭಾರತದಲ್ಲಿ ಟಿ20 ವಿಶ್ವಕಪ್ ಆಡಲು ಹಿಂದೇಟು ಹಾಕುತ್ತಿದೆ. ವೇಳಾಪಟ್ಟಿಯ ಪ್ರಕಾರ, ಬಾಂಗ್ಲಾದೇಶದ ಪಂದ್ಯಗಳು ಕೋಲ್ಕತ್ತಾ ಮತ್ತು ಮುಂಬೈನಲ್ಲಿ ನಡೆಯಬೇಕಿತ್ತು. ಆದರೆ ಭದ್ರತೆಯ ದೃಷ್ಟಿಯಿಂದ ಬಾಂಗ್ಲಾದೇಶ ತನ್ನ ತಂಡವನ್ನು ಭಾರತಕ್ಕೆ ಕಳುಹಿಸದಿರಲು ನಿರ್ಧರಿಸಿದೆ. ಇದರ ಜೊತೆಗೆ ತನ್ನ ತಂಡದ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಬೇಕು ಎಂಬ ಬೇಡಿಕೆಯನ್ನು ಐಸಿಸಿ ಮುಂದಿಟ್ಟಿದೆ. ಆದರೆ ಐಸಿಸಿ ಹಾಗೂ ಬಿಸಿಸಿಐ ಮಾತ್ರ ಇದಕ್ಕೆ ಸಿದ್ಧವಿಲ್ಲ. ಆದಾಗ್ಯೂ, ಸಧ್ಯಕ್ಕೆ ಸಿಕ್ಕಿರುವ ಮಾಹಿತಿ ಪ್ರಕಾರ, ಬಾಂಗ್ಲಾದೇಶ ತಂಡದ ಪಂದ್ಯಗಳ ಸ್ಥಳಗಳನ್ನು ಭಾರತದಲ್ಲೇ ಬೇರೆಡೆಗೆ ಸ್ಥಳಾಂತರಿಸಲು ಬಿಸಿಸಿಐ ಚಿಂತಿಸಿದೆ.

**ಬಾಂಗ್ಲಾ ಪಂದ್ಯಗಳ ಸ್ಥಳ ಬದಲಾವಣೆ:** ಕ್ರಿಕ್‌ಬಜ್ ವರದಿಯ ಪ್ರಕಾರ, ಬಾಂಗ್ಲಾದೇಶದ ಪಂದ್ಯಗಳ ಸ್ಥಳವನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸುವ ಸಾಧ್ಯತೆ ಕಡಿಮೆಯದ್ದು, ದಕ್ಷಿಣ ಭಾರತದಲ್ಲಿ ಪಂದ್ಯಗಳನ್ನು ನಡೆಸುವ ಸಾಧ್ಯತೆ ಹೆಚ್ಚು ಎಂದು ವರದಿಯಾಗಿದೆ. ಇದರರ್ಥ ಬಾಂಗ್ಲಾದೇಶ ತಂಡದ ಪಂದ್ಯಗಳನ್ನು ಕೋಲ್ಕತ್ತಾ ಮತ್ತು ಮುಂಬೈ ಬದಲಿಗೆ ಚೆನ್ನೈ ಮತ್ತು ತಿರುವನಂತಪುರದಲ್ಲಿ ನಡೆಸಬಹುದು. ಮೇಲೆ ಹೇಳಿದಂತೆ ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆಯ ವಿರುದ್ಧದ ಪ್ರತಿಭಟನೆಗಳಿಗೆ ಪ್ರತಿಕ್ರಿಯೆಯಾಗಿ ಬಿಸಿಸಿಐ ಬಾಂಗ್ಲಾದೇಶದ ಆಟಗಾರ ಮುಸ್ತಾಫಿಜುರ್ ರೆಹಮಾನ್ ಅವರನ್ನು ಐಪಿಎಲ್‌ನಿಂದ ಹೊರಹಾಕಿತು. ಈ ಕ್ರಮಕ್ಕೆ ಪ್ರತಿಕ್ರಿಯೆಯಾಗಿ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು ಐಸಿಸಿಗೆ ಇಮೇಲ್ ಮಾಡಿ, ತನ್ನ ತಂಡದ 2026 ರ ಟಿ20 ವಿಶ್ವಕಪ್ ಪಂದ್ಯಗಳನ್ನು ಸ್ಥಳಾಂತರಿಸುವಂತೆ ಕೋರಿತು. ಅದರಂತೆ ಬಾಂಗ್ಲಾದೇಶದ ಪಂದ್ಯಗಳ ಸ್ಥಳಗಳನ್ನು ಬದಲಾವಣೆ ಮಾಡಲು ಬಿಸಿಸಿಐ ಮುಂದಾಗಿದೆ.

ಆದಾಗ್ಯೂ, ಬಿಸಿಸಿಐನ ಈ ನಿರ್ಧಾರವನ್ನು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ ಒತ್ತಾಯದಿಂದ ತೆಗೆದುಕೊಂಡಿದೆ ಎಂದು ಹೇಳುವುದು ಕಷ್ಟ. ಏಕೆಂದರೆ ಉತ್ತರ ಭಾರತದಲ್ಲಿ ಬಾಂಗ್ಲಾದೇಶದ ಪಂದ್ಯಗಳನ್ನು ಆಯೋಜಿಸುವುದು ಕಷ್ಟಕರ ಎಂಬುದನ್ನು ಅರಿತಿರುವ ಬಿಸಿಸಿಐ, ಅದರ ಪಂದ್ಯಗಳನ್ನು ದಕ್ಷಿಣ ಭಾರತಕ್ಕೆ ಸ್ಥಳಾಂತರಿಸಲು ನೋಡುತ್ತಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966